# ಶ್ರೀಸರ್ವಮೂಲ ಸಂದೇಶ

**ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ**
**ಹರಿಪಾದ ವಿನಮ್ರ ಧಿಯಾ ಸತತಂ ॥**

ಶ್ರೀಹರಿಯನ್ನು ನಿರಂತರ ಸ್ಮರಿಸುತ್ತಾ ನಿನಗೆ ವಿಹಿತವಾದ ಕರ್ಮವನ್ನು ಮಾಡು ಹಾಗೂ ಅದರ ಫಲವಾಗಿ ಶ್ರೀ ಹರಿಯು ನೀಡುವ ಸುಖ–ದುಃಖಾದಿಗಳನ್ನು ಅವನ ಪ್ರಸಾದವೆಂದು ಸ್ವೀಕರಿಸು.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

**ಸಂಪುಟ–8 ಸಂಚಿಕೆ–5 ವಿರೋಧಿ ಸಂ.॥ ಚೈತ್ರ–ವೈಶಾಖ ಮೇ 2009**

ಸಂಸ್ಥಾಪಕರು:

**ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು**

**ಶ್ರೀವಿದ್ಯಾಮಾನ್ಯ ಪ್ರಕಾಶನ**

ಶ್ರೀಮದ್ ಹೃಷೀಕೇಶತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)

ಶ್ರೀ ಪಲಿಮಾರು ಹೃಷೀಕೇಶಮಠ, ಉಡುಪಿ.

**www.palimarumatha.org**

**www.livepravachana.com**

**E-MAIL**

**sarvamoola@udupishripalimarumatha.org**

## ವಿಷಯಾನುಕ್ರಮಣಿಕೆ


| | | |
|---|---|---|
| **ಉದ್ಧವಗೀತೆ** | ಶ್ರೀವಿದ್ಯಾಧೀಶತೀರ್ಥರು | 1 |
| **ಗೀತಾಮೃತ** | ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು | 3 |
| **ವಿದುರನೀತಿ** | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 4 |
| **ತೈತ್ತರೀಯೋಪನಿಷತ್** | ವಿ॥ ಬನ್ನಂಜೆ ಗೋವಿಂದಾಚಾರ್ಯ | 6 |
| **ಹರಿಭಕ್ತಿಸಾರ** | ವಿ॥ ಹಯವದನ ಪುರಾಣಿಕ | 8 |
| **ಅವಲೋಕನ** | ಸಗ್ರಿ ರಾಘವೇಂದ್ರ ಉಪಾಧ್ಯಾಯ | 10 |
| **ಭಾರತಭಾವದರ್ಪಣ** | ವಿ॥ ರಾಮವಿಟ್ಠಲಾಚಾರ್ಯ | 12 |
| **ಕಠೋಪನಿಷತ್** | ಡಾ॥ ಎನ್. ವೆಂಕಟೇಶ್ ಆಚಾರ್ಯ | 16 |
| **ನಾರಾಯಣವರ್ಮ** | ವಿ॥ ಬೆ.ನಾ. ವಿಜಯೀಂದ್ರಾಚಾರ್ಯ | 18 |
| **ಜೀವನಯಜ್ಞ** | ಶ್ರೀ ಸುನಂದಕೀ | 20 |
| **ಮಾರ್ಕಂಡೇಯಪುರಾಣ** | ವಿ॥ ಅಡ್ವೆ ಲಕ್ಷ್ಮೀಶಾಚಾರ್ಯ | 23 |
| **ಹರಿಕಥಾಮೃತಸಾರ** | ವಿ॥ ಕೆ. ಅಪ್ಪಣ್ಣಾಚಾರ್ಯ | 25 |
| **ಮುಖಪುಟ ಲೇಖನ** | ಶ್ರೀ ಬಿ. ಶ್ರೀನಿವಾಸಭಟ್ | 27 |
| **ಜ್ಯೌತಿಷ ಚಿಂತನೆ** | ಶ್ರೀ ಶ್ರೀಪತಿ ಉಪಾಧ್ಯಾಯ, ಕುಂಭಾಸಿ | 29 |
| **ವಿಷ್ಣುಪುರಾಣ** | ಸ್ಫೂರ್ತಿ | 31 |
| **ಮಧ್ವ ಚರಿತ್ರೆ** | ವಿ॥ ಅನಂತಕೃಷ್ಣಾಚಾರ್ಯ | 33 |
| **ವಸಂತೋತ್ಸವ ಸೌರಭ** | ಸಗ್ರಿ ರಾಘವೇಂದ್ರ ಉಪಾಧ್ಯಾಯ | 35 |
| **....ವಿಷ್ಣೂದ್ರೇಕಾಯ ಕಥ್ಯತೇ** | ಸಗ್ರಿ ರಾಘವೇಂದ್ರ ಉಪಾಧ್ಯಾಯ | 38 |
| **ಮರಳಿ ಬಾ ಎಲೈ ವಸಂತ ಶಿಬಿರ** | ಶ್ರೀ ಕಾವೇಶನಾಭ | 43 |
| **ನೆನಪಿನ ಅಂಗಳ** | ವಿ॥ ಶಂಕರನಾರಾಯಣಾಚಾರ್ಯ | 49 |



**ಪ್ರಕಾಶಕರು**

ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**

ವಿ॥ಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ



**ಸಂಪಾದಕ ಮಂಡಳಿ:**

ವಿ॥ ಬಲರಾಮ ಭಟ್ಟ, ಉಡುಪಿ

ವಿ॥ ಮೋಹನಾಚಾರ್ಯ ಬೆಂಗಳೂರು

ವಿ॥ ಗಿರೀಶ ಉಪಾಧ್ಯಾಯ, ಕುತ್ಯಾರು

**ಸಲಹಾ ಮಂಡಳಿ**

ಶ್ರೀ ರಘುಪತಿ ತಂತ್ರಿ, ಬೆಂಗಳೂರು

ಶ್ರೀ ಲಕ್ಷ್ಮೀನಾರಾಯಣ ಶರ್ಮ ಉಡುಪಿ

ಶ್ರೀ ಹರ್ಷ ಬೆಂಗಳೂರು



ಮುಖಪುಟ ವಿನ್ಯಾಸ: ಕೆ. ಎಮ್. ಶೇಷಗಿರಿ ಬೆಂಗಳೂರು

ಅಕ್ಷರ ವಿನ್ಯಾಸ: ಸ್ವಾತಿ ಭಾಗವತ್ ಉಡುಪಿ

| | | | |
|---|---|---|---|
| **ಬಿಡಿ ಪ್ರತಿ** | **: ರೂ. 8.00** | **ವಾರ್ಷಿಕಚಂದಾ :** | ರೂ. 90.00 |
| **ಸದಸ್ಯರು** | : ರೂ. 2,250.00 | **15 ವರ್ಷಕ್ಕೆ** : | ರೂ. 1,250.00 |

**ಪೋಷಕರು :** ರೂ. 3,000.00


**ಅಯಾಯ ಲೇಖನಗಳಿಗೆ ಲೇಖಕರೇ ಜವಾಬ್ದಾರರು**

# ಉದ್ಧವಗೀತೆ

-ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು
ಶ್ರೀ ಪಲಿಮಾರು ಮಠ, ಉಡುಪಿ

**ವಿಸರ್ಗಾದ್ಯಾಃ ಸ್ಮಶಾನಾಂತಾಃ ಭಾವಾಃ ದೇಹಸ್ಯ ನಾತ್ಮನಃ**
**ಕಲಾನಾಂ ಇವ ಚಂದ್ರಸ್ಯ ಕಾಲೇನ ಅಲಕ್ಷ್ಯ ವರ್ತ್ಮನಃ**

ಅವಧೂತರ ಆರನೆಯ ಗುರು "ಚಂದ್ರಮಾಃ". ಅವಧೂತರಿಗೆ ಚಂದ್ರನು ಪಾಠ ಹೇಳಿದನೋ ಅಥವಾ ಅವಧೂತರೇ ಚಂದ್ರನಿಂದ ಪಾಠ ಕಲಿತರೋ? ಎರಡನೇ ಪಕ್ಷವೇ ಸರಿ. ಚಂದ್ರನು ಏನೂ ಹೇಳಿಲ್ಲ. ಹಾಗಾಗಿ ಚಂದ್ರ ಪಾಠ ಹೇಳಿದ್ದಲ್ಲ. ಚಂದ್ರನನ್ನು ನೋಡಿ ಅವಧೂತರು ಅಧ್ಯಯನ ಮಾಡಿದರು. ಅವಧೂತರು ಕಲಿತ ಪಾಠ ಅಧ್ಯಾತ್ಮದ ಅತ್ಯಂತ ತಿರುಳು. ಈ ಅಧ್ಯಯನ ಮಾಡದೆ ಇದ್ದವ ಅಧ್ಯಾತ್ಮದ ಪಾಠಶಾಲೆಗೆ ಪ್ರವೇಶಿಸಲಾರ. ದೇಹದ ಅನಿತ್ಯತೆ ಹಾಗೂ ಆತ್ಮನ ಶಾಶ್ವತತೆ ಅವಧೂತರು ಚಂದ್ರನಿಂದ ಕಲಿತ ಮಹಾ ವಿದ್ಯೆ.

ಚಂದ್ರನನ್ನು ನೋಡಿದರೆ ಎಲ್ಲರಿಗೂ ಆನಂದ. ಚಂದ್ರನ ದರ್ಶನಕ್ಕಾಗಿ ಕಾತರರಾದ ಚಾತಕಪಕ್ಷಿಗಳ ಸಂಖ್ಯೆ ಅದೆಷ್ಟೋ. ಚಂದ್ರ ಎಂಬ ಶಬ್ದಕ್ಕೆ ಆನಂದವನ್ನು ನೀಡುವವ ಎಂದೂ ಅರ್ಥವಿದೆ. "ಚದಿ ಆಹ್ಲಾದನೆ" ಈ ಕ್ರಿಯಾಪದವೇ ಚಂದ್ರ ಶಬ್ದದ ಮೂಲ. ಚಂದ್ರ ಶಬ್ದಕ್ಕೆ ಆಹ್ಲಾದ ಕೊಡುವವನು ಎಂಬುದು ಒಂದು ಅರ್ಥ. ಚಂದ್+ರ ಎಂದು ಇಟ್ಟುಕೊಂಡರೆ ಎರಡು ಅರ್ಥಗಳು ಈ ಶಬ್ದದಿಂದ ಹೊರಹೊಮ್ಮುತ್ತದೆ. ಚಂದ್ ಎಂಬುದಕ್ಕೆ ಮೊದಲು ತಿಳಿಸಿದಂತೆ ಆಹ್ಲಾದವನ್ನು ನೀಡುವವ ಎಂದು ಅರ್ಥ. ರ ಅಂದರೆ ಕ್ಷಯ ವುಳ್ಳವ, ದಿನದಿಂದ ದಿನಕ್ಕೆ ಕ್ಷೀಣಿಸುವವ ಎಂದು ಅರ್ಥ. "ರೀಞ್=ಕ್ಷಯೇ" ಎಂಬ ಕ್ರಿಯಾಪದವೇ ಮೂಲ. ಚಂದ್ರನಲ್ಲಿ ಎರಡು ಧರ್ಮಗಳಿವೆ. ಒಂದು ಆಹ್ಲಾದವನ್ನು ಉಂಟುಮಾಡುವ ಅದ್ಭುತಸೌಂದರ್ಯ. ಇನ್ನೊಂದು ದಿನನಿತ್ಯ ಕಳೆಗುಂದುವ, ಇನ್ನೊಬ್ಬರಿಗೆ ವ್ಯಥೆನೀಡುವ ಕ್ಷಯರೋಗ. ಇದು ಎರಡನ್ನು ಅಧ್ಯಯನ ಮಾಡಿದರು. ಎರಡನೆಯ ಧರ್ಮಕ್ಕೆ ಒತ್ತುಕೊಟ್ಟರು. ಚಂದ್ರ ಕಳೆಗುಂದುವವನು ಹೌದು. ಕಲಾಪೂರ್ಣನೂ ಹೌದು. ಒಂದು ಪಕ್ಷ ಇಡೀ ದಿನಕ್ಕೊಂದರಂತೆ ಕಲೆಯನ್ನು ಕಳಕೊಳ್ಳುತ್ತಾ ಒಂದು ದಿನ ಪೂರ್ಣ ಕಲಾಶೂನ್ಯನಾಗಿಬಿಡುತ್ತಾನೆ. ಮತ್ತೆ ಪುನಃ ದಿನಕ್ಕೊಂದು ಕಲೆಯಂತೆ ನಡೆಯುತ್ತಾ ಒಂದು ದಿನ ಕಲಾಪೂರ್ಣನಾಗಿ ಆಗಸದಲ್ಲಿ ರಾರಾಜಿಸುತ್ತಾನೆ. ಚಂದ್ರನಿಗೆ ಕಲೆಗಳು ಕಡಮೆಯಾಗುತ್ತಾ ಕಲಾಹೀನನಾದ ಊಹಿಸಲಾಗದ ಚಂದ್ರನನ್ನು ಕಾಣುತ್ತೇವೆ. ಸಕಲಕಲಾ ಸಹಿತನಾಗಿ ಪ್ರಕಾಶಮಾನನಾದ ಚಂದ್ರನನ್ನು ಕಾಣುತ್ತೇವೆ. ಚಂದ್ರ ಇರುತ್ತಾನೆ. ಕಲೆಗಳು ಹೋಗುತ್ತವೆ,

ಕಲೆಗಳು ಬರುತ್ತವೆ. ಈ ಉದಾಹರಣೆಯಿಂದ ಅವಧೂತರು ಶರೀರದ ನಶ್ವರತೆಯ ಜೊತೆಗೆ ಆತ್ಮನ ಶಾಶ್ವತತೆಯನ್ನು ಕಲಿತರು. ಕಲಿತರು ಅನ್ನುವುದಕ್ಕಿಂತ ಅವಧೂತರು ಕಲಿಸಿದರು ಎನ್ನುವುದು ಅತ್ಯಂತ ಸೂಕ್ತ. ಆತ್ಮನಿತ್ಯ ಶರೀರ ಅನಿತ್ಯ. ಶರೀರವನ್ನೇ ಆತ್ಮ ಎಂದು ಭ್ರಮಿಸಿ ಶರೀರ ನಾಶವಾದಾಗ ಆತ್ಮನೇ ಸತ್ತ ಎಂದು ಮರುಗುವುದುಂಟು. ಆದರೆ ಶರೀರ ಮಾತ್ರ ಜೀವನನ್ನು ಬಿಟ್ಟು ನಶಿಸುತ್ತದೆ ಹೊರತು ಆತ್ಮನಲ್ಲ ಶರೀರ ಬೇರೆ ಆತ್ಮ ಬೇರೆ. ಶರೀರ ಮತ್ತು ಆತ್ಮ ಒಂದೇ ಎನ್ನುವ ಭಾವನೆ ತಪ್ಪು. ನಮ್ಮ ಅನುಭವವೇ ಹಾಗಿದೆ. ಪ್ರತಿಯೊಬ್ಬನು "ನನ್ನ ಶರೀರ" ಎನ್ನುವುದಾಗಿಯೇ ವ್ಯವಹರಿಸುತ್ತಾನೆ. ನಾನೇ ಶರೀರ ಎನ್ನುವ ವ್ಯವಹಾರ ಎಲ್ಲಿಯೂ ಇಲ್ಲ. ಯಾವ ಭಾಷೆಯಲ್ಲಾದರೂ ಸರಿ. ಇದೇ ರೀತಿಯಾದ ಶಬ್ದಪ್ರಯೋಗವನ್ನು ಗಮನಿಸಬಹುದು. ಉದಾಹರಣೆಗೆ, ಇಂಗ್ಲಿಷ್‌ನಲ್ಲಿ "Mybody" ಹಿಂದಿಯಲ್ಲಿ मेरा शरीर् ಎಂಬುದಾಗಿಯೇ ಪ್ರಯೋಗಗಳಿವೆ. ಹಾಗಾಗಿ ಇದು ಅನುಭವದ ಹಿನ್ನಲೆಯಲ್ಲಿಯೇ ಬಂದ ಶಬ್ದಪ್ರಯೋಗಗಳು. ಇದೇ ಶರೀರ ಮತ್ತು ಆತ್ಮನ ಭೇದಕ್ಕೆ ಪ್ರಮಾಣ. ಆತ್ಮನು ಶರೀರ ಹೋದಾಗ ನಶಿಸುವುದಿಲ್ಲ. ಹಾಗಾಗಿ ಶರೀರ ಹೋದಾಗ ದುಃಖಕ್ಕೆ ಅವಕಾಶವಿಲ್ಲ. ಯಾಕೆಂದರೆ ಮತ್ತೆ ಶರೀರ ಹುಟ್ಟಿಬರುತ್ತದೆ. ಇದು ಚಂದ್ರನಿಂದ ಕಲಿತ ಪಾಠ. ಅಮಾವಾಸ್ಯೆ ಬಂದರೆ ಮತ್ತೆ ಶುಕ್ಲಪಕ್ಷ ಹುಣ್ಣಿಮೆ ಇದೆ ಎಂದೇ ಅರ್ಥ. ಚಂದ್ರನಿಗೆ ಕಲೆ ಕಾಲಿಯಾದರೆ ಚಂದ್ರನ ಕತೆ ಮುಗಿದಂತಲ್ಲ. ಮತ್ತೆ ಕಲೆಗಳು ಕೂಡಿಕೊಳ್ಳುತ್ತವೆ. ಕಾಲವೇ ಎಲ್ಲವನ್ನೂ ಕೂಡಿಸುತ್ತದೆ. ಹಾಗಾಗಿ ಸೃಷ್ಟಿಯಿಂದ ಪ್ರಾರಂಭಮಾಡಿ ಮಸಣದ ತನಕದ ಅವಸ್ಥೆಗಳು ದೇಹಕ್ಕೆ ಹೊರತು ಆತ್ಮನಿಗಲ್ಲ. ಚಂದ್ರನ ಕಲೆಗಳಿಗೆ ವೃದ್ಧಿ-ಹ್ರಾಸಗಳು ಹೊರತು ಚಂದ್ರನಿಗಲ್ಲ. ಚಂದ್ರ ಶಾಶ್ವತ ಹಾಗೇನೇ ಜೀವನ ಅವಸ್ಥೆ. ★

## ಪಲಿಮಾರಿನಲ್ಲಿ ನಡೆದ ವಸಂತೋತ್ಸವದಲ್ಲಿ ಪ್ರವಚನ ಸೇವೆಯನ್ನು ನಡೆಸಿದ ಮಹನೀಯರು

| | |
|---|---|
| ಶ್ರೀಮತಿ ಶ್ರೀ ಪೂರ್ಣಿಮಾ ಮತ್ತು ಸುಧೀಂದ್ರ | ಅಮೇರಿಕಾ |
| ಶ್ರೀಮತಿ ಶ್ರೀ ಸುಮನ್ ನಾಗೇಂದ್ರ | ಬೆಂಗಳೂರು |
| ಶ್ರೀಮತಿ ಶ್ರೀ ಪ್ರಹ್ಲಾದ್ ಪಂಕಜ | ಬೆಂಗಳೂರು |
| ಶ್ರೀಮತಿ ಜಯಂತಿ | ಬೆಂಗಳೂರು |
| ನ್ಯಾನೋ ಆರ್ಕ್ ಕಂಪನಿ | ಅಮೇರಿಕಾ |
| ಶ್ರೀಮತಿ ಸೀತಾಲಕ್ಷ್ಮೀ ಪಿ.ಎಸ್ | ಅಮೇರಿಕಾ |
| ಶ್ರೀ ನಾರಾಯಣ ಪಲಕೋಡೆ ವೆಂಕಟರಾಮನ್ | ಅಮೇರಿಕಾ |

# ಗೀತಾಮೃತ

-ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

ಅಭಿಮಾನ ಪರಿತ್ಯಾಗದ ವಿಷಯದಲ್ಲಿ ಬೃಹದಾರಣ್ಯಕೋಪನಿಷತ್‌ನಲ್ಲಿ ಯಾಜ್ಞವಲ್ಕ್ಯರು ತಮ್ಮ ಪ್ರಿಯ ಮಡದಿಯಾದ ಮೈತ್ರೇಯಿಗೆ ಮಾಡಿದ ಉಪದೇಶವನ್ನು ಶ್ರೀಕೃಷ್ಣನು ಅರ್ಜುನನಿಗೆ ವಿವರಿಸುತ್ತಾನೆ. ಯಾಜ್ಞವಲ್ಕ್ಯರು ಮೈತ್ರೇಯೀ ಮತ್ತು ಕಾತ್ಯಾಯಿನೀ ಎಂಬ ಇಬ್ಬರು ಭಾರ್ಯೆಯರಿಂದ ಕೂಡಿದವರಾಗಿ ಸ್ವಧರ್ಮಾನುಷ್ಠಾನನಿರತರಾಗಿ ಗೃಹಸ್ಥಾಶ್ರಮವನ್ನು ಚೆನ್ನಾಗಿ ಪರಿಪಾಲನೆ ಮಾಡುತ್ತಿರುತ್ತಾರೆ. ತನ್ನ ಕರ್ತವ್ಯಗಳು ಪೂರೈಸಿತು ಎಂಬ ತಿಳುವಳಿಕೆ ಬಂದು ಇನ್ನು ತಪಸ್ಸು ಮಾಡಬೇಕು ಎಂಬ ಉದ್ಧೇಶದಿಂದ ಅರಣ್ಯಕ್ಕೆ ಹೋಗಲು ಸನ್ನದ್ಧರಾಗುತ್ತಾರೆ. ಆ ಸಮಯದಲ್ಲಿ ಮಡದಿಯಾದ ಮೈತ್ರೇಯೀಯನ್ನು ಕರೆದು ನಿನಗೂ, ಕಾತ್ಯಾಯಿನಿಗೂ ನನ್ನಲ್ಲಿದ್ದ ಸಕಲ ದ್ರವ್ಯವನ್ನು ಸರಿಯಾದ ವಿಭಾಗ ಮಾಡಿ ನೀಡಿದ್ದೇನೆ. ನಾನು ತಪಸ್ಸಿಗಾಗಿ ಅರಣ್ಯಕ್ಕೆ ಹೋಗುತ್ತಿದ್ದೇನೆ. ನೀವು ಇನ್ನು ಮುಂದಿನ ಜೀವನವನ್ನು ಚೆನ್ನಾಗಿ ಕಳೆಯಿರಿ ಎಂದು ಹೇಳಿದಾಗ ಮೈತ್ರೇಯೀ ತನ್ನ ಪತಿಯನ್ನು ಕುರಿತು ಈ ರೀತಿ ಕೇಳುತ್ತಾಳೆ ಸ್ವಾಮಿ! ನೀನು ಕೊಟ್ಟ ದ್ರವ್ಯದಿಂದ ನಮಗೆ ಅಮೃತತ್ವ ಪ್ರಾಪ್ತಿಯಾಗುವುದೋ? ಎಂದು ಕೇಳಲು ಯಾಜ್ಞವಲ್ಕ್ಯರು ನಸುನಗುತ್ತಾ ಹುಚ್ಚಿ ಈ ನಶ್ವರದ್ರವ್ಯದಿಂದ ಅಮೃತತ್ವ ಸಿಗಲು ಸಾಧ್ಯವೇ ಇಲ್ಲ. ಅದರ ಆಸೆಯನ್ನು ಬಿಟ್ಟು ಬಿಡು ಎಂದು ಹೇಳಿದರು. ಇದನ್ನು ಕೇಳಿದ ಮೈತ್ರೇಯೀ ಅಮೃತತ್ವಕ್ಕೆ ಅಸಾಧನವಾದ ಈ ನಶ್ವರದ್ರವ್ಯವು ನನಗಾದರೂ ಯಾಕಾಗಿ? ಅಮೃತತ್ವ ಪ್ರಾಪ್ತಿಯಾಗುವ ಸಾಧನವನ್ನು ನನಗೆ ಉಪದೇಶಿಸಿರಿ ಎಂದು ಕೇಳಿದಳು. ಇದರಿಂದ ಸಂತುಷ್ಟರಾದ ಯಾಜ್ಞವಲ್ಕ್ಯರು ಪರತತ್ವ ಪ್ರಾಪ್ತಿಯಾಗುವ ಸಾಧನೋಪಾಯವನ್ನು ತಿಳಿಸುತ್ತಾರೆ. ಯಾವುದೇ ರೀತಿಯಾದ ಈ ವೈಷಯಿಕ ಪ್ರಪಂಚದ ವಸ್ತುಗಳಿಂದ ಭಗವಂತನನ್ನು ಸಾಕ್ಷಾತ್ಕರಿಸಲು ಸಾಧ್ಯವಾಗುವುದಿಲ್ಲ. ಅವನು ಎಲ್ಲವನ್ನು ಮೀರಿನಿಂತವನು. ಸಕಲ ವಸ್ತುಗಳಗಲ್ಲಿ ಅಭಿಮಾನ ಪರಿತ್ಯಾಗ ಮಾಡಿ ಸರ್ವಸ್ವಾಮಿಯಾದ ಆ ಭಗವಂತನ ವಿಷಯಗಳನ್ನು ಗುರುಮುಖದಿಂದ ಶ್ರವಣಮಾಡಿ, ಮನನ, ನಿಧಿಧ್ಯಾಸನದಿಂದ ಸಾಕ್ಷಾತ್ಕರಿಸಲು ಪ್ರಯತ್ನಿಸುವುದೇ ಮೋಕ್ಷಸಾಧನವಾದುದು. ನಾವು ಯಾವ ಪ್ರಾಪಂಚಿಕ ವಸ್ತುಗಳ ಮೇಲೆ ವಿಶ್ವಾಸವಿರಿಸಿದ್ದೇವೋ ಅವು ಯಾವುದೂ ನಮಗೆ ತಾರಕವಲ್ಲ. ಪರಮಾತ್ಮನೊಬ್ಬನೇ ನಮ್ಮನ್ನು ಉದ್ಧಾರ ಮಾಡತಕ್ಕವನು ಎಂದು

(19ನೇ ಪುಟದಲ್ಲಿ ...)

ಪ್ರವಚನ ಮಾಲಿಕೆ

ಭಾಗ–14

# ವಿದುರನೀತಿ

–ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರುಮಠ, ಬರಹಃ ಕೃಷ್ಣಾ

ವಿದಿತ್ವಾ ಷಟ್– ಆರನ್ನು ತಿಳಿದುಕೊಳ್ಳಬೇಕು. ರಾಜನಾದವನು ಮುಖ್ಯವಾಗಿ ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ, ಸಮಾಶ್ರಯಣ ಇವುಗಳನ್ನು ತಿಳಿದಿರಬೇಕು. ಇಲ್ಲಿ ರಾಜನೆಂದರೆ ಗೃಹಸ್ಥ. ಗೃಹಣಿಯೂ ರಾಜನಾಗಬಹುದು. ಯಾಕೆಂದರೆ ನಮ್ಮ ನಮ್ಮ ಮನೆಯಲ್ಲಿ ನಾವೇ ರಾಜರು ಅವನಿಗೆ ಮೊದಲು 'ಸಂಧಿ' ಆಗಬೇಕು. ರಾಜನಾದವನು ತಾನು ಯಾರ ಜೊತೆಯಲ್ಲಿ ಸಂಧಾನ ಅಥವಾ ಜಗಳ ಮಾಡಬೇಕು ಎಂದು ಮೊದಲು ಆಲೋಚನೆ ಮಾಡಬೇಕು. ತನಗಿಂತ ಬಲಿಷ್ಠ ರಾಜನಾದರೆ, ಅವನ ಜೊತೆ ಸಂಧಾನಕ್ಕೆ ತಾನು ಹೋಗಬೇಕು. ಧೃತರಾಷ್ಟ್ರ! ನಿನ್ನಕ್ಕಿಂತ ಭೀಮಸೇನ ಬಲಿಷ್ಠನೆಂದು ನಿನಗೆ ತಿಳಿದಿದೆ. ಒಂದು ಸಂದರ್ಭದಲ್ಲಿ ದುರ್ಯೋಧನನು ಇಡೀ ಜಗತ್ತಿನಲ್ಲಿ ಯಾರು ಬಲಿಷ್ಠರು ಎಂಬ ಪ್ರಶ್ನೆಗೆ ತನ್ನ ಹೆಸರನ್ನು ತೆಗೆಯದೆ, ಮೊದಲು ಭೀಮಸೇನ, ನಂತರದಲ್ಲಿ ಬಲಭದ್ರ, ಮದ್ರರಾಜ, ಕೀಚಕ ಎಂದು ಹೇಳಿ ಆ ಪಟ್ಟಿಯನ್ನು ನಿಲ್ಲಿಸಿದ. ಹೀಗಿರುವಾಗ ಪಾಂಡವರೊಡನೆ ಸಂಧಿ ಮಾಡಬೇಕು, ಎಂದು ವಿದುರನು ನುಡಿಯುತ್ತಾನೆ. ಇನ್ನು ಜಗಳ ಅಥವಾ ಯುದ್ಧ ಮಾಡುವುದಾದರೆ ಎಲ್ಲಿ, ಹೇಗೆ, ಯಾವಾಗ ಮಾಡಬೇಕೆಂದು ಸಮಯ ನೋಡಿ ಮಾಡುವುದು ರಾಜನ ಕರ್ತವ್ಯ. ಇದನ್ನು 'ವಿಗ್ರಹ' ಎಂದರು. ನಂತರದಲ್ಲಿ 'ಯಾನ' ಅಂದರೆ ಪ್ರಯಾಣ. ರಾಜನಿಗೆ ಪ್ರಜೆಗಳ ಅನುಕಂಪ, ಬೆಂಬಲ ಬರಬೇಕಾದರೆ ಅವನು ಪ್ರಯಾಣಕ್ಕೆ ಹೊರಡಬೇಕು. 'ಆಸನ' ಅಂದರೆ ಆದರ, ಆತಿಥ್ಯ. ರಾಜನಾದವನು ಇನ್ನೊಬ್ಬರ ಆತಿಥ್ಯವನ್ನು ನೇರವಾಗಿ ಸ್ವೀಕಾರ ಮಾಡದೆ ವಿಮರ್ಶೆಮಾಡಿ ತೆಗೆದುಕೊಳ್ಳಬೇಕು. ತನ್ನ ಊರಿನಲ್ಲಿ ಪ್ರಜೆಗಳು ದಂಗೆ ಎದ್ದಿದ್ದರೆ ಆ ಪ್ರಜೆಗಳಲ್ಲಿ ಭಿನ್ನಾಭಿಪ್ರಾಯ ಉಂಟು ಮಾಡಿ ಆ ದಂಗೆಯನ್ನು ಅಲ್ಲೇ ಅರಗಿಸುವ ಶಕ್ತಿ ರಾಜನಾದವನಿಗೆ ಬೇಕು. ರಾಜನಾದವನಿಗೆ, ತನ್ನ ಬದುಕುವಿಕೆಗೋಸ್ಕರ ತಲೆ ಬಾಗುವ ಪ್ರಸಂಗ ಬಂದರೆ, ಎದುರಿಗಿರುವವನು ಚಿಕ್ಕವನೋ ದೊಡ್ಡವನೋ ಎಂದು ವಿಚಾರ ಮಾಡದೆ ಅವನಿಗೆ ಶರಣಾಗಬೇಕು. ಈ ಸಂದರ್ಭದಲ್ಲಿ ಧೃತರಾಷ್ಟ್ರನು ಭೀಮಸೇನನನ ಮುಂದೆ ಶರಣಾದರೆ ಅವನಿಗೆ ಬದುಕಲು ಸಾಧ್ಯ ಎಂದು ವಿದುರನು ಬುದ್ಧಿಹೇಳುತ್ತಾನೆ.

ಸಪ್ತಹಿತ್ವಾ–ಏಳನ್ನು ತ್ಯಾಗ ಮಾಡಿ ಸುಖೀ ಆಗು. ಸ್ತ್ರೀ, ಅಕ್ಷ, ಕಿತವ, ವಾಕ್‌ಪಾರುಷ್ಯ, ದಂಡಪಾರುಷ್ಯ, ಅರ್ಥದೂಷಣ, ಮದ್ಯ. ಸ್ತ್ರೀಲಂಪಟತನ ಎನ್ನವುದು ರಾಜನಾದವನಿಗೆ ವರ್ಜ್ಯ. 'ಅಕ್ಷ' ಎಂದರೆ ಪಗಡೆ ಆಟ. ಜೂಜು ಇದ್ದರೆ ಮದ್ಯಪಾನ ಇದ್ದೇ ಇರುತ್ತದೆ. ಇವುಗಳಿಂದ ಕೂಡ ದೂರವಿರಬೇಕು. ಕಿತವ ಎಂದರೆ ಮೋಸ ಮಾಡುವಿಕೆ, ಕಠಿಣವಾದ ಮಾತಾಡುವಿಕೆ, ಕಠಿಣವಾದ ಶಿಕ್ಷೆ ಕೊಡುವಿಕೆ, ಅನ್ಯಾಯದಿಂದ ದುಡ್ಡು ಮಾಡುವಿಕೆ. ಈ ಏಳನ್ನು ರಾಜನಾದವನು ಪರಿತ್ಯಾಗ ಮಾಡಿದರೆ ಅವನಿಗೆ ಜೀವನದಲ್ಲಿ ಶಾಂತಿಯು ಸಹಜವಾಗಿ ಬರುತ್ತದೆ.

ಧೃತರಾಷ್ಟ್ರ! ಸತ್ತ ಮೇಲೆ ವ್ಯಕ್ತಿಗಳು ಎರಡು ರೀತಿಯಲ್ಲಿ ತನ್ನ ಪ್ರಯಾಣ ಮುಂದುವರಿಸುತ್ತಾರೆ. ಸೂರ್ಯಮಂಡಲವನ್ನು ಭೇದಿಸಿಕೊಂಡು ಊರ್ಧ್ವಲೋಕಕ್ಕೆ ಹೋಗತಕ್ಕಂತವರು ಇಬ್ಬರು. **'ಪರಿವ್ರಾಟ್ ಯೋಗ ಯುಕ್ತಃ ರಣೇ ಅಭಿಮುಖೇ ಹತಃ'** ಒಬ್ಬನು ಸನ್ಯಾಸಿ ಆಗಿದ್ದುಕೊಂಡು, ತಾನು ಒಳ್ಳೆಯ ಯೋಗಾನುಷ್ಠಾನ, ಆಸನ, ಪ್ರಾಣಾಯಾಮ, ಧ್ಯಾನ, ಧಾರಣೆ, ಪ್ರತ್ಯಾಹಾರ ಇವುಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡವನು ಯಮಲೋಕವನ್ನು ಕಾಣುವುದಿಲ್ಲ. ಇನ್ನೊಬ್ಬನು ಕ್ಷತ್ರಿಯನು. ಯಾರು ಯುದ್ಧದಲ್ಲಿ ಹೋರಾಡುತ್ತಾ ಸಾಯುತ್ತಾನೋ ಅವನೂ ಸ್ವರ್ಗಲೋಕಕ್ಕೆ ಹೋಗುವನು. ಕುರುಕ್ಷೇತ್ರದಲ್ಲಿ ಸತ್ತ ಹೆಣವನ್ನು ಅರ್ಜುನ ನೋಡುತ್ತಾ, ಇವುಗಳ ಮುಖಗಳಲ್ಲಿ ಜೀವ ಕಳೆ ಹೇಗೆ ಇದೆ ಎಂದು ಕೃಷ್ಣನಲ್ಲಿ ಪ್ರಶ್ನಿಸಿದನು. ತಮ್ಮ ಕರ್ತವ್ಯವನ್ನು ಮಾಡಿಕೊಂಡು ಸತ್ತ ಕಾರಣ ಅವರಲ್ಲಿ ಜೀವಕಳೆ ಇದೆ ಎಂದು ಕೃಷ್ಣನು ಉತ್ತರಿಸಿದನು. ಹಾಗಾದರೆ ತಮ್ಮ ಕರ್ತವ್ಯ ಮಾಡಿಕೊಂಡು ಜೀವನದಲ್ಲಿ ಬರುವ ಸಮಸ್ಯೆಯನ್ನು ಎದುರಿಸುವವನು ಸ್ವರ್ಗಲೋಕಕ್ಕೆ ಹೋಗುತ್ತಾನೆ ಎಂದು ಧೃತರಾಷ್ಟ್ರನ ಮೂಲಕ ವಿದುರ ತಿಳಿಸುತ್ತಾನೆ.

**ಏಕಂ ವಿಷರಸಃ ಹಂತಿ ಶಸ್ತ್ರೇಣ ಏಕಶ್ಚವಧ್ಯತೇ**
**ಸರಾಷ್ಟ್ರಂ ಸಪ್ರಜಂ ಹಂತಿ ರಾಜಾನಂ ಮಂತ್ರವಿಪ್ಲವಃ**

ದುರ್ಯೋಧನನನ್ನು ತಿದ್ದುವ ಬಗ್ಗೆ ಧೃತರಾಷ್ಟ್ರ, ವಿದುರರು ವಿಚಾರ ಮಾಡಿದರು. ಇಂತಹ ರಹಸ್ಯವಾದ ಕಿವಿಮಾತನ್ನು ಪೂರ್ತಿಯಾಗಿ ಧೃತರಾಷ್ಟ್ರನು ದುರ್ಯೋಧನನಲ್ಲಿ ಹೇಳಿದರೆ ಇಡೀ ರಾಷ್ಟ್ರಕ್ಕೆ ಬೆಂಕಿಬಿದ್ದಂತಾಗುತ್ತದೆ. ಹಿರಿಯರು ಒಂದು ಎಚ್ಚರಿಕೆ ಕೊಟ್ಟಿದ್ದಾರೆ. **'ಷಟ್‌ಕರ್ಣಂ ಭಿದ್ಯತೆ ಮಂತ್ರಃ'** 'ಮಂತ್ರ'– ರಹಸ್ಯವು ನಾಲ್ಕು ಕಿವಿಗಳಲ್ಲಿ ಇರಬೇಕಂತೆ.

(.......11ನೇ ಪುಟದಲ್ಲಿ)

ಉಪನಿಷತ್ ಚಿಂತನ

ಭಾಗ–31

# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ ಪ್ರವಚನ: ಬನ್ನಂಜೆ ಗೋವಿಂದಾಚಾರ್ಯ

ಸಾಮ ಎಂಬುದು ವರ್ಣಗಳ ಸಂಧಿಯಾದರೆ, ಸಂತಾನ ಎಂಬುದು ಪದಗಳ ಸಂಧಿ. ವರ್ಣಗಳಲ್ಲಿ ನಾಲ್ಕು ವಿಧ. ಪೂರ್ವವರ್ಣ ಹಾಗೂ ಉತ್ತರ ವರ್ಣ. ಸಾಮೀಪ್ಯ ಹಾಗೂ ಉಚ್ಚಾರ. ರಾಮ ಶಬ್ದವನ್ನು ಹೇಳಬೇಕಾದರೆ ರಾ ಎಂಬುದು ಪೂರ್ವವರ್ಣ. ಇದನ್ನು ಮೊದಲು ಹೇಳಬೇಕು. ಮ ಎಂಬುದು ಉತ್ತರ ವರ್ಣ. ಇದನ್ನು 'ರಾ' ದ ನಂತರ ಹೇಳಬೇಕು. 'ರಾ' ಇವತ್ತು ಹೇಳಿ 'ಮ'ಕಾರ ನಾಳೆ ಹೇಳಿದರೆ ಅದು ರಾಮ ಶಬ್ದ ಆಗಲು ಸಾಧ್ಯವಿಲ್ಲ. ಆದ್ದರಿಂದ ಸಾಮೀಪ್ಯ ಇರಬೇಕು. ರಾ ಹೇಳಿದ ತಕ್ಷಣ ಮ ಹೇಳಬೇಕು. ಇಂತಹ ಸಾಮೀಪ್ಯ ಬೇಕು. ಈ ಸಾಮೀಪ್ಯದ ಸಂಧಿಗೆ ಉಚ್ಚಾರ ಮುಖ್ಯ. ಇದು ಪೂರ್ತಿಯಾದಾಗ ವರ್ಣಗಳ ಸಂಧಿಯಾಗಿ ಸಾಮ ಎನಿಸಲ್ಪಡುತ್ತದೆ. ಸಾಮದ ನಾಲ್ಕು ರೂಪಗಳು ನಾರಾಯಣ ವಾಸುದೇವ, ನಾರಾಯಣ ಸಂಕರ್ಷಣ, ನಾರಾಯಣ ಪ್ರದ್ಯುಮ್ನ ಹಾಗೂ ನಾರಾಯಣ ಅನಿರುದ್ಧ ರೂಪಗಳು. ಪದಗಳ ಸಂಧಿಯೇ ಸಂತಾನ. ಇದನ್ನು ಪದಗಳ ಸಂಹಿತೆ ಎಂದು ಹೇಳುತ್ತಾರೆ. ಇದಕ್ಕೆ ನಾಲ್ಕು ಮುಖಗಳಿವೆ. ನಾಲ್ಕು ವೇದಗಳಲ್ಲಿಯೂ ಇದನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಋಗ್ವೇದದಲ್ಲಿ ಸಾಮಗಳ ಶಬ್ದಗಳು ಕೂಡಿ ಋಕ್ ಆಗುತ್ತದೆ. ಋಕ್‌ಗಳ ಸಂತಾನಕ್ಕೆ ಸೂಕ್ತ ಎಂದು ಹೆಸರು. ಸೂಕ್ತಗಳ ಕೂಡುವಿಕೆಯೇ ಅನುವಾಕ. ಅನುವಾಕದ ಸಂತಾನವೇ ಮಂಡಲ. ಇದಕ್ಕೆ ಇನ್ನೊಂದು ಮುಖ ಇದೆ. ಪದಗಳ ಸಂತಾನ ಋಕ್, ಋಕ್‌ನ ಸಂತಾನ ವರ್ಗ. ವರ್ಗದ ಸಂತಾನ ಅಧ್ಯಾಯ. ಅಧ್ಯಾಯಗಳ ಸಮುದಾಯವೇ ಅಷ್ಟಕ. ಯಜುರ್ವೇದದಲ್ಲಿಯೂ ಇದೇ ರೀತಿ ಸಂತಾನವನ್ನು ನಾಲ್ಕು ವಿಭಾಗ ಮಾಡಿದ್ದಾರೆ. ಯಜುರ್ವೇದದಲ್ಲಿ ಹಲವು ರೀತಿಯ ವಿಭಾಗಗಳಿವೆ. ಪದಗಳ ಸಂತಾನಕ್ಕೆ ಋಕ್‌ನ ಬದಲು ವಾಕ್ ಎಂದು ಹೇಳುತ್ತಾರೆ. ವಾಕ್‌ನ ಸಮುದಾಯ ಅನುವಾಕ. **ಇಷೇತ್ವೋರ್ಜೇತ್ವಾ...... ಪಶೂನ್‌ಪಾಹಿ** ಎಂಬಲ್ಲಿಗೆ ಒಂದು ಅನುವಾಕ ಮುಗಿಯುತ್ತದೆ. ಇಂಗ್ಲೀಷ್‌ನಲ್ಲಿ ಹೇಳುವದಾದರೆ ಅನುವಾಕವನ್ನು para ಎಂದು ಹೇಳಬಹುದು. **ಶಂ ನೋ ಮಿತ್ರಃ..... ಶಾಂತಿಃ ಶಾಂತಿಃ ಶಾಂತಿಃ ಎಂಬಲ್ಲಿಗೆ ಒಂದು ಅನುವಾಕ್. ಶೀಕ್ಷಾಂ ವ್ಯಾಖ್ಯಾಸ್ಯಾಮಃ.....ಶೀಕ್ಷಾಧ್ಯಾಯಃ** ಎಂಬುದು ಒಂದು ಅನುವಾಕ. ಈ ಅನುವಾಕದಲ್ಲಿ ಇಷ್ಟೇ ವಾಕ್ಯಗಳಿರಬೇಕೆಂದು ನಿಯಮ ಇಲ್ಲ. ಅನುವಾಕಿನ ಸಂತಾನ ಪ್ರಪಾತಕ. ಪ್ರಪಾತಕದ ಸಂತಾನ ಕಾಂಡ. ಸಾಮವೇದದಲ್ಲಿ ಪದಗಳ

ಸಂತಾನಕ್ಕೆ ಋಕ್ ಎಂದೂ ಋಕ್‌ನ ಸಂತಾನಕ್ಕೆ ಖಂಡ. ಖಂಡದ ಸಂತಾನಕ್ಕೆ ಅಧ್ಯಾಯ ಹಾಗೂ ಅಧ್ಯಾಯದ ಸಂತಾನಕ್ಕೆ ಕಾಂಡ ಎಂದು ಕರೆಯುತ್ತಾರೆ. ಅಥರ್ವವೇದದಲ್ಲಿ ಋಕ್, ಸೂಕ್ತ, ಅನುವಾಕ, ಕಾಂಡ ಎಂದು ನಾಲ್ಕು ವಿಭಾಗ ಮಾಡಿದ್ದಾರೆ. ಯಾವುದೇ ವೇದ ತೆಗೆದುಕೊಂಡರೂ ಈ ಸಂಹಿತೆಗೆ ನಾಲ್ಕು ಮುಖಗಳಿವೆ. ಇವುಗಳಿಗೆಲ್ಲ ನಾರಾಯಣ ವಾಸುದೇವ, ನಾರಾಯಣ ಸಂಕರ್ಷಣ, ನಾರಾಯಣ ಪ್ರದ್ಯುಮ್ನ ಹಾಗೂ ನಾರಾಯಣ ಅನಿರುದ್ಧ ರೂಪಗಳಿವೆ. ಇಲ್ಲಿಗೆ ಆಧ್ಯಾತ್ಮ ಆಳ ಮುಗಿಯಲಿಲ್ಲ.

ಪಂಚರೂಪದ ಪ್ರಾರ್ಥನೆ ನಂತರ ಬ್ರಹ್ಮನಿಗೆ ಹಾಗೂ ಮುಖ್ಯಪ್ರಾಣನಿಗೆ ಪ್ರಾರ್ಥನೆಯನ್ನು ಸಲ್ಲಿಸಿದ್ದಾರೆ. ಪಂಚಕೋಶಗಳ ವಿವರಣೆ ಮುಂದೆ ಇದ್ದ ಹಾಗೆ ಬ್ರಹ್ಮವಾಯುವಿನ ಪಂಚರೂಪಗಳ ವಿವರಣೆ ಸಹ ಇದೆ. ಬ್ರಹ್ಮ ವಾಯು ಸಹ ಈ ಉಪನಿಷತ್ತಿನಲ್ಲಿ ಪ್ರತಿಪಾದ್ಯರಾಗಿದ್ದಾರೆ ಹೌದು. ಇದಕ್ಕೆ ಒಂದು ಒಳ್ಳೆಯ ಗಮಕ ಭಾಗವತದಲ್ಲಿ ಸಿಗುತ್ತದೆ. 11ನೇ ಕಾಂಡದಲ್ಲಿ ಇದರ ವಿವರಣೆ ಇದೆ. ಇಡೀ ಬ್ರಹ್ಮಾಂಡವನ್ನು ಭಗವಂತ ಸೃಷ್ಟಿಸಿದ. ಸಕಲ ಪ್ರಾಣಿಪಕ್ಷಿಗಳನ್ನು ಸೃಷ್ಟಿಸಿದ ಅಲ್ಲದೆ ಅದರ ಜೊತೆಗೆ ಸಮಷ್ಟಿ ಜೀವನಾದ, ಜೀವರಲ್ಲಿ ಹಿರಿಯನಾದ ವಿರಾಡ್‌ಪುರುಷನನ್ನು (ಬ್ರಹ್ಮನನ್ನು) ಭಗವಂತನ ಸೃಷ್ಟಿಸಿದ. ಮುಖ್ಯಪ್ರಾಣನನ್ನು(ವಾಯು) ಸೃಷ್ಟಿಸಿದ. ನಂತರ ಘೋಷವನ್ನು ಅಂದರೆ ನಾದವನ್ನು ಸೃಷ್ಟಿಸಿದ. ನಾದ ಎಂದರೆ ಲಕ್ಷ್ಮೀ. ಲಕ್ಷ್ಮೀಯನ್ನು ಸೃಷ್ಟಿಸಿದ. ಬ್ರಹ್ಮ ಹಾಗೂ ವಾಯುವಿನ ಪತ್ನಿಯರಾದ ಸರಸ್ವತಿ, ಭಾರತಿಯರ್‍ನ್ನು ಸೃಷ್ಟಿಸಿದ. ಇವರನ್ನೆಲ್ಲ ಪಂಚಕೋಶಗಳಲ್ಲಿ ತುಂಬಿಸಿದ. ಇದರಲ್ಲಿ ಮನೋಮಯ ಎಂಬ ಪಂಚಕೋಶದ ಉಲ್ಲೇಖ ಬರುತ್ತದೆ. ಮನೋಮಯ ರೂಪವನ್ನು ವಿಷ್ಣು, ಬ್ರಹ್ಮ, ಪ್ರಾಣ, ಲಕ್ಷ್ಮೀ, ಸರಸ್ವತೀ, ಭಾರತೀ ರೂಪಗಳು ಧಾರಣ ಮಾಡುತ್ತವೆ. ಇಡೀ ಬ್ರಹ್ಮಾಂಡವೇ ಬ್ರಹ್ಮನಲ್ಲಿ ಅಡಗಿದೆ. ಬ್ರಹ್ಮತತ್ವವೇ ವಿಜ್ಞಾನಶಕ್ತಿ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಅವನು ಶತಾನಂದ ಎಂದು ಈ ಉಪನಿಷತ್ತಿನಲ್ಲೆ ಇದೆ. ಅವನು ಮನೋಮಯ ಹೌದು. ಅವನು ವಿಜ್ಞಾನಮಯ ಹೌದು. ಅವನು ಆನಂದಮಯನೂ ಹೌದು. ಮನೋಮಯ ಎಂದು ಹೇಳಿದರೆ ಎಲ್ಲವನ್ನು ಹೇಳಿದ ಹಾಗೆ ಆಗುತ್ತದೆ. ಹೊಸ್ತಿಲಲ್ಲಿ ದೀಪ ಇಟ್ಟರೆ ಹೇಗೆ ಎರಡೂ ಕೋಣೆಗಳಿಗೆ ದೀಪ ಹರಡುತ್ತದೋ ಹಾಗೆಯೇ ಪಂಚಕೋಶಗಳಲ್ಲಿ ಮಧ್ಯ ಇರತಕ್ಕ ಮನೋಮಯ ಹೇಳಿದರೆ ಎಲ್ಲವನ್ನು ಹೇಳಿದ ಹಾಗೆ ಇಲ್ಲಿ ಪಂಚಕೋಶದ ಸೂಕ್ಷ್ಮರೂಪವಾಗಿ ಮನೋಮಯ ಒಂದನ್ನು ಮಾತ್ರ ಹೇಳಿದ್ದರೆ, ಶೀಕ್ಷಾಶಾಸ್ತ್ರದ ಆರು ರೂಪಗಳಲ್ಲಿ ವರ್ಣಸ್ವರ ಬಲಂ ಮಾತ್ರ ಹೇಳುತ್ತದೆ. ಇವಿಷ್ಟನ್ನು ಹೇಳಿದರೆ ಎಲ್ಲವನ್ನು ಹೇಳಿದ ಹಾಗೆ. ಇವುಗಳಲ್ಲಿ ವಿಷ್ಣು, ಬ್ರಹ್ಮ ಹಾಗೂ ವಾಯುಗಳು ಅವರ ಪತ್ನಿ ಸಮೇತರಾಗಿ ತುಂಬಿಕೊಂಡಿದ್ದಾರೆ. **(ಸಶೇಷ)**

# ಶ್ರೀಹರಿಭಕ್ತಿಸಾರ

-ವಿ॥ ಹಯವದನ ಪುರಾಣಿಕ, ತಿರುಪತಿ

ಎಂಟು ಗೇಣಿನ ದೇಹ ರೋಮಗ
ಳೆಂಟು ಕೋಟಿಯು ಕೀಲ್ಗಳರವ
ತ್ತೆಂಟು ಮಾಂಸಗಳಿಂದ ಮಾಡಿದ ಮನೆಯ ಮನವೊಲಿದು ।
ನೆಂಟ ನೀನಿರ್ದಗಲಿದೊಡೆ ಒಳ
ಹೆಂಟೆಯಲಿ ಮುಚ್ಚುವರು ದೇಹದ
ಲುಂಟೆ ಫಲ ಪುರುಷಾರ್ಥ ರಕ್ಷಿಸು ನಮ್ಮನನವರತ ॥೬೬॥

ಈ ಮನುಷ್ಯ ಶರೀರ ಕೇವಲ ಎಂಟು ಗೇಣುದ್ದ. ಅದರಲ್ಲಿ ರೋಮಗಳು ಎಂಟುಕೋಟಿ. ಕೀಲುಗಳು ಅರವತ್ತೆಂಟು. ಮಾಂಸಗಳಿಂದ ಮಾಡಿದ ಈ ಮನೆಯನ್ನು, ಮನ ಒಲಿದು ಕೆಲಕಾಲ ನೆಂಟ ನೀನಿದ್ದು, ಅಗಲಿದರೆ ಒಡನೆ ಅದನ್ನು ಒಣ ಹೆಂಟೆಯಲ್ಲಿ ಮುಚ್ಚುತ್ತಾರೆ. ಅಂಥ ದೇಹದಲ್ಲಿ ಪುರುಷಾರ್ಥವೆನಿಸಬಲ್ಲ ಫಲವೇನಾದರೂ ಉಂಟೆ? ನಮ್ಮನ್ನು ಸದಾ ರಕ್ಷಿಸು.

## ಎಂಟುಗೇಣಿನ ದೇಹ

ಈ ಮನುಷ್ಯ ಶರೀರ ಆನೆಯಂತೆ ಭವ್ಯ ಶ್ರೀಮದ್ಗಾಂಭೀರ್ಯದಿಂದ ಮೆರೆಯುವ ಉನ್ನತ ಶರೀರವೇನಲ್ಲ. ಕೇವಲ ಎಂಟು ಗೇಣುದ್ದ. ಗಾತ್ರದಲ್ಲಿ ಆನೆಯ ಶರೀರ ಇದಕ್ಕಿಂತ ಎಷ್ಟೋ ಪಾಲು ಮೇಲು.

## ರೋಮಗಳೆಂಟು ಕೋಟಿಯು

ನೋಡಲು ಸುಂದರವಾಗಿದೆಯೆ? ಅದೂ ಇಲ್ಲ. ಎಂಟು ಕೋಟಿ ಅಸಹ್ಯವಾದ ರೋಮಗಳಿಂದ ಆವೃತವಾಗಿದೆ. ಇರುವ ಸೌಂದರ್ಯವನ್ನು ರೋಮಗಳು ಮರೆಮಾಡಿರುತ್ತವೆ.

## ಮಾಂಸಗಳಿಂದ ಮಾಡಿದ ಮನೆ

ಗಟ್ಟಿಯಾದ ಕಲ್ಲು ಕಬ್ಬಿಣ ಮರಗಳಿಂದ ಕಟ್ಟಿದ ಮನೆ ದೃಢವಾಗಿರುತ್ತದೆ. ಆದರೆ ಮಾನವ ಶರೀರ ಮಿದುವಾದ ಮಾಂಸಗಳಿಂದ ನಿರ್ಮಿತವಾದ ಮನೆ. ಆ ಮಾಂಸವೂ ನಾನಾ ಬಗೆಯ ರೋಗಗಳ ಆಕ್ರಮಣಕ್ಕೆ ತುತ್ತಾಗುವಂಥದ್ದು. ನೂರು ಕಾಲ ಬಾಳುವಂಥದ್ದು. ಅದಕ್ಕೆ ಮೂರು ದಿನದ ಬಾಳು ಎನ್ನುತ್ತಾರೆ. ಮರಣ ಬಂದಿತೆಂದರೆ ಮಾನವ ಶರೀರದಲ್ಲಿ

ಹುಲಿಯಂಥ ದಪ್ಪ ಚರ್ಮ ಸಿಗಲಾರದು. ಆನೆಯಂಥ ಅಮೂಲ್ಯ ದಂತ ಸಿಗದು. ಬರಿಯ ಮಾಂಸ, ಕ್ಷಣದಲ್ಲಿ ಕೊಳೆತು ನಾರುತ್ತದೆ. ಕಾಗೆ ನರಿನಾಯಿ ಹೆಗ್ಗಣಗಳಿಗೆ ಆಹಾರವಾಗುತ್ತದೆ.

**ನೆಂಟ ನೀನಿರ್ದು**

ಕೇವಲ ನನಗಾಗಿ ಒಲಿದು ನನ್ನ ಈ ಮನೆಯಲ್ಲಿ ನೀನು ನೆಲೆಸಿರುವೆ ಹೊರತು– ಇದು ನಿನ್ನ ವಾಸಕ್ಕೆ ಸರ್ವಥಾ ಯೋಗ್ಯವಲ್ಲ. ನೀನು ನಿನ್ನ ಚಿನ್ಮಯವಾದ ಮಹಾಲಕ್ಷ್ಮೀ ಸ್ವರೂಪವಾದ ದಿವ್ಯಧಾಮತ್ರಯದಲ್ಲಿ ಮೆರೆಯುವ ಚಿನ್ಮಯ ಮೂರ್ತಿ. ನನ್ನ ಮೇಲೆ ಕರುಣೆಯಿಂದಲೆ ಒಲಿದು ನೆಂಟನಾಗಿ ಆಪ್ತಬಂಧುವಾಗಿ ನನ್ನೊಂದಿಗೆ ನನ್ನ ಈ ಶರೀರದಲ್ಲಿ ನೆಲೆಸಿರುವೆ. ನಾನು ಹುಟ್ಟಿದಂದಿನಿಂದ ಇಂದಿನವರೆಗೂ ಒಂದು ಕ್ಷಣವಗಲದೇ ಇರುವೆ. ನೀನು ಅಗಲಿದರೆ.....

**ಅಗಲಿದೊಡೆ ಒಣ ಹೆಂಟೆಯಲಿ ಮುಚ್ಚುವರು**

ಶರೀರದಿಂದ ನೀನು ಅಗಲುವುದೇ ಜೀವನಿಗೆ ಮರಣ. ಏಕೆಂದರೆ ಜೀವನನ್ನು ತನ್ನ ಜೊತೆಗೆ ಸೆಳೆದುಕೊಂಡೇ ನೀನು ಶರೀರದಿಂದ ಹೊರಗೆ ಹೋಗುವಿ. ಹೀಗಾಗಿ ನೀನು ಅಗಲಿದರೆ ಶರೀರ ಹೆಣವಾಗುವುದು. ಅದನ್ನು ನೋಡಲು ಭಯಪಡುತ್ತಾರೆ ಮುಟ್ಟಲು ಹೇಸುತ್ತಾರೆ. ಅದಕ್ಕೆ ನೆಲದಲ್ಲಿ ಹಳ್ಳತೋಡಿ ಹೂಳುತ್ತಾರೆ. ಒಣ ಮಣ್ಣಹೆಂಟೆಯಲ್ಲಿ ಮುಚ್ಚುತ್ತಾರೆ. ಅಥವಾ ಚಿತೆಯ ಮೇಲಿರಿಸಿ ಅಗ್ನಿಗೆ ಆಹುತಿ ಮಾಡುತ್ತಾರೆ. ಅಥವಾ ನದಿಗಳಲ್ಲಿ ತೇಲಿಬಿಡುತ್ತಾರೆ, ಕೊಳೆತು ನಾರದಿರಲಿ ಎಂದು.

**ದೇಹದಲುಂಟೆ ಫಲ ಪುರುಷಾರ್ಥ?**

ಸತ್ಕರ್ಮ ಮಾಡದಿದ್ದರೆ, ದೇಹದಲ್ಲಿ ನೀನಿರುವಷ್ಟು ಕಾಲ ಶ್ರದ್ಧೆಯಿಂದ ನಿನ್ನಾರಾಧನೆಗಾಗಿ ಸ್ನಾನ ಸಂಧ್ಯಾಧ್ಯಾನ ಜಪತಪದಾನ ಪರೋಪಕಾರಗಳನ್ನು ಮಾಡದೆ ದೇಹವನ್ನೇ ಆರಾಧಿಸಿದರೆ ಏನು ಫಲ ಪುರುಷಾರ್ಥ ಸಾಧನೆಯಾದೀತು? ಉಣ್ಣುವ ಸುಖ ಹೆಣ್ಣಿನ ಸುಖ ಇವೆರಡು ಮಹಾಪುರುಷಾರ್ಥಗಳೇ? ಅಹುದೆಂದರೆ ಅದು ಕೇವಲ ಭ್ರಮೆ. ಅವುಗಳಲ್ಲಿ ಸುಖಕ್ಕಿಂತ ದುಃಖವೇ ಹೆಚ್ಚು. ನಿನ್ನ ವಿಸ್ಮರಣೆಗೆ ಕಾರಣವಾಗುವುದರಿಂದ ಅವುಗಳು ಮಹಾ ಅನರ್ಥವೇ ಹೊರತು ಮಹಾಪುರುಷಾರ್ಥವಲ್ಲ. ಮತ್ತು ಅವು ಹಂದಿ ನಾಯಿಗಳಿಗೂ ಲಭ್ಯವಿದೆ. ಹಂದಿ ನಾಯಿಗಳಿಗೆ ನಿನ್ನನ್ನು ನೆನೆಯುವ ಸಾಮರ್ಥ್ಯವಿಲ್ಲ, ನೆನೆಯುವುದಿಲ್ಲ. ಮಾನವ ಸಾಮರ್ಥ್ಯವಿದ್ದೂ ನೆನೆಯುವುದಿಲ್ಲ. ಅದು ಅಕ್ಷಮ್ಯ. ನೀ ಮಾಡುವ ಉಪಕಾರವನ್ನು ನೆನೆಯದಿರುವುದು ಕೃತಘ್ನತೆ. ಅದಕ್ಕೆ ಪ್ರಾಯಶ್ಚಿತ್ತವಿಲ್ಲ. ★

ಅವಲೋಕನ

# ಸಮಾರಾಧನಾ ಸೌರಭ

## ಶ್ರೀವಿಶ್ವಪ್ರಿಯತೀರ್ಥರ ಸಮರ್ಪಣಾ ಸಂದೇಶ

ಪವಮಾನ ಮಂಡಲದ **'ಯದಂತಿ ಯಚ್ಚ ದೂರಕೇ ಭಯಂ ವಿಂದತಿ ಮಾಮಿಹ ಪವಮಾನ ವಿತಜ್ಜಹಿ'**– ಎಂಬ ಮಂತ್ರದಲ್ಲಿ ಸಮೀಪದಲ್ಲೂ, ದೂರದಲ್ಲೂ ಸಂಭವಿಸಬಹುದಾದ ಭಯದಿಂದ ಪಾರು ಮಾಡುವಂತೆ ಪವಮಾನನಲ್ಲಿ ಪ್ರಾರ್ಥಿಸಲಾಗಿದೆ.

ದೂರದಲ್ಲಿ ಸಂಭವಿಸುವ ಭಯಕ್ಕಿಂತಲೂ ಸಮೀಪದಲ್ಲಿ ಸಂಭವಿಸುವ ಭಯವೇ ಅಧಿಕ ಅಪಾಯಕಾರಿಯಾಗಿರುವುದರಿಂದ ಅದನ್ನೇ ಮೊದಲು ಉಲ್ಲೇಖಿಸಲಾಗಿದೆ.

### ಅತ್ಯಂತ ಸಮೀಪದ ಭಯ:

ನಮ್ಮನ್ನು ಕಾಡುತ್ತಿರುವ ಸಮೀಪದ ಭಯ ಯಾವುದೆಂದು ವಿವೇಚಿಸಿಕೊಂಡ ಮೇಲೆ ಅಂತಹ ಭಯದಿಂದ ಸಂರಕ್ಷಿಸಲು ಕೇಳಿಕೊಳ್ಳುವುದರಲ್ಲಿ ಔಚಿತ್ಯವಿದೆ. ಅಂತಹ ಸಮೀಪದ ಭಯ ಯಾವುದು? ನಮ್ಮ ಮೂಲಕವೇ ನಮಗೆ ಉಂಟಾಗುವ ಭಯ, ಸಮೀಪದ ಭಯ. ನಾವು ನಮ್ಮ ಪಾಲಿಗೆ ಹಿತಕರವಾಗಿ ನಡೆದುಕೊಳ್ಳದಿದ್ದರೆ ನಮ್ಮ ಮೂಲಕ ನಮಗೆ ಭಯ ಉಂಟಾಗುವುದು. ನಾವು ಅದೆಷ್ಟೋ ಬಾರಿ ಆಪಾತತಃ ಸುಖಚಾಪಲ್ಯಕ್ಕೆ ಒಳಗಾಗಿ ನಮಗೆ ಅಹಿತಕರವಾಗಿಯೇ ನಡೆದುಕೊಳ್ಳುವೆವು. ಉದಾ: ಏಕಾದಶಿಯಂದು ಉಂಡರೆ, ತಿಂದರೆ ನರಕಾದ್ಯನರ್ಥಗಳು ಸಂಭವಿಸುವವೆಂದು ಗೊತ್ತಿದ್ದರೂ ನಾಲಗೆ ಚಾಪಲ್ಯಕ್ಕೊಳಗಾಗಿ ಉಂಡು, ತಿಂದು ಆ ಮೂಲಕ ಆತ್ಮನ ಪಾತಿತ್ಯಕ್ಕೆ ಪ್ರಯೋಜಕವಾಗುವಂತೆ ನಡೆದುಕೊಳ್ಳುವುದುಂಟು. ಹೀಗೆ ನಮ್ಮದೇ ಆದ ಹೊಟ್ಟೆಗೆ ಅಹಿತ ಎಂದು ಗೊತ್ತಿದ್ದರೂ ನಮ್ಮದ್ದೇ ಆದ ಬಾಯಿ ಅಪಥ್ಯವನ್ನು ಮುಕ್ಕುವಂತೆ ನಮಗೆ ಅಹಿತವಾಗುವಂತೆ ನಾವು ನಡೆದುಕೊಂಡು ನಮ್ಮ ಪಾಲಿಗೆ ನಾವೇ ಭಯಪ್ರದವೆನಿಸಬಲ್ಲೆವು. ಆದುದರಿಂದ **'ಯದಂತಿ ಯಚ್ಚ ದೂರಕೇ ಭಯಂ....'** ಎಂಬಲ್ಲಿ ನಮ್ಮ ಹತ್ತಿರದ ನಮ್ಮಿಂದಲೇ ನಮಗೆ ಸಂಭವಿಸುವ ಭಯವನ್ನು ಪರಾಮರ್ಶಿಸಿ, ಅದನ್ನು ದೂರೀಕರಿಸಲು ಪವಮಾನನಲ್ಲಿ ಪ್ರಾರ್ಥಿಸಬೇಕು. ಅರ್ಥಾತ್ ನಮಗೆ ಅಹಿತಕಾರಕವಾಗಿ ನಾವು ನಡೆದುಕೊಳ್ಳದಂತೆ ವಿವೇಕವನ್ನು ಅನುಗ್ರಹಿಸಲು ವಾಯುದೇವನಲ್ಲಿ ಬೇಡಿಕೊಳ್ಳಬೇಕು.

## ವೃಂದಾವನದಲ್ಲಿದ್ದು ವರಪ್ರದರು

ಶ್ರೀರಾಘವೇಂದ್ರಸ್ವಾಮಿಗಳು ಹೇಗೆ ವೃಂದಾವನ ಪ್ರವೇಶ ಮಾಡಿದ ಬಳಿಕ ಅಲ್ಲಿದ್ದುಕೊಂಡು ಭಕ್ತರ ಇಷ್ಟಗಳನ್ನೆಲ್ಲ ಅನುಗ್ರಹಿಸುವರೋ ಅಂತೆಯೇ ಶ್ರೀವಿದ್ಯಾಮಾನ್ಯತೀರ್ಥರು ವೃಂದಾವನದಲ್ಲಿದ್ದುಕೊಂಡು ಭಕ್ತರ ಬೇಕುಬೇಡಗಳಿಗೆ ಸ್ಪಂದಿಸುವರು.

ಹೀಗೆ ಅದಮಾರು ಮಠದ ಶ್ರೀವಿಶ್ವಪ್ರಿಯತೀರ್ಥರು ಸಂದೇಶ ನೀಡಿದರು. ಶ್ರೀವಿದ್ಯಾಮಾನ್ಯತೀರ್ಥರ ಉತ್ತರಾರಾಧನೆಯಂದು ಪಲಿಮಾರಿನ ಶ್ರೀವಿದ್ಯಾಮಾನ್ಯತೀರ್ಥರ ಮೂಲವೃಂದಾವನದ ಸನ್ನಿಧಿಯಲ್ಲಿ ಗುರುಗಳ ಸಮಾರಾಧನಾ ಸಮಾರಂಭವನ್ನು ಗುರ್ವಂತರ್ಯಾಮಿ ಶ್ರೀವೇದವ್ಯಾಸರಿಗೆ ಸಮರ್ಪಿಸುತ್ತ ಸಮರ್ಪಣಾ ಸಂದೇಶವನ್ನು ಶ್ರೀಪಾದರು ಅನುಗ್ರಹಿಸಿರುವರು.

## ಮಾಡಿ ಮಾಡಿಸುತ್ತಿದ್ದವರು

ಶ್ರೀ ವಿದ್ಯಾಧೀಶತೀರ್ಥರು ತಮ್ಮ ಗುರುಗಳ ಸಂಸ್ಮರಣೆಯನ್ನು ಹೀಗೆ ನಡೆಸಿದರು– ನಮ್ಮ ಗುರುಗಳು ಪೂಜೆ, ಪುರಸ್ಕಾರ, ಪಾಠಪ್ರವಚನ ಮುಂತಾದ ಸಾಧನೆಗಳನ್ನು ತಾವು ಶಾಸ್ತ್ರೀಯವಾಗಿ ಆಚರಿಸುತ್ತಿದ್ದರಲ್ಲದೆ, ತಮ್ಮ ಶಿಷ್ಯರೂ ಹಾಗೆಯೇ ನಡೆಸುವಂತೆ ಪ್ರೇರಿಸುತ್ತಿದ್ದರು, ಪ್ರೋತ್ಸಾಹಿಸುತ್ತಿದ್ದರು. ಆಚಮನ, ಪ್ರಾಣಾಯಾಮ ಮುಂತಾದ ಪ್ರತಿಯೊಂದು ಚಿಕ್ಕಪುಟ್ಟ ಚಟುವಟಿಕೆಯನ್ನೂ ಅವಸರ ಮಾಡದೆ ನಿಧಾನವಾಗಿ, ಸ್ಪಷ್ಟವಾಗಿ ನಡೆಸುತ್ತಿದ್ದರು. ನಾವು ಸ್ನಾನ ನಡೆಸುವಾಗ ಅವರು ಗಟ್ಟಿಯಾಗಿ ಹೇಳುತ್ತಿದ್ದ ಸ್ನಾನಸಂಕಲ್ಪವನ್ನು ಕೇಳಿಯೇ ಅದನ್ನು ತಿಳಿದುಕೊಂಡಿದ್ದೆವು.

★

---

(5ನೇ ಪುಟದಿಂದ...)

ಎರಡು ಹೇಳುವವರ ಕಿವಿಗಳು. ಎರಡು ಕೇಳುವವರ ಕಿವಿಗಳು. ಆರು ಕಿವಿಗಳಿಗೆ ಆ ವಿಷಯ ಹೋದರೆ ಅದು ರಹಸ್ಯವಾಗಿ ಉಳಿಯುವುದಿಲ್ಲ ಎಂದು ಹೇಳಿದರು. ವಿಷ ಕುಡಿದರೆ ಒಬ್ಬನೇ ಸಾಯುತ್ತಾನೆ, ಬಾಣ ಪ್ರಯೋಗ ಮಾಡಿದರೆ ಒಬ್ಬನೇ ಸಾಯುತ್ತಾನೆ. ಆದರೆ ಮಂತ್ರ ವಿಪ್ಲವ ಅಂದರೆ ರಹಸ್ಯ ಸೋರಿ ಹೋದರೆ ಇಡೀ ರಾಷ್ಟ್ರಕ್ಕೆ ಆಪತ್ತು ಬರಬಹುದು. ಇದು ರಾಜನಾದವನಿಗೆ ಮೊದಲು ಬೇಕಾದ ವಿಷಯ. ಈ ವಿಷಯ ನಿನಗೆ ಕಹಿ ಆದರೂ ನೀನು ಸಹಿಸಿಕೊಳ್ಳಬೇಕು ಎಂದು ವಿದುರನು ಧೃತರಾಷ್ಟ್ರನಿಗೆ ಹೇಳುತ್ತಾನೆ.

# ಯೋಗ್ಯತೆಯಿದ್ದಷ್ಟೇ ಸೇವೆ

-ವಿ॥ ರಾಮವಿಟ್ಠಲಾಚಾರ್ಯ ಬೆಂಗಳೂರು

ಭೃಗುವಂಶದಿಂದಲೇ ಆರಂಭಿಸಿ ರೋಮಾಂಚಕಾರಿ ಕಥೆಗಳನ್ನು ಹೇಳಿದಿರಿ ಸೌತಿಗಳೇ! ಬಹಳ ಸಂತೋಷ. ಸತ್ರಸಮಾರಂಭಗಳಲ್ಲಿ ಬೇರೇನಾದರೂ ಕಥೆಗಳನ್ನು ವ್ಯಾಸರು ಹೇಳಿದ್ದರೆ ಅದನ್ನೂ ತಿಳಿಸಿರಿ ಎಂದರು ಶೌನಕರು.

ಜನಮೇಜಯರ ಕುತೂಹಲದ ಪ್ರಶ್ನೆಗಳಿಗೆ ಪಾಂಡವರ ರೋಚಕಕಥೆಗಳನ್ನೊಳಗೊಂಡ ಮಹಾಭಾರತವನ್ನು ವ್ಯಾಸರು ನಿರೂಪಿಸಿದರೆಂದರು ಸೌತಿಗಳು. ವೇದವ್ಯಾಸರ ಮನಃಸಾಗರದ ಮಥನದಿಂದುದ್ಭಸಿದ ಮಹಾಭಾರತಕಥೆಯನ್ನು ಹೇಳಿರಿ ಎಂದರು ಶೌನಕರು.

ಜನಮೇಜಯನ ಸರ್ಪಸತ್ರದ ಒಂದು ದಿನ ಭಗವಾನ್ ವೇದವ್ಯಾಸರು ಆಗಮಿಸಿದರು. ಅರ್ಘ್ಯಪಾದ್ಯಾದಿಗಳಿಂದ ರಾಜ ವ್ಯಾಸರನ್ನು ಭಕ್ತಿಯಿಂದ ಸತ್ಕರಿಸಿದನು. ವ್ಯಾಸಮಹರ್ಷಿಗಳೇ! ತಾವು ಕೌರವ ಪಾಂಡವರ ಪ್ರತ್ಯಕ್ಷದರ್ಶಿಗಳು. ಅವರಲ್ಲಿ ಪರಸ್ಪರ ವೈರ ಬೆಳೆಯಲು ಕಾರಣವೇನು. ಕುರುಕ್ಷೇತ್ರದ ರಣಾಂಗಣದಲ್ಲಿ ಭೀಕರಯುದ್ಧ ಹೇಗೆ ನಡೆಯಿತು? ದೈವಾವೇಶಕ್ಕೊಳಗಾದ ಮಹನೀಯ ಪಾಂಡವರ ಪರಮಪಾವನಚರಿತೆಯನ್ನು ನಿರೂಪಿಸಿರಿ ಎಂದು ಬಿನ್ನವಿಸಿದ ಜನಮೇಜಯ ವ್ಯಾಸರಲ್ಲಿ.

ವೇದವ್ಯಾಸರು ಪಕ್ಕದಲ್ಲಿದ್ದ ತಮ್ಮ ಶಿಷ್ಯ ವೈಶಂಪಾಯನರಿಗೆ ಆದೇಶಿಸಿದರು– ನನ್ನಿಂದ ಶ್ರವಣ ಮಾಡಿದ ಮಹಾಭಾರತಕಥೆಯನ್ನು ಜನಮೇಜಯನಿಗೆ ತಿಳಿ ಹೇಳು.

ಗುರುಗಳಾದ ವೇದವ್ಯಾಸರಿಗೆ ಭಕ್ತಿಯಿಂದ ನಮಿಸಿ ಇಲ್ಲಿ ನೆರೆದಿರುವ ವಿದ್ವನ್ಮಣಿಗಳಾದ ದ್ವಿಜರಿಗೆಲ್ಲ ಅಭಿವಂದಿಸಿ ಮಹಾಭಾರತಕಥೆಯನ್ನು ನಿರೂಪಣೆ ಮಾಡುತ್ತೇನೆ ಕೇಳು ಜನಮೇಜಯ! ಎಂದು ವೈಶಂಪಾಯನರು ಸಂಕ್ಷೇಪವಾಗಿ ಭಾರತಕಥಾಸರ್ವಸ್ವವನ್ನೂ ಅರುಹಿದರು ರಾಜನಿಗೆ.

ಈ ಸಂಕ್ಷೇಪಭಾರತವನ್ನು ಕೇಳಿ ನನ್ನ ಕುತೂಹಲ ಶುಶ್ರೂಷೆ ಗರಿ ಗೆದರಿದೆ. ವಿಸ್ತಾರವಾಗಿ ನಿರೂಪಿಸಿ ಎಂದ ರಾಜ.

ಆರಂಭದಲ್ಲಿ ಪುರುವಂಶವನ್ನು ವಿವರಿಸಿ ಹೇಳುತ್ತಾರೆ. ಬಳಿಕ ಉಪರಿಚರವಸು ರಾಜನ ಮಂಗಲಚರಿತೆಯನ್ನು ಹೇಳಿದರು.

ರಾಜಾ ಉಪರಿಚರವಸು ಧರ್ಮನಿಷ್ಠ. ಅವನೊಮ್ಮೆ ಚೇದಿ ದೇಶಕ್ಕೆ ಬಂದು ಶಸ್ತ್ರಸನ್ಯಾಸ ಮಾಡಿ ತಪೋನಿರತನಾದ. ತಪಸ್ಸಿನಿಂದ ಇಂದ್ರಪದವಿಗೆ ಅರ್ಹನಾಗುವನಿವನೆಂದು ಭಾವಿಸಿ ಸಾಂತ್ವವಚನಗಳಿಂದ ತಪಸ್ಸಿನಿಂದ ನಿವೃತ್ತಿಗೊಳಿಸಲು ದೇವತೆಗಳು ಹೇಳಿದರು. ಧರ್ಮಸಾಂಕರ್ಯಕೂಡದು. ನೀನು ಪೃಥಿವಿಯಲ್ಲಿ ಧರ್ಮರಕ್ಷಣೆ ಮಾಡಿರುವಿ. ದೇವಲೋಕದ ಪ್ರಭುತ್ವ ಭೂಲೋಕದಲ್ಲಿರುವವರಿಗೆ ಉಚಿತವಲ್ಲವಲ್ಲವೆ?

ಇಂದ್ರನೂ ನುಡಿದ– ನಾನು ದೇವಲೋಕದಲ್ಲಿದ್ದು ದೇವತೆಗಳನ್ನು ಪಾಲಿಸುತ್ತೇನೆ. ನೀನು ಈ ಭೂಮಿಯಲ್ಲಿದ್ದು ಮನುಷ್ಯರನ್ನು ಪಾಲಿಸು. ದಿವಂಗತನಾದ ದೇವೇಂದ್ರನಿಗೆ ಭುವಂಗತನಾದ ನೀನು ಮಿತ್ರನಾಗುವುದು ಎಷ್ಟು ಚೆಂದವಲ್ಲವೆ? ಈ ಚೇದಿದೇಶ ಗೋರೂಪಧಾರಿಣಿಯಾದ ಧರಣಿಯ ಕೆಚ್ಚಲಿನ ದೇಶ. ಇದು ವಸುಂಧರೆ. ಈ ರಮ್ಯ ಧರ್ಮಸ್ಥಾನದಲ್ಲಿ ವಾಸವಾಡು. ದೇವೋಪಭೋಗ್ಯವಾದ ಸ್ಫಟಿಕಮಯವಾದ ದಿವ್ಯವಿಮಾನವನ್ನು ನಿನಗೆ ನೀಡುತ್ತೇನೆ. ಈ ಮನುಷ್ಯಲೋಕದಲ್ಲಿ ನಿನಗೊಬ್ಬನಿಗೆ ಈ ಭಾಗ್ಯ. ಈ ವಿಮಾನದಲ್ಲಿ ಕುಳಿತು ಆಕಾಶದೆಲ್ಲೆಡೆ ಸಂಚರಿಸಬಹುದು.

ಇದೋ ಈ ಬಾಡದ ತಾವರೆಯ ವೈಜಯಂತೀ ಮಾಲೆಯನ್ನು ನಿನಗೆ ಕೊಟ್ಟಿದ್ದೇನೆ. ಇಂದ್ರಮಾಲೆಯೆಂದೇ ಸುಪ್ರಸಿದ್ಧವಾದ ಈ ಮಾಲೆಯನ್ನು ಕೊರಳಲ್ಲಿ ಧರಿಸಿದರೆ ಯುದ್ಧದಲ್ಲಿ ನಿನ್ನನ್ನು ಯಾರೂ ಎದುರಿಸಲಾರರು.

ಮತ್ತಿದೋ ಈ ದಂಡವನ್ನು ಕೊಡುತ್ತೇನೆ. ಇದನ್ನೂ ಕೈಯಲ್ಲಿ ಹಿಡಿದು ಪ್ರಜೆಗಳಿಗೆ ಅವರು ಕೇಳಿದ್ದನ್ನೆಲ್ಲ ಕೊಡಬಹುದು. ಹೀಗೆ ವಿಶೇಷಾನುಗ್ರಹ ಮಾಡಿ ಅವನನ್ನು ತಪೋನಿವೃತ್ತನನ್ನಾಗಿಸಿ ಹಿಂತೆರಳಿದರು ದೇವತೆಗಳು.

ವಸುರಾಜ ಇಂದ್ರದತ್ತ ವಿಭೂಷಣಗಳಿಂದ ಅಲಂಕೃತನಾಗಿ ವಿಮಾನದಲ್ಲಿ ಸಂಚರಿಸಿ ಉಪರಿಚರನೆಂದು ಪ್ರಸಿದ್ಧನಾದ. ವಸುರಾಜ ಇಂದ್ರದತ್ತವಾದ ದಂಡವನ್ನು ವೈಭವದಿಂದ ಪೂಜೆ ಮಾಡಿದ. ಮಾರ್ಗಶೀರ್ಷ ಶುಕ್ಲಪಕ್ಷದಲ್ಲಿ ಪುಣ್ಯಮುಹೂರ್ತದಂದು ಇಂದ್ರಯಷ್ಟಿಯನ್ನು ವೈಭವದ ಉತ್ಸವದಿಂದ ತಂದು ಸ್ಥಾಪನೆ ಮಾಡಿ ಪೂಜೆಗೈದನು. ಇಡೀ ಊರಿನ ಪ್ರಜೆಗಳೆಲ್ಲ ಸಂಭ್ರಮದಿಂದ ಪಾಲ್ಗೊಂಡರು. ವಸುವಿಹಿತವಾದ ಪೂಜೆಯಿಂದ ದೇವೇಂದ್ರ ಸಂತಸಗೊಂಡನು. ಚೇದಿರಾಜನಂತೆ ಯಾರು ಈ ಇಂದ್ರಪೂಜೆಯನ್ನು ಭಕ್ತಿ ಶ್ರದ್ಧೆ ವೈಭವಗಳಿಂದ ನಡೆಸುವರು ಅವರು ಸಂಪತ್ತನ್ನು ವಿಜಯವನ್ನು ಪಡೆಯುತ್ತಾರೆ. ಪೂಜೆ ಮಾಡುವ ರಾಜನ ರಾಷ್ಟ್ರ ಸಮಗ್ರ ಅಭಿವೃದ್ಧಿಯನ್ನು ಹೊಂದಿ ದಿಗ್ವಿಜಯಿಯಾಗುತ್ತದೆಯೆಂದು ಹರಸಿದ.

ಇಂದ್ರಾನುಗ್ರಹದಿಂದ ಪುನೀತನಾಗಿ ಮೆರೆದ ವಸುರಾಜನಿಗೆ ಐವರು ಗಂಡುಮಕ್ಕಳಾದರು. ಮಗಧದೇಶದ ದೊರೆ ಬೃಹದ್ರಥ, ಪ್ರತ್ಯಗ್ರಹ, ಕುಶಾಂಬ, ಮತ್ಸಿಲ್ಲ, ಯದು. ಅವರೆಲ್ಲ ತಮ್ಮದೇ ದೇಶಗಳನ್ನು ವಂಶಗಳನ್ನು ಸಮೃದ್ಧಿ ಪಡಿಸಿ ಹೆಸರುವಾಸಿಯಾದರು.

ವಸಂತದ ಶೋಭೆ ತುಂಬಿದ ದಿನದಂದೊಮ್ಮೆ ತನ್ನ ಪುರದಲ್ಲಿ ಪ್ರವಹಿಸುವ ಶುಕ್ತಿಮತೀ ನದಿಯನ್ನು ಕೋಲಾಹಲ ಪರ್ವತದ ದೇವತೆಯಾದ ಕೋಲಾಹಲನು ಶುಕ್ತಿಮತಿಯ ಮೇಲಿನ ಕಾಮದಿಂದ ತಡೆದನು. ಆಗ ವಸುರಾಜನು ಕೋಲಾಹಲ ಪರ್ವತವನ್ನು ಕಾಲಿನಿಂದ ಒದ್ದ. ಶುಕ್ತಿಮತೀ ನದಿ ತಡೆಯಿಲ್ಲದೆ ಸಲೀಲ ಹರಿಯಿತು. ಅಷ್ಟರಲ್ಲಿ ಆ ಪರ್ವತನಿಂದ ಶುಕ್ತಿಮತಿಗೆ ಅವಳಿ ಮಕ್ಕಳಾಗಿದ್ದರು. ಒಂದು ಹೆಣ್ಣು ಮತ್ತೊಂದು ಗಂಡು. ಗಿರಿಯಿಂದ ಬಿಡುಗಡೆಯಾದುದರಿಂದ ಪ್ರೀತಳಾದ ನದೀದೇವತೆಯಾದ ಶುಕ್ತಿಮತಿಯು ವಸುರಾಜನಿಗೆ ಬಿನ್ನವಿಸಿದಳು–ನನ್ನ ಮಗಳು ಮಹಿಷಿಯಾಗಲಿ ಮಗನು ಸೇನಾಪತಿಯಾಗಲಿ!

ವಸುರಾಜ ಹಾಗೆ ಗಿರಿಕೆಯೆಂಬ ಹೆಣ್ಣು ಮಗಳನ್ನು ತನ್ನ ಹೆಂಡತಿಯಾಗಿ ಸ್ವೀಕರಿಸಿದನು. ಅವಳ ಗಂಡುಮಗುವನ್ನು ಸೇನಾಪತಿಯನ್ನಾಗಿ ಸ್ವೀಕರಿಸಿದನು.

ವಸುಪತ್ನಿ ಗಿರಿಕೆ ಋತುಸ್ನಾತಳಾದಳು. ಪತಿಸಂಗದ ಬಯಕೆ ಹಸಿಯಾಗಿತ್ತು. ರಾಜನ ಮನಸ್ಸೂ ಸಂಗಾತಿಯ ಸಂಗ ಬಯಸಿತ್ತು. ಅದೇ ಕಾಲಕ್ಕೆ ಪಿತೃಗಳ ಅದೇಶದಿಂದ ಅವಳನ್ನು ಬಿಟ್ಟು ಬೇಟೆಯಾಡಿ ಕ್ರೂರಮೃಗಗಳನ್ನು ನಿಗ್ರಹಿಸಬೇಕಾದ ತುರ್ತು ಸಂದರ್ಭ ಬಂತು.

ಕೋಕಿಲದ ಕಿಲ ಕಿಲ. ಹಸಿರ ವನಸಿರಿ. ಕಾವು ಕೆರಳಿಸುವ ತಂಗಾಳಿ. ಕುಸುಮಗಳ ಘಮ ಘಮ. ಮನಸಿನಲಿ ಸಂತಸದ ಸರಿಗಮ. ಮನದನ್ನೆಯ ನೆನಪು ಕಾಡ ಹತ್ತಿತು. ಕಾಡು ಕಾಡಿತು. ಮದನಾಗ್ನಿ ಉರಿ ಉರಿ. ಸಂಗವೇ ಗುರಿ ಗುರಿ. ನೀರೆಯ ನೆನಪಲಿ ಜಾರಿತು ರೇತಸ್ಸು. ವ್ಯರ್ಥವಾಗದಿರಲೆಂದು ಕೂಡಲೆ ರಾಜ ಎಲೆಯಲ್ಲಿ ರೇತಸ್ಸನ್ನು ಸಂಗ್ರಹಿಸಿದ. ಸತಿಯ ಋತುಕಾಲ ವೃಥಾ ಕಳೆಯದಿರಲೆಂದು ಧಾವಿಸಿದ. ರೇತಸ್ಸನ್ನು ಅಭಿಮಂತ್ರಿಸಿ ಗಿಡುಗನ ಕೈಲಿಕೊಟ್ಟು ಇದನ್ನು ಗಿರಿಕೆಗೆ ತಲುಪಿಸುವ ವ್ಯವಸ್ಥೆ ಮಾಡಿದ.

ಗಿಡುಗ ವೇಗವಾಗಿ ಹಾರಿತು. ಆದರೆ ದಾರಿಯಲ್ಲಿ ಮತ್ತೊಂದು ಗಿಡುಗ ಇದರ ಬಾಯಲ್ಲಿದ್ದ ಎಲೆಮರೆಯ ರೇತಸ್ಸನ್ನು ತಿಳಿಯದೆ ಏನೋ ಮಾಂಸ ಹಿಡಿದುಕೊಂಡಿದೆಯೆಂದು ಬಗೆದು ಬೆನ್ನು ಹತ್ತಿತು. ಕೊಕ್ಕಿನಲ್ಲಿಯೇ ಸೊಕ್ಕಿನಿಂದ ಹಕ್ಕಿಗಳು

ಕಾದಾಟಕ್ಕೆ ಇಳಿದಾಗ ಕೆಳಗಿನ ಯಮುನಾನದಿಯಲ್ಲಿ ರೇತಸ್ಸು ಜಾರಿಬಿತ್ತು.

ಆ ಯಮುನಾನದಿಯಲ್ಲಿ ಅದ್ರಿಕೆ ಎಂಬ ಹೆಸರಿನ ವರಾಪ್ಸರೆಯೋರ್ವಳು ಬ್ರಹ್ಮಶಾಪದಿಂದ ಮೀನದೇಹಹೊತ್ತು ಚಲಿಸುತ್ತಿದ್ದಳು. ವಸುವಿನ ಆ ವೀರ್ಯವನ್ನು ಮತ್ಸ್ಯಕನ್ಯೆ ನುಂಗಿತು. ಅಂಬಿಗಳು ಆ ಮೀನನ್ನು ಬಲೆಯಲ್ಲಿ ಹಿಡಿದರು. ಹತ್ತು ತಿಂಗಳು ತುಂಬಿದಾಗ ಅದ್ರಿಕಾ ಮತ್ಸ್ಯೆ ಅವಳಿ ಮಕ್ಕಳನ್ನು ಹಡೆದಳು. ಮೀನ ಉದರದಿಂದ ಹೊಮ್ಮಿದ ಆ ಜೋಡಿ ಮಕ್ಕಳನ್ನು ಅಚ್ಚರಿಯಿಂದ ಅಂಬಿಗರು ಉಪರಿಚರವಸುರಾಜನಿಗೆ ತಂದೊಪ್ಪಿಸಿದರು. ಗಂಡು ಮಗುವನ್ನು ತಾನು ಸ್ವೀಕರಿಸಿ ಹೆಣ್ಣು ಮಗುವನ್ನು ಅಂಬಿಗರ ದೊರೆಗೆ ಕೊಟ್ಟ. ಈ ಗಂಡು ಮತ್ಸ್ಯರಾಜನೆಂದು ಪ್ರಸಿದ್ಧನಾದ. ಮಕ್ಕಳನ್ನು ಹಡೆದ ಹೆಣ್ಣು ಮೀನಿನ ರೂಪದ ಅದ್ರಿಕಾ ಶಾಪವಿಮೋಚನೆಗೊಂಡು ಮೀನಿನ ಜನ್ಮ ಕಳೆದು ಅಪ್ಸರೆಯ ರೂಪ ತಳೆದು ದೇವಲೋಕಕ್ಕೆ ತೆರಳಿದಳು.

ದಾಶಕನ್ಯೆ ಸತ್ಯವತೀ ಎಂದು ಪ್ರಸಿದ್ಧಳಾಗಿ ಪರಾಶರರ ಮೂಲಕ ವೇದವ್ಯಾಸರ ಅವತಾರಕ್ಕೆ ನಿಮಿತ್ತಳಾದಳು.

ಜನಮೇಜಯ ತನ್ನ ಸತ್ರಕ್ಕೆ ಆಗಮಿಸಿದ. ವ್ಯಾಸಶಿಷ್ಯ ವೈಶಂಪಾಯನರಿಂದ ಭಾರತಕಥೆಯನ್ನು ಆಲಿಸಿದ. ನಾವು ಯಾವುದೇ ಸತ್ಕರ್ಮಗಳನ್ನು ಆಚರಿಸುವಾಗ ಜ್ಞಾನಿಗಳು ಬಂದರೆ ಅವರಿಂದ ಭಗವಂತನ ಹಾಗೂ ಭಕ್ತರ ಪುಣ್ಯಕಥಾಶ್ರವಣ ಮಾಡಬೇಕು. ಆಗಲೇ ನಮ್ಮ ಸತ್ಕರ್ಮಗಳೂ ಉತ್ತಮ ಫಲವನ್ನು ಕೊಡುತ್ತವೆ.

ಪ್ರತಿಯೊಂದು ಧಾರ್ಮಿಕ ಸಮಾರಂಭಗಳೂ ತತ್ವಜ್ಞಾನ ಸಾಧನವಾಗಬೇಕು.

ವಸುರಾಜನು ತಪೋನಿರತನಾದಾಗ ದೇವತೆಗಳೇ ಉಪಾಯದಿಂದ ಅನುಗ್ರಹ ಮಾಡುವ ನೆಪದಲ್ಲಿ ಅವನ ಸಾಧನೆಗೆ ತಡೆಯೊಡ್ಡಿದರು. ನಾವು ಕೆಲವೊಮ್ಮೆ ಯಾವುದಾದರೂ ಸೇವೆಯನ್ನು ನಡೆಸುವಾಗ ದೇವತೆಗಳೇ ವಿಘ್ನ ಉಂಟುಮಾಡಿ ಸೇವೆಯನ್ನು ನಿಲ್ಲಿಸುತ್ತಾರೆ. ನಮ್ಮ ಯೋಗ್ಯತಾನುಗುಣಫಲಕ್ಕೆ ಅಷ್ಟೇ ಸಾಧನೆ ಸಾಕು ಎಂದು ಅದರ ಭಾವ.

ವಸುರಾಜ ತನ್ನ ತಪಸ್ಸು ನಿಲ್ಲಿಸಿದ. ಸುರರ ಮೇಲೆ ಸಿಟ್ಟು ಮಾಡಿಕೊಳ್ಳದೇ ದೇವೇಂದ್ರನನ್ನೆ ವಿಶೇಷವಾಗಿ ಪೂಜೆ ಮಾಡಿ ಮೆಚ್ಚಿಸಿ ಅನುಗ್ರಹಪಾತ್ರನಾದ. ನಮ್ಮ ಸೇವೆ ನಿಂತುಹೋಯಿತೆಂದು ಹತಾಶರಾಗದೆ, ಕೋಪಕ್ಕೂ ಒಳಗಾಗದೆ ಸಮಾಧಾನಚಿತ್ತದಿಂದ ದೇವತಾರಾಧನೆಯಲ್ಲಿ ತೊಡಗಿದರೆ ಅವರ ಅನುಗ್ರಹಕ್ಕೆ ಪಾತ್ರರಾಗಬಹುದು.

★

# ಕಠೋಪನಿಷತ್

ಡಾ। ಎನ್. ವೇಂಕಟೇಶಾಚಾರ್ಯ

ವಿವೇಕಿಗಳು ಪರೀಕ್ಷಿಸಿ ನಿರ್ಧಾರಕ್ಕೆ ಬರುತ್ತಾರೆ. ಉಳಿದವರು ಪರೀಕ್ಷಿಸದೇ ಆಯ್ದುಕೊಂಡು ಆಮೇಲೆ ಅಳುತ್ತಾರೆ. ಅಳಿದು ಹೋಗುತ್ತಾರೆ. ಮತ್ತಿತರರು ಉಳಿದವರು ಆಯ್ದುಕೊಂಡರು ಎಂದು ತಾವು ಆಯ್ದುಕೊಳ್ಳುತ್ತಾರೆ. ಕೆಲವರಿಗೆ ಕೊನೆಗೆ ಮೋಸಹೋದದ್ದು ತಿಳಿಯುತ್ತದೆ. ಉಳಿದವರಿಗೆ ಸಾಯುವಾಗಲೂ ಸಹ ಮೋಸದ ಸುಳಿವು ಸಿಗುವುದಿಲ್ಲ.

ಹೀಗಾಗಿ ಏಕಾಏಕಿ ನಿರ್ಧಾರ ಬೇಡ. ವಿವೇಕಿಗಳಾಗಿ ನಿರ್ಧರಿಸಿ ಶ್ರೇಯಸ್ಸು–ಪ್ರೇಯಸ್ಸನ್ನು ಬೇರ್ಪಡಿಸಿ ಎನ್ನುತ್ತಾನೆ ಯಮ.

**ತೌ ಸಂಪರೀತ್ಯ ವಿವಿನಕ್ತಿ ಧೀರಃ**

ಹೀಗೆ ವಿವೇಕಿಗಳಾಗಲು ಗುರುವಿನ ಸನ್ನಿಧಿ–ಸಜ್ಜನರ ಸಂಗ ಬೇಕಲ್ಲವೆ? ಶ್ರೇಯಸ್ಸು ಎದುರು ಬರುವುದೇ ಕಡಿಮೆ. ಪ್ರೇಯಸ್ಸೇ ಬರುವುದು ಹೆಚ್ಚು. ಅವೆರಡು ಬಂದಾಗ ಧೀರನಾಗಬೇಕು. ಧೀರನಾಗಿದ್ದು ಶ್ರೇಯಸ್ಸು–ಪ್ರೇಯಸ್ಸನ್ನು ಬೇರ್ಪಡಿಸಬೇಕು.

1. Fortune knocks at everyone's door only at once. If he doesnot open. misfortune will enter from the other door.

2. ರಣರಂಗದ ಎದೆಗಾರಿಕೆಗೆ ತೋಳಿನ ಬಲಸಾಕು–ಆಕರ್ಷಕ ವಿಷಯಪದಾರ್ಥಗಳ ವಿವೇಚನೆಗೆ ಒಳಗಿನ ಬುದ್ಧಿಬಲ–ವ್ಯಾಮೋಹದ ಜಾಲಕ್ಕೆ ಸಿಲುಕದ ಛಲ ಎರಡೂ ಬೇಕು.

3. ಧೀರನಾದವನು ಶ್ರೇಯಸ್ಸು ಮತ್ತು ಪ್ರೇಯಸ್ಸನ್ನು ಬೇರ್ಪಡಿಸುತ್ತಾನೆ. ಅವನಿಗೆ ಆಯ–ವ್ಯಯ ಯಾವುದೂ ಅಯೋಮಯ ಅಲ್ಲ. ಅವನಿಗೆ ಆಯುಸ್ಸು ಕ್ಷಣಿಸಿದರೂ ಆಘಾತವಿಲ್ಲ. ಜ್ಞಾನ ಹೋದರೆ ಮಾತ್ರ ಪ್ರಾಣ ಹೋದಂತೆ ಆಡುತ್ತಾನೆ. ಇದು ವಿವೇಕದ ಫಲ. ಏಕೆಂದರೆ ಜ್ಞಾನದ ಫಲ ನಿತ್ಯಾನಂದ–ಮೋಕ್ಷ. ಹೀಗಾಗಿ ಇರುತ್ತಾನೆ.

4. ವಿಷಯಪದಾರ್ಥಗಳಿಗೆ ಅರ್ಥ ಎಂದು ಕರೆಯುತ್ತಾರೆ. ಆದರೆ ಅದು ಅರ್ಥ. ಅವನ್ನು ಅರಿತವರ ಭಾಷೆಯಲ್ಲಿ ಅದು ಅನರ್ಥ. ಶಂಕರ ಭಗವತ್ಪಾದರು ಹೇಳುತ್ತಾರೆ.

**'ಅರ್ಥಂ ಅನರ್ಥಂ ಭಾವಯ ನಿತ್ಯಂ'** ಅದು ಎಂದೆಂದೂ ಅನರ್ಥ ಎಂದು ಅರಿತಿರು ಎಂದು.

ಏಕೆಂದರೆ ಅರ್ಥ ಪಡೆಯಲು ಸಾಹಸ ಮಾಡಬೇಕು. ಮನೆ ಜಾಗ ಕೊಳ್ಳಲು ಎಷ್ಟು ಸಾಹಸ. ಅದಾದ ನಂತರ ಆ ಜಾಗದಲ್ಲಿ ಬೇರೆಯವರು ಆಕ್ರಮಿಸದಂತೆ ಕಾಪಾಡುವ ದುಃಖ. ಆ ಮೇಲೆ ಕಟ್ಟುವುದು ಅದೂ ಕಷ್ಟ. ಗೃಹಪ್ರವೇಶ–ಏನೋ ಸಾಧಿಸಿದೆ ಎಂಬ ಸುಖ. ಮನೆ ಕಟ್ಟಿದ ಎಂದ ಕೂಡಲೇ ತೆರಿಗೆ ಕಟ್ಟುವ ದುಃಖ. ಮುಗಿಯಿತು ಎನ್ನುವಾಗ ಮನೆಯನ್ನು ಸರಿಪಡಿಸುವ ದುಃಖ.

**ಅರ್ಥಾನಾಂ ಆರ್ಜನೇ ದುಃಖಂ ಆರ್ಜಿತಾನಾಂ ಚ ರಕ್ಷಣೇ।**
**ಆಯೇ ದುಃಖಂ ವ್ಯಯೇ ದುಃಖಂ ಧಿಗರ್ಥಾಃ ಕಷ್ಟಸಂಶ್ರಯಾಃ॥**

ವಿಷಯ ಪದಾರ್ಥ ಪಡೆಯಲು ಸಾಹಸ ಮಾಡಬೇಕು. ಸಿಕ್ಕ ನಂತರ ಕಾಪಾಡುವ ಚಿಂತೆ–ಕೊನೆಯ ತನಕ ಕಾಡುವುದು ಚಿಂತೆ, ಇದು ವಿಷಯ ಪದಾರ್ಥಗಳ ಸಂತೆ. ಬ್ರಹ್ಮಜ್ಞಾನ ಪಡೆದರೆ ಮುಂದಿನ ಜನ್ಮಕ್ಕೂ ನಿಶ್ಚಿಂತೆ.

ತತ್ವಜ್ಞಾನ ವಿಜಯ ತಂದು ಕೊಡುವ ಪಾರ್ಥ ಎಂದಾದರೆ ಪ್ರೇಯಸ್ಸು ಎಲ್ಲೆಡೆ ಹಬ್ಬಿಬಿಡುವ ಪಾರ್ಥೇನಿಯಂ ಎನ್ನಬಹುದು.

ಕಾಳಿದಾಸ ಚಿನ್ನದಂತಹ ಮಾತನ್ನು ಆಡುತ್ತಾನೆ. ಜಗತ್ತಿನಲ್ಲಿ ತೀರ್ಮಾನಿಸುವವರು ಕಡಿಮೆ. ಹೂಗುಟ್ಟುವವರೇ ಬಹಳ.

**ಮೂಢಃ ಪರಪ್ರತ್ಯಯನೇಯ ಬುದ್ಧಿಃ**

ಮೂರ್ಖರ ಬುದ್ಧಿ ಪರರ ತೀರ್ಮಾನದ ಅಧೀನ ಪರರ ಅಭಿಪ್ರಾಯದ ಅನುಸಾರಿ

**ಸಂತಃ ಪರೀಕ್ಷ್ಯ ಅನ್ಯತರತ್ ಭಜಂತೇ**

ಸಜ್ಜನರು ಮಾತ್ರ ಒಳ್ಳೆಯದು ಕೆಟ್ಟದನ್ನು ಒಟ್ಟಿಗೆ ಇಟ್ಟು ಪರೀಕ್ಷೆ ಮಾಡಿಕೊಂಡು ಒಳ್ಳೆಯದನ್ನು ಆಯ್ದುಕೊಳ್ಳುತ್ತಾರೆ. ಸಜ್ಜನರು ತೂಗಿ ನೋಡುತ್ತಾರೆ. ಉಳಿದವರು ತಲೆದೂಗುತ್ತಾರೆ. ಹೀಗಾಗಿ ಪರೀಕ್ಷೆ ಮಾಡಿ ಆಯ್ದುಕೊಳ್ಳಿ.

★

ಸ್ತೋತ್ರ ಚಿಂತನೆ

ಭಾಗ–13

# ಶ್ರೀನಾರಾಯಣವರ್ಮ

–ಬೆ.ನಾ ವಿಜಯೀಂದ್ರಾಚಾರ್ಯ, ಮೈಸೂರು

**ತ್ರಿವಿಕ್ರಮಂ ರಮ್ಯಗದಾರಿಶಂಖ ಸರೋಜಮಾಲಾಧರಮಿಂದು ವರ್ಣಮ್**
**ಮನೋಹರಾಂಗಂ ಯತಿವಾದಿರಾಜ ಪ್ರತಿಷ್ಠಿತಂ ನೌಮಿ ಸದಾ ಪ್ರಸನ್ನಮ್॥** (ತೀರ್ಥ ಪ್ರಬಂಧ)

ರಮಣೀಯನಾದ ತ್ರಿವಿಕ್ರಮ ಕೈಯಲ್ಲಿ ಗದೆ–ಚಕ್ರ–ಶಂಖ–ಪದ್ಮಗಳನ್ನು ಧರಿಸಿದ್ದಾನೆ. ಕಮನೀಯ ಕಮಲದ ಮಾಲೆಯನ್ನು ಕಂದರದಲಿ ಧರಿಸಿದ್ದಾನೆ. ಚಂದ್ರಕಾಂತಿಯಂತೆ ಬೆಳಗುತ್ತಿದ್ದಾನೆ. ಮನವನ್ನು ಸೂರೆಗೊಳ್ಳುವ ಅಂಗಗಳಿಂದ ಕಂಗೊಳಿಸುವ ಪ್ರಸನ್ನ ವದನನಾದ ವಾದಿರಾಜ ಯತಿಗಳಿಂದ ಪ್ರತಿಷ್ಠಾಪಿಸಲ್ಪಟ್ಟ ತ್ರಿವಿಕ್ರಮನನ್ನು ಸದಾ ನಮಿಸುತ್ತೇನೆ.

**ತ್ರಿವಿಕ್ರಮೋ ವಿಜಯತೇ ತ್ರಯೀ ವಿಖ್ಯಾತ ವಿಕ್ರಮಃ।**
**ಸಗದೋಽಪಿಹ್ಯಸೌದೇವಃ ಸಂಸಾರೇಽಗದತಾಂ ಅಗಾತ್ ॥**

ಮೂರುವೇದಗಳಲ್ಲಿ ಪ್ರಸಿದ್ಧನಾದ ತ್ರಿವಿಕ್ರಮನು ನಿತ್ಯ ವಿಜಯಶೀಲನಾಗಿದ್ದಾನೆ. ಗದಾಧಾರಿಯಾದ ತ್ರಿವಿಕ್ರಮ ಸಂಸಾರದ ಗದೆ ಎನಿಸಿದ ರೋಗ–ರುಜಿನಗಳನ್ನು ಪರಿಹರಿಸುವವನಾಗಿ ಅಗದನೆಂದೆನಿಸಿದ್ದಾನೆ.

**ಕವಿದುಕೊಂಡು ಇರುವ ಪಾಪ ಸವೆದುಹೋಗುವಂತೆ ಮಾಡಿ।**
**ಜವನ ಬಾಧೆಯನ್ನು ಬಿಡಿಸೋ ಶ್ರೀತ್ರಿವಿಕ್ರಮ ॥**

ಇಂತಹ ತ್ರಿವಿಕ್ರಮನನ್ನು **'ಖೇ ಅವತು'** ಎಂದು ಪ್ರಾರ್ಥಿಸಬೇಕು. ಇಲ್ಲಿ **'ಖ'** ಎಂದರೆ ಆಕಾಶ. ಆಕಾಶವೆಂದರೆ ಹೃದಯಾಕಾಶ, ಅಂದರೆ ಹೃದಯದಲ್ಲಿ ತ್ರಿವಿಕ್ರಮನಿಗೆ ಸ್ಥಾನಕೊಟ್ಟಾಗ ಅವನು ನಮ್ಮನ್ನು ಪಾಪಕರ್ಮಗಳಿಂದ ರಕ್ಷಿಸುತ್ತಾನೆ. ಉದಾ: ಬಲಿಚಕ್ರವರ್ತಿಯು ವಾಮನನಿಗೆ ಅರ್ಥಾತ್ ತ್ರಿವಿಕ್ರಮನಿಗೆ ಜಾಗಕೊಟ್ಟ. ಮೊದಲು ಹೃದಯದಲ್ಲಿ ಜಾಗಕೊಟ್ಟ. ಎಲ್ಲವೂ ದೇವರದ್ದೇ ಜಾಗ. ನಾವು ಅವನಿಗೆ ಕೊಡಬೇಕಾದ್ದು ಏನೂ ಇಲ್ಲ. ಈ ಭಾವನೆಯಿಂದ ಹೃದಯದಲ್ಲಿ ಜಾಗ ಕೊಟ್ಟರೆ ಸಾಕು. ತ್ರಿವಿಕ್ರಮನು ನಮ್ಮ ಪಾಪವನ್ನು ಪರಿಹರಿಸುತ್ತಾನೆಂದು ಅಭಿಪ್ರಾಯ. ಬಲಿಯು ಕೊಟ್ಟ ಜಾಗ ಮೊಟ್ಟಮೊದಲಿಗೆ ತನ್ನದ್ದೇ ಅಲ್ಲ. ಮತ್ತೊಬ್ಬರ ತೋಟದ ಹೂವನ್ನು ಕದ್ದು ತಂದು ದೇವರ ಪಾದಕ್ಕೆ ಭಕ್ತಿಯಿಂದ ಇಟ್ಟಂತೆ ಬಲಿಯ

ಕಾರ್ಯವಾಗಿದೆ. ಪುರಂದರರ ಸ್ಥಾನವನ್ನು ಬಲಾತ್ಕಾರದಿಂದ ಅಪಹರಿಸಿ ಅದನ್ನು ದೇವರಿಗೆ ಸಮರ್ಪಿಸಿದಲ್ಲಿ ಹರಿ ಪ್ರೀತನಾಗುತ್ತಾನೆಯೇ. ಸ್ವೀಕರಿಸುತ್ತಾನಾದಲ್ಲಿ ಜಗತ್ತಿನಲ್ಲಿ ಅಪರಾಧಿಗಳು ಯಾರೆಂದು ಪ್ರಶ್ನಿಸ ಬೇಕಾಗುತ್ತದೆ. ಎಲ್ಲ ಅಪರಾಧಿಗಳು ಕೊನೆಗೆ ಕೃಷ್ಣಾರ್ಪಣ ಹೇಳಿದರೆ ಸಾಕಲ್ಲವೇ? ಇಷ್ಟಾಗಿ ಬಲಿಯು ಹದಿನಾಲ್ಕು ಲೋಕಗಳಿಗೆ ಅಧಿಪತಿಯೇನು ಅಲ್ಲ. ಹಾಗಿದ್ದಲ್ಲಿ ಸುತಲವನ್ನೂ ದೇವರು ನೀಡಬೇಕಿದ್ದಿಲ್ಲ. ಒಟ್ಟಿನಲ್ಲಿ ಬಲಿಕೊಟ್ಟದ್ದು ಏನೆಂದು ಸರಿಯಾಗಿ ವಿಮರ್ಶಿಸಿದರೆ ಏನೂ ಕೊಟ್ಟಿಲ್ಲ ಎಂಬುದೇ ಉತ್ತರ. ಹಾಗಾದರೆ ಬಲಿಯನ್ನು ಅನುಗ್ರಹಿಸಲು ಹರಿಗೆ ಮಾಧ್ಯಮವಾದದು ಏನು? ಎಂದರೆ, ಹರಿ ಸಮರ್ಪಣೆಮಾಡಬೇಕೆಂಬ ಸದ್ಭಾವನೆ ಒಂದೇ ಅಲ್ಲವೇ. ಹಾಗಾದರೆ ಬಲಿಯ ಹೃದಯದಲ್ಲಿ ಔದಾರ್ಯ ಹುಟ್ಟಿ ತನ್ನನ್ನೇ ಸಮರ್ಪಿಸಿಕೊಂಡ. ಶರಣಾಗತವತ್ಸಲನಾದ ದೇವನಿಗೆ ಇದಕ್ಕಿಂತ ಮಿಗಿಲಾದದ್ದು ಮತ್ತೇನು ಬೇಕು. **'ತನು ನಿನ್ನದು ಜೀವನ ನಿನ್ನದು. ಅನುದಿನದಲ್ಲಿ ಬಾಹೋ ಸುಖ ದುಃಖ ನಿನ್ನದಯ್ಯ'** ಎಂಬ ಒಂದು ಭಾವನೆ ಸಾಕು. ಇದಕ್ಕಾಗಿಯೇ ಭಾಗವತ ಓದಬೇಕು. ಅದಕ್ಕೇ ನಮ್ಮ ಮನ ಸಾಗಬೇಕು. ಅದಕ್ಕೂ ಮನಸಾಗಬೇಕು. ತ್ರಿವಿಕ್ರಮನ ಈ ಮನನ ಸಾಕು. ಅವನ ಅನುಗ್ರಹ ಒಂದು ಬೇಕು.

(ಸಶೇಷ)

(3ನೇ ಪುಟದಿಂದ)

ಯಾಜ್ಞವಲ್ಕ್ಯರು ಉಪದೇಶಿಸಿದ್ದಾರೆ. ಎಂಬುದಾಗಿ ಉಪನಿಷತ್ತು ತಿಳಿಸಿದೆ. ಅದೇ ರೀತಿಯಾಗಿ ಶ್ರೀಕೃಷ್ಣನೂ ವೈಷಯಿಕ ಪದಾರ್ಥಗಳ ಮೇಲಿನ ಅಭಿಮಾನವನ್ನು ತ್ಯಾಗಮಾಡಿ ಭಗವದಾರಾಧನಾರೂಪವಾದ ಸ್ವಧರ್ಮದಲ್ಲಿ ನಿರತನಾಗಬೇಕು ಎಂದು ಉಪದೇಶಿಸುತ್ತಾನೆ.

ಶ್ರೀಕೃಷ್ಣನ ಉಪದೇಶಾಮೃತವನ್ನು ಕೇಳಿದ ಅರ್ಜುನನು ತನ್ನ ಸಂಶಯ ಪರಿಹಾರಕ್ಕಾಗಿ ಈ ರೀತಿ ಪ್ರಶ್ನೆ ಮಾಡುತ್ತಾನೆ. ಬಂಧು ಬಾಂಧವರು ನಮ್ಮವರು ಎಂಬ ಅಭಿಮಾನ ತ್ಯಾಗದಿಂದಾಗಿ ಯುದ್ಧ ಮಾಡಿ ಅದರಿಂದಾಗುವ ದುಃಖವನ್ನು ಪರಿಹರಿಸಿಕೊಳ್ಳಬೇಕು ಎಂದು ನೀನು ಅಭಿಪ್ರಾಯ ಪಟ್ಟಿರುವಿ. ಆದರೆ ಯುದ್ಧದಿಂದಾಗುವ ದುಃಖವನ್ನು ಇನ್ನೊಂದು ರೀತಿಯಿಂದ ಪರಿಹರಿಸಬಹುದು. ಯುದ್ಧವನ್ನೇ ಮಾಡದಿದ್ದರೆ ದುಃಖದ ಪ್ರಮೇಯವೇ ಇಲ್ಲ. ಕೆಸರಿಗೆ ಕೈಹಾಕಿ ಕೈತೊಳೆಯುವುದಕ್ಕಿಂತ ಕೈಹಾಕದೇ ಸುಮ್ಮನಿರುವುದೇ ಲೇಸಲ್ಲವೇ. ಅದೇರೀತಿ ಯುದ್ಧ ಮಾಡಿ ತತ್ಪ್ರಯುಕ್ತ ಬಂದ ದುಃಖವನ್ನು ಅಭಿಮಾನ ತ್ಯಾಗದಿಂದ ಪರಿಹರಿಸಿಕೊಳ್ಳುವುದಕ್ಕಿಂತ ಯುದ್ದ ಮಾಡದೇನೇ ನಿರ್ದುಃಖರಾಗಿರುವುದು ಒಳ್ಳೆಯದು. ಆದ್ದರಿಂದ ದುಃಖಪ್ರಾಪ್ತವಾದ ಈ ಯುದ್ಧವನ್ನು ನಾನು ಮಾಡಲಾರೆ ಎಂದು ತನ್ನ ಮನದಿಂಗಿತವನ್ನು ತಿಳಿಸಿದನು. *

ಭಾಗ–13

# ಜೀವನಯಜ್ಞ

## ನಿತ್ಯತೃಪ್ತನಿಗೆ ನೈವೇದ್ಯ ಸಮರ್ಪಣೆ

**ಸಂಕಲನ: ಸುನಂದಕೀ**

ಸ್ನಾನವನ್ನು ಮಾಡಿದ ಬಳಿಕ ವಸ್ತ್ರವನ್ನು ಧರಿಸುತ್ತೇವೆ. ಈ ವಸ್ತ್ರಧಾರಣೆಯ ಸಂದರ್ಭದಲ್ಲಿ ವಸ್ತ್ರಾಲಂಕಾರವು ನನಗಲ್ಲ. ನನ್ನ ಅಂತರ್ಯಾಮಿಯಾದ ಭಗವಂತನಿಗೆ, ಭಗವಂತನ ಮಂದಿರಕ್ಕೆ ಮಾಡಿದ ಅಲಂಕಾರ ಎಂದು ಭಾವಿಸಿದರೆ ನಮ್ಮ ವಸ್ತ್ರಧಾರಣೆಯು ಭಗವತ್ಪೂಜೆಯೆನಿಸುವುದು. ಹಾಗೆಯೇ ನಾಮಧಾರಣೆ, ಆಭರಣಗಳ ಧಾರಣೆಯು ಕೂಡ.

ಇನ್ನು ಜೀವಜಾತದ ಸಾಮಾನ್ಯ ಪ್ರವೃತ್ತಿ ಭೋಜನ, ಈ ಭೋಜನವೆನ್ನುವ ಸಾಮಾನ್ಯ ದೈನಂದಿನ ಕಾರ್ಯವು ಅಸಾಮಾನ್ಯ ಸಾಧನಾತ್ಮಕ ಯಜ್ಞವೆನಿಸುವುದು. ನಾವು ಜೀವನಕ್ಕಾಗಿ ನಿತ್ಯದಲ್ಲೂ ತಿನ್ನುವ ಮುಂಚಿತವಾಗಿ ಭಗವಂತನಿಗೆ ಸಮರ್ಪಿಸಬೇಕು. **'ಯದಶ್ನಾಸಿ, ತತ್ಕುರುಷ್ವ ಮದರ್ಪಣಂ'** ಏನನ್ನು ತಿನ್ನುತ್ತೀಯೋ, ಉಣ್ಣುತ್ತೀಯೋ ಅದನ್ನು ಮೊದಲು ನನಗೆ ಅರ್ಪಿಸು ಎಂದು ಗೀತಾಚಾರ್ಯನ ವಾಣಿ. ಆದ್ದರಿಂದ ಆತನಿಗೆ ಮೊದಲು ಸಮರ್ಪಿಸಬೇಕು.

**'ಸಮರ್ಪಣೆ(ನೈವೇದ್ಯ) ಎಂದರೇನು?'**

ಪ್ರಾಕೃತ ಪದಾರ್ಥಗಳಲ್ಲಿರುವ ಭಗವದ್ರೂಪಗಳ ಚಿಂತನೆಯೇ ಸಮರ್ಪಣೆ. ನಿತ್ಯತೃಪ್ತನಾದ ಮತ್ತು ಅಪ್ರಾಕೃತನಾದ ಭಗವಂತನಿಗೆ ನಮ್ಮ ಪ್ರಾಕೃತ ಪದಾರ್ಥಗಳಿಂದ ಏನೂ ಲಾಭವಿಲ್ಲ. ಆದರೂ ಭಕ್ತರಿಗಾಗಿ ಪ್ರಾಕೃತ ಪದಾರ್ಥಗಳಲ್ಲಿರುವ ಸ್ವಾಖ್ಯರಸವನ್ನು ಭಗವಂತನು ಸ್ವೀಕರಿಸುವ ಎಂದು ನಾವು ಚಿಂತಿಸಬೇಕು. ಕರುಣೆಯಿಂದ ಕೇಶವನು ಕೊಟ್ಟ ಪದಾರ್ಥಗಳನ್ನು ಆ ಸ್ವಾಮಿಗೆ ಸಮರ್ಪಿಸಿ ಕೃತಕೃತ್ಯರಾಗಬೇಕು. 'ಕೆರೆಯ ನೀರನ್ನು ಕೆರೆಗೆ ಚೆಲ್ಲಿದಂತೆ' ನೈವೇದ್ಯದ ಪ್ರಕ್ರಿಯೆಯು ಕೃತಜ್ಞತೆಯ ಸೂಚನೆಗೆ ಭಗವಂತನು ಕರುಣಿಸಿ ಕೊಟ್ಟ ಒಂದು ಸುಂದರ ಸದವಕಾಶ. ಈ ಸತ್ಕರ್ಮವು ಸುಜೀವಿಯಲ್ಲಿ ನಿರಹಂಕಾರತೆಯನ್ನು ಬೆಳಗಿಸುವುದು.

'ದೇವರಿಗೆ ನಿತ್ಯ ನೈವೇದ್ಯ ಮಾಡುವ ವ್ಯಕ್ತಿಯು ಹೇಗೆ ಅನುಸಂಧಾನಿಸಬೇಕು?'

### ಅಡಿಗೆಯ ಉಪಕರಣಗಳಲ್ಲಿ ಭಗವದ್ರೂಪಗಳು

1) ಅಡಿಗೆ ಮಾಡುವ ಒಲೆಗಳಲ್ಲಿ ಅಗ್ನಿದೇವತೆ ಅಭಿಮಾನಿಯಾಗಿದ್ದು ಭಾರ್ಗವನು ನಿಯಾಮಕನಾಗಿರುವನು.

2) ಕುರುಳು, ಕಟ್ಟಿಗೆ, ಇದ್ದಿಲುಗಳಲ್ಲಿ ವಸಂತನು ಅಭಿಮಾನಿಯಾಗಿದ್ದು ಅಲ್ಲಿ ನಿಯಾಮಕ ಭಾರ್ಗವನೇ.

3) ಅಡಿಗೆ ಮಾಡುವ ಪಾತ್ರೆಗಳಲ್ಲಿ ವಾರುಣಿ ದೇವಿಯು ಅಭಿಮಾನಿನಿಯಾಗಿದ್ದು 'ಅನಂತ' ನಾಮಕ ಭಗವಂತನು ನಿಯಾಮಕ.

4) ಬಾಳೆಯೆಲೆ ಇತ್ಯಾದಿಗಳಲ್ಲಿ 'ದುರ್ಗಾ' ದೇವಿಯು ಅಭಿಮಾನಿಯಾಗಿದ್ದು 'ಸತ್ಯನಾಮಕ' ಭಗವಂತನು ನಿಯಾಮಕ.

5) ತುಪ್ಪದ ಬಟ್ಟಲಿನಲ್ಲಿ ಸೌಪರ್ಣಿದೇವಿಯು ಅಭಿಮಾನಿ ದೇವತೆಯಾಗಿ ಅದರಲ್ಲಿ 'ದತ್ತ' ರೂಪಿ ಭಗವಂತನು ನಿಯಾಮಕನಾಗಿರುವನು ಎಂದು ಭಾವಿಸಬೇಕು.

## ಭಗವಂತನಿಗೆ ಅರ್ಪಿಸುವ ಪದಾರ್ಥಗಳನ್ನು ಸಿದ್ಧಗೊಳಿಸುವ ನಿರ್ಜರರು

ಅನ್ನವನ್ನು ಸರಸ್ವತಿ, ಪರಮೇಷ್ಟಿಯರು ಮಾಡುತ್ತಾರೆ. ತೋವ್ವೆಯನ್ನು ಶ್ರೀದೇವಿಯು ಮಾಡುತ್ತಾಳೆ. ಭಕ್ಷ್ಯಗಳನ್ನು ಚತುರ್ಮುಖ ಬ್ರಹ್ಮದೇವರು ಮಾಡುತ್ತಾರೆ. ಪರಮಾನ್ನವನ್ನು ಭಾರತೀದೇವಿಯು ಮಾಡುತ್ತಾಳೆ. ಕಾಯಿಪಲ್ಯೆಗಳನ್ನು ಚಂದ್ರನು ಮಾಡುತ್ತಾನೆ. ಅಡಿಗೆ ಮಾಡುವವರಲ್ಲಿ (ಶ್ರೀದೇವಿ) ಲಕ್ಷ್ಮೀದೇವಿಯು ಇರುವಳು. ಅವಳಲ್ಲಿ 'ವಿಶ್ವಂಭರನಾಮಕ' ಭಗವಂತನು ನಿಯಾಮಕನಾಗಿರುವನು.

ನೈವೇದ್ಯಕ್ಕಾಗಿ ಆಹಾರಪದಾರ್ಥಗಳನ್ನು ಇಡುವ ಮಂಡಲದಲ್ಲಿ ಭೂದೇವಿಯು ಇರುವಳು. ಅವಳಂತರ್ಯಾಮಿಯಾಗಿ 'ಭೂವರಾಹ'ನು ನಿಯಾಮಕನಾಗಿರುವನು.

ಕರ್ಮಾಭಿಮಾನಿಯಾದ ಪುಷ್ಕರನು ಮಾಡಿದ ಪದಾರ್ಥಗಳನ್ನು ಶುದ್ಧಗೊಳಿಸುವನು.

ಆಹಾರ ಪದಾರ್ಥಗಳ ಮೇಲೆ ಹೊದಿಸುವ ವಸ್ತ್ರದಲ್ಲಿ ಗಣಪತಿಯು ಅಭಿಮಾನಿಯಾಗಿದ್ದು ಅಲ್ಲಿ 'ಸನತ್ಕುಮಾರರೂಪಿ' ಭಗವಂತನು ನಿಯಾಮಕನಾಗಿರುವನು.ಆಹಾರಪದಾರ್ಥಗಳಲ್ಲಿ ಹಾಕುವ ತುಳಸಿಯಲ್ಲಿ ರಮಾದೇವಿಯಿರುವಳು. ನೈವೇದ್ಯಯಿಟ್ಟಾಗ ಹಾಕಿದ ಪರದೆಯಲ್ಲಿ ವಿಷ್ವಕ್ಸೇನನು ಇರುವನು. ಅವನಂತರ್ಯಾಮಿ ಪುರುಷನಾಮಕ ಭಗವಂತನು ನಿಯಾಮಕನಾಗಿರುವನು.

### ಆಹಾರಪದಾರ್ಥಗಳಲ್ಲಿರುವ ದೇವತೆಗಳು ಹಾಗೂ ಭಗವದ್ರೂಪಗಳು

| ಆಹಾರಪದಾರ್ಥ | ದೇವತೆ | ಭಗವಂತ |
|---|---|---|
| ಉಪ್ಪು | ನಿರ್ಋತಿ | ಜನಾರ್ದನ |
| ಚಟ್ನಿ ಮೊದಲಾದ ವ್ಯಂಜನಗಳು | ಬ್ರಹ್ಮ-ಬೃಹಸ್ಪತಿ | ಪ್ರದ್ಯುಮ್ನ |
| ತರಕಾರಿ ಪಲ್ಯಗಳು | ಶೇಷ | ಪದ್ಮನಾಭ |

| | | |
|---|---|---|
| ತೊಪ್ಪಲುಪಲ್ಯಗಳು | ಮಿತ್ರನಾಮಕಸೂರ್ಯ | ಹೃಷೀಕೇಶ |
| ತೊವ್ವೆ | ಗರುಡ | ಶ್ರೀಧರ |
| (ಅನಾಮ್ಲ) ಹುಳಿಯಿಲ್ಲದ ಪದಾರ್ಥ | ರುದ್ರ | ಸಂಕರ್ಷಣ |
| (ಖಾರ) ಒಗರು ಪದಾರ್ಥ | ಯಮ | ಅನಿರುದ್ಧ |
| ಪರಮಾನ್ನ | ಭಾರತೀ | ನಾರಾಯಣ |
| ಹುಳಿ ಪದಾರ್ಥಗಳು | ಗೌರೀ | ದಾಮೋದರ |
| ಭಕ್ಷ್ಯಗಳು | ಸೂರ್ಯ | ಮಾಧವ |
| ಮಂಡಿಗೆ | ಬ್ರಹ್ಮ | ಮಧುಸೂದನ |
| ಸಕ್ಕರೆ–ಬೆಲ್ಲ | ಇಂದ್ರ | ವಾಸುದೇವ |
| ಎಣ್ಣೆ–ತುಪ್ಪಗಳಿಂದ ಕರಿದ ಪದಾರ್ಥ | ಜಯಂತ, ಬುಧ | ಅಧೋಕ್ಷಜ |
| ಉದ್ದಿನ ಬೇಳೆಯ ಪದಾರ್ಥ | ಸ್ವಾಯಂಭೂಮನು | ಅಚ್ಯುತ |
| ಸಂಡಿಗೆ, ಹಪ್ಪಳ | ದಕ್ಷಪ್ರಜಾಪತಿ | ನಾರಸಿಂಹ |
| ಹಣ್ಣಿನ ರಸ | ಪ್ರಾಣ | ಉಪೇಂದ್ರ |
| ಅನ್ನ | ಚಂದ್ರ | ಕೇಶವ |
| ತುಪ್ಪ | ಲಕ್ಷ್ಮೀ | ಗೋವಿಂದ |
| ಬೆಣ್ಣೆ | ಮುಖ್ಯಪ್ರಾಣ | ತ್ರಿವಿಕ್ರಮ |
| ಹಾಲು | ಸರಸ್ವತೀ | ವಿಷ್ಣು |
| ಮೊಸರು | ಚಂದ್ರ | ವಾಮನ |
| ಕುಡಿಯುವ ನೀರು | ಬುಧ | ಕೃಷ್ಣ |
| ಪರಿಮಳ ದ್ರವ್ಯಗಳು–ಸಾಸಿವೆ ಇಂಗು | | |
| ಏಲಕ್ಕಿ, ಕೇಸರಿ, ಕರ್ಪೂರ | ಮನ್ಮಥ | ಪುರುಷೋತ್ತಮ |
| ಪಾನಕ | ರತೀ | ವಿಶ್ವ |
| ತಾಂಬೂಲ | ಗಂಗಾ | ಹರಿ |

ಈ ರೀತಿ ಪದಾರ್ಥಗಳಲ್ಲಿರುವ ಅಭಿಮಾನಿ ದೇವತೆಗಳಲ್ಲಿರುವ ನಿಯಾಮಕ ಭಗವದ್ರೂಪಗಳನ್ನು ಚಿಂತಿಸಿ ಸಮರ್ಪಿಸಬೇಕು.

*

ಪುರಾಣಸಂದೇಶ

# ಮಾರ್ಕಂಡೇಯಪುರಾಣ

ವಿ॥ ಅಡ್ವೇಲಕ್ಷ್ಮೀಶಾಚಾರ್ಯ

## ಮಗ ತಂದೆಗೆ ಹೇಳಿದ ಬಾಳ ಸಂದೇಶ

ಭೃಗು ಕುಲಜನಾದ ಬ್ರಾಹ್ಮಣನೊಬ್ಬ ಉಪನೀತನಾದ ಜಡನಾದ ತನ್ನ ಮಗನಿಗೆ ಬುದ್ಧಿ ಹೇಳಿದ. ಮಗನೇ! ಗುರು ಶುಶ್ರೂಷೆ, ಭಿಕ್ಷಾಟನೆ, ಅಗ್ನ್ಯುಪಸ್ಥಾನ, ಮೊದಲಾದ ಬ್ರಹ್ಮಚರ್ಯಧರ್ಮವನ್ನು ಪಾಲಿಸಿ, ವೇದವನ್ನೋದಿ, ವಿದ್ಯಾವಂತನಾಗಿ, ಅನುಕೂಲೆಯಾದ ಹೆಣ್ಣಿಗೆ ಗಂಡನಾಗಿ, ಸತ್ಪ್ರಜೆಗಳ ತಂದೆಯಾಗಿ, ಗಾರ್ಹಸ್ಥ್ಯವನ್ನು ಸಂಪಾದಿಸಿ, ಪಂಚಋಣಗಳಿಂದ ಮುಕ್ತನಾಗಿ, ಕೊನೆಗೆ ವಾನಪ್ರಸ್ಥವನ್ನು ಕೈಗೊಂಡು, ಕೊನೆಗೆ ಭಗವಚ್ಚಿಂತನೆಗಾಗಿ ಸನ್ಯಾಸಿಯಾಗಿ, ಬಾಳನ್ನು ಸಾರ್ಥಕ ಮಾಡಿಕೊಳ್ಳಬೇಕು ಎಂದು ಪುತ್ರವಾತ್ಸಲ್ಯದಿಂದ ಪದೇ ಪದೇ ಉಪದೇಶ ಮಾಡುವ ತಂದೆಯ ಶ್ರೇಯಸ್ಸಿಗೆ ಜಡರೂಪಿಯಾದ 'ಸುಮತಿ' ಬಾಯಿ ತೆರೆದ. ಅಪ್ಪ! ಹಿಂದು ಮುಂದು ಗೊತ್ತಿರದ ನಿಮಗೆಲ್ಲಾ ನೀನು ಹೇಳುವ ಸಂಗತಿ ದೊಡ್ಡ ವಿಷಯ ಆದರೆ ನನ್ನ ಮಟ್ಟಿಗೆ ಇದು ಮಾಮೂಲು. ಸಾವಿರಾರು ಜನ್ಮದ ಅನುಭವವನ್ನು ಬಗೆಯಲ್ಲಿ ಹೊತ್ತಿರುವ ನನಗೆ, ಈ ಸಂಸಾರದ ನಿಸ್ಸಾರತೆ ಮನದಟ್ಟಾಗಿದೆ. ಜನ್ಮಾಂತರಗಳಲ್ಲಿ ಸಂಪಾದಿಸಿದ ಲೌಕಿಕ ಅಲೌಕಿಕ ಜ್ಞಾನ ನನ್ನ ಸ್ಮೃತಿಪಟಲದಲ್ಲಿ ಅಚ್ಚಳಿಯದೇ ನಿಂತಿದೆ. ಜಾತವೇದನಾದ ನನಗೆ ಮತ್ತೆ ವೇದಾಧ್ಯಯನದಲ್ಲಿ ತೊಡಗುವುದು, ಚರ್ವಿತ ಚರ್ವಣ ಅಥವಾ ಪಿಷ್ಟ ವೇಷ್ಟನವಷ್ಟೇ. ನಿಮಗೆ ನಾನೊಬ್ಬ ಮಗನ ಪರಿಚಯವಿದ್ದರೆ ನನಗೆ ನಿಮ್ಮಂತಹ ಸಾವಿರಾರು ತಂದೆಯಂದಿರನ್ನು ಕಂಡ ನೆನಪಿದೆ. ತಾಯಿಯ ಗರ್ಭದಲ್ಲಿ ಮಲಮೂತ್ರಗಳ ಮಧ್ಯೆ ಅದೆಷ್ಟೋ ಜನ್ಮಗಳಲ್ಲಿ ಗರ್ಭಾವಾಸದ ಯಾತನೆಯನ್ನು ಅನುಭವಿಸಿದ ನೆನಪಿದೆ. ಭಯಂಕರ ರೋಗಗಳಿಂದ ಪೀಡಿತನಾಗಿ ಜರ್ಝರಿತನಾದ ನೆನಪುಂಟು. ಹೆಂಡತಿ ಮಕ್ಕಳು ಮನೆಗಾಗಿ ಪಟ್ಟಪಾಡಿನ ಗುರುತಿದೆ. ನಾನಾ ಯೋನಿಗಳಲ್ಲಿ ಬೆಂದು ಬಂದ ಬಂಧಿಯೆಂದು ಗೊತ್ತಿದೆ. ಕೊಟ್ಟ, ಪಡಕೊಂಡ ವಿಚಾರಗಳೂ ಸ್ಮೃತಿಯಲ್ಲಿದೆ. ಸತ್ತು, ಸಾಯಿಸಿದ ವಿಚಾರವೂ ಗೊತ್ತಿದೆ. ಮತ್ತೆ ಭ್ರಮಿಸುವ ಚಕ್ರ ಈ ಸಂಸಾರ (ಸಂಸರಣ) ಮುಗಿಯದ್ದು ಎಂಬುದೂ ಚೆನ್ನಾಗಿ ಗೊತ್ತಿದೆ. ಆದ್ದರಿಂದಲೇ ನಿಮ್ಮ ಯಾವ ಮಾತಿಗೂ ಸ್ಪಂದಿಸದೇ **'ಏಕಾಂತಿತ್ವಂ ಉಪಗಮ್ಯ ಯತಿಷ್ಯಾಮಿ ಆತ್ಮಮೋಕ್ಷಣೇ'** ಹಾಗಾಗಿ ನನ್ನ ಕುರಿತಾದ ಚಿಂತೆ ಬಿಟ್ಟು ಬಿಡಿ ಎಂದು ಹೇಳಿದಾಗ,

ವಿಸ್ಮಿತನಾದ ತಂದೆ ಮಗನ ಮಾತಲ್ಲಿ ಶ್ರದ್ಧೆಯನ್ನು ತಾಳಿ ಕೇಳಿದ. ಈ ಸಂಸಾರ ಸ್ವರೂಪವನ್ನು ಹೇಳು ಎಂದು. ಅದಕ್ಕೆ ಮಗ ಈ ರೀತಿಯಾಗಿ ಉತ್ತರ ಕೊಟ್ಟ.

ಜನಕ! ಈ ಸಂಸಾರವೆಂಬ ಚಕ್ರಕ್ಕೆ ನಿಲುಗಡೆಯೇ ಇಲ್ಲ. ಹುಟ್ಟುವುದು, ಬೆಳೆಯುವುದು, ಬೆಳೆಸುವುದು, ಸಾಯುವುದು ಮತ್ತೆ ಹುಟ್ಟುವುದು ಅನಾದಿಕಾಲದಿಂದ ಬಂದ ಜೀವನ ಸ್ಥಿತಿಯಿದು. ಉತ್ಕ್ರಾಂತಿಕಾಲವನ್ನಾಧರಿಸಿ ಎಲ್ಲವನ್ನು ಹೇಳುವೆ ಕೇಳು. ಮೃತ್ಯುವಿನ ಕರಗಂಟೆಯಂತಿರುವ ಆ ಆತುರ ಕಾಲದಲ್ಲಿ ಮನುಷ್ಯ ಪರಲೋಕದಲ್ಲಿ ಸುಖವನ್ನು ಬಯಸುವ ಇಚ್ಛೆಯಿಂದ ಜಲ, ಅನ್ನದಾನಗಳನ್ನು ಮಾಡಬೇಕು. ಸಾವಿಗೆ ಹೆದರದೆ ದೇವರ ಧ್ಯಾನದಲ್ಲಿ ಮರಣೋನ್ಮುಖನಾದ ಜೀವ ಪರದಲ್ಲಿಯೂ ಸುಖವನ್ನು ಕಾಣುತ್ತಾನೆ. ಉದರಂಭರರಾಗಿ ವೈಷಯಿಕ ಪ್ರಪಂಚದಲ್ಲೇ ಮುಳುಗಿ ಪರಲೋಕದ ಚಿಂತೆಯನ್ನು ಬಿಟ್ಟಿರುವ ಪಾಪಿಗಳು ದಾರುಣವಾದ ಮರಣವನ್ನು ಕಾಣುತ್ತಾರೆ. ಮರಣ ಸಮಯದಲ್ಲಿ ಭೀಕರವಾದ ದೃಶ್ಯಗಳನ್ನು ಕಾಣುತ್ತಾರೆ. ಸಾವಿಗೆ ಹೆದರಿ ಹೆದರಿ ಜೀವ ಬಿಡುತ್ತಾರೆ. ಯಾತನಾದೇಹದ ಮೂಲಕ ಪರಲೋಕದಲ್ಲಿಯೂ ನಾನಾ ತೆರನಾದ ಸಂಕಷ್ಟಗಳಿಗೆ ಒಳಗಾಗುತ್ತಾರೆ. ಜೀವಿತ ಕಾಲದಲ್ಲಿ ಸಾಧನಾ ಶರೀರದಲ್ಲಿ ಮಾಡಿದ ಪುಣ್ಯಕರ್ಮಗಳು ಪರಲೋಕದ ಸುಖಕ್ಕೆ ಕಾರಣವಾಗುತ್ತವೆ. ಪಾಪಕರ್ಮಗಳೆ ಅಲ್ಲಿ ದುಃಖಕ್ಕೆ ಕಾರಣವಾಗುತ್ತವೆ. ಪುಣ್ಯಾತ್ಮರು  ವಿಮಾನಾದಿಗಳಲ್ಲಿ ವಿಹಾರ ಮಾಡಿದರೆ ಪಾಪಿಗಳು ಕ್ರೂರವಾದ ಯಮಮಾರ್ಗದಲ್ಲಿ ಯಾತನಾದೇಹದ ಮೂಲಕ ನಡೆಯುವುದಕ್ಕೂ ಅಶಕ್ತರಾಗಿ ಯಮದೂತರ ಚಾಟಿ ಏಟಿನ ಹೆದರಿಕೆಯಿಂದ ಬಸವಳಿಯುತ್ತಾರೆ. ವರ್ಷಾಂತ್ಯದಲ್ಲಿ ಪುಣ್ಯಾತ್ಮರು ಪುಣ್ಯಲೋಕಗಳ ದಿವ್ಯ ಭೋಗಕ್ಕೆ ಪಾತ್ರರಾದರೆ, ಪಾಪಿಗಳು ಕುಂಭೀಪಾಕಾದಿ ನರಕ–ಭಾಜನರಾಗುತ್ತಾರೆ. ಪುಣ್ಯಾತ್ಮರು ಪುಣ್ಯ ಫಲವನ್ನುಂಡು ಶಿಷ್ಟಪುಣ್ಯವನ್ನು ಕಟ್ಟಿಕೊಂಡು ಮತ್ತೆ ಭೂಮಿಯಲ್ಲಿ ಸತ್ಕುಲದಲ್ಲಿ ಹುಟ್ಟಿ ಸಾಧನೆ ಮಾಡುತ್ತಾರೆ. ಪಾಪಿಗಳು ಪಾಪ ಶೇಷವನ್ನು ಹೊತ್ತು ನೀಚಯೋನಿಗಳಲ್ಲಿ ಹುಟ್ಟಿ ಬೆಳೆಯುತ್ತಾರೆ. ಸ್ವರ್ಗದಿಂದಲೋ ನರಕದಿಂದಲೋ ಬಂದ ಜೀವ ತಂದೆಯ ಶರೀರದಿಂದ ರೇತಸ್ಸಿನ ಮೂಲಕ ತಾಯಿಯ ಶರೀರವನ್ನು ಪ್ರವೇಶ ಮಾಡುತ್ತದೆ. ತಾಯಿಯ ಗರ್ಭದಲ್ಲಿ ಕಲಲ, ಬುದ್ಬುದ, ಪೇಶಿ ಹೀಗೆ ಆಕಾರವನ್ನು ಪಡೆಯುತ್ತಾ ತಲೆಯೇ ಮೊದಲಾದ ಅಂಗಗಳನ್ನು ಪಡೆಯುತ್ತಾ ಜರಾಯುವೆಂಬ ಪೊರೆಯಿಂದಾವೃತನಾಗಿ ಪಂಜರದ ಹಕ್ಕಿಯಂತೆ ಹೊಟ್ಟೆಯಲ್ಲಿ ಬಂಧಿತನಾಗುತ್ತಾನೆ.

**(ಸಶೇಷ)**

# ಹರಿಕಥಾಮೃತಸಾರ

ವಿದ್ವಾನ್ ಅಪ್ಪಣಾಚಾರ್ಯ, ಕೌತಾಳಂ

ಇದೇ ಭಾವವನ್ನು ಹರಿಕಥಾಮೃತಸಾರಗ್ರಂಥದ ಔನ್ನತ್ಯವನ್ನು, ಅದರಿಂದ ದೊರೆಯುವ ಫಲವನ್ನು ವಿಶದಪಡಿಸಿರುವದು.

ಪರಮ ತತ್ತ್ವ ರಹಸ್ಯವಿದು ಭೂ–
ಸುರರು ಕೇಳ್ವದು ಸಾದರದಿ ನಿ–
ಷ್ಠುರಿಗಳಿಗೆ ಮೂಢರಿಗೆ ಪಂಡಿತಮಾನಿ ಪಿಶುಣರಿಗೆ
ಅರಸಿಕರಿಗಿದು ಪೇಳ್ವುದಲ್ಲ–ನ
ವರತ ಭಗವತ್ಪಾದಯುಗಳಾಂ
ಬುರುಹ ಮಧುಕರರೆನಿಸುವರಿಗರುಹುವುದು ಮೋದದಲಿ ॥

ಲೋಕವಾರ್ತೆಯಿದಲ್ಲ ಪರಲೋ
ಕೈಕನಾಥನ ವಾರ್ತೆ ಕೇಳ್ವಡೆ
ಕಾಕುಜನರಿಗಿದು ಸಮರ್ಪಕವಾಗಿ
ಕೋಕನದ ಪರಿಮಳವು ವಪ್ಪಿದ
ಸ್ವೀಕರಿಸುವಂದದಲಿ ಜಲಚರ
ಭೇಕ ಬಲ್ಲುದೇ ಇದರ ಸುಖಹರಿಭಕುತಗಲ್ಲದಲೆ

ಯುಕ್ತಿ ಮಾತುಗಳಲ್ಲ ಶ್ರುತಿ ಸ್ಮೃ
ತ್ಯುಕ್ತ ಮಾತುಗಳಿವು ವಿಚಾರಿಸೆ
ಮುಕ್ತಿಗಿವು ಸೋಪಾನವೆನಿಪುವು ಪ್ರತಿಪ್ರತಿಪದವು
ಭಕ್ತಿಪೂರ್ವಕ ಪಠಿಸುವವರಿಗೆ
ವ್ಯಕ್ತಿ ಕೊಡುವ ಸ್ವರೂಪಸುಖ ಪ್ರವಿ
ರಕ್ತನ ಮಾಡುವನು ಭವಭಯದಿಂದ ಬಹುರೂಪ ॥

ಪತಿತನ ಕಪಾಲದೊಳು ಭಾಗೀ
ರಥಿಯ ಜಲವಿರೆ ಪೇಯವೆನಿಪುದೇ
ಇತರ ಕವಿನಿರ್ಮಿತ ಕುಕಾವ್ಯಾಶ್ರಾವ್ಯ ಬುಧರಿಂದ
ಕೃತಿಪತಿಕಥಾನ್ವಿತವೆನಿಪ ಪ್ರಾ–
ಕೃತವೆ ತಾ ಸಂಸ್ಕೃತವೆನಿಸಿ ಸ–
ದ್ಗತಿಯ ನೀವುದು ಭಕ್ತಿಪೂರ್ವಕ ಕೇಳಿ ಪೇಳ್ವರಿಗೆ ॥

ಇವೇ ಮೊದಲಾದ ದಾಸರ ವಾಕ್ಯಗಳಿಂದ ಹರಿಕಥಾಮೃತಸಾರಕ್ಕಿರುವ ಮಹತ್ತ್ವವೂ ಮೋಕ್ಷಪ್ರದಾತೃತ್ತ್ವವೂ ಸ್ಪಷ್ಟವಾಗುವುದು

ಜಗನ್ನಾಥದಾಸರಿಂದ ಜನ್ಮಧನ್ಯ ಮಾಡಿಕೊಂಡು ಅಪರೋಕ್ಷ ಜ್ಞಾನಿಗಳೆನಿಸಿದ ಶ್ರೀದವಿಠಲರೇ ಮೊದಲಾದವರು ಹರಿಕಥಾಮೃತಸಾರಗ್ರಂಥವನ್ನು ಬಹುಮುಖತಃ ಕೊಂಡಾಡಿರುವರು. ಶ್ರೀದವಿಠಲದಾಸರು ತಮ್ಮ ಫಲಸ್ತುತಿಯಲ್ಲಿ

ವತ್ತಿಬಹ ವಿಘ್ನಗಳ ತಡೆದಪ–
ಮೃತ್ಯುವನೆ ಮರೆಮಾಡಿ ಕಾಲನ
ಭೃತ್ಯರಿಗೆ ಭೀಕರವ ಪುಟ್ಟಿಸಿ ಸಕಲ ಸಿದ್ಧಿಗಳ ।
ವ್ಯಕ್ತಗೊಳಿಸಿ ವನರುಹೇಕ್ಷಣ
ನೃತ್ಯಮಾಡುವನವನ ಮನೆಯೊಳು
ನಿತ್ಯಮಂಗಳ ಹರಿಕಥಾಮೃತಸಾರ ಪಠಿಸುವರ ॥

ಅಕ್ಕರದಲೀ ಕಾವ್ಯದೊಳಗೊಂ–
ದಕ್ಕರದ ಬರೆದೋದಿದವ ದೇ–
ವರ್ಕಗಳಿಗೆ ದುಸ್ತ್ಯಜನೆನಿಸಿ ಧರ್ಮಾರ್ಥಕಾಮಗಳ ।
ಲೆಕ್ಕಿಸದೆ ಲೋಕೈಕನಾಥನ
ಭಕ್ತಿಭಾಗ್ಯವ ಪಡೆವ ಜೀವ–
ನ್ಮುಕ್ತಗಲ್ಲದೆ ಹರಿಕಥಾಮೃತಸಾರ ಸೊಗಸುವುದೇ ॥

ಎಂದು ಹೇಳಿ ಹರಿಕಥಾಮೃತಸಾರ ಮಹಾತ್ಮೆಯನ್ನು ಮನದಣಿಯೇ ವರ್ಣಿಸಿರುವರು.

(ಸಶೇಷ)

ಮುಖಪುಟಲೇಖನ

# ಹೃದಯದೊಳಗೆ ಹುದುಗಿಸಯ್ಯ ಮಧುಸೂದನ

–ಬೊಮ್ಮಾರಬೆಟ್ಟು ಶ್ರೀನಿವಾಸ ಭಟ್ಟ

ಭಗವಂತನ ಕೇಶವಾದಿ ರೂಪಗಳಲ್ಲಿ ಆರನೆಯದ್ದು ಶ್ರೀಮಧುಸೂದನ ರೂಪ. ವೈಶಾಖಮಾಸದ ನಿಯಾಮಕನಾದ ಮಧುಸೂದನರೂಪಿ ಪರಮಾತ್ಮನ ಮೇಲಿನ ಬಲಗೈಯಲ್ಲಿ ಶಂಖವನ್ನು ಎಡಗೈಯಲ್ಲಿ ಪದ್ಮವನ್ನು ಕೆಳಗಿನ ಎಡಗೈಯಲ್ಲಿ ಗದೆಯನ್ನು ಬಲಗೈಯಲ್ಲಿ ಚಕ್ರವನ್ನೂ ಧರಿಸಿರುವನೆಂದು ಶ್ರೀಮಧ್ವಾಚಾರ್ಯರು ತಂತ್ರಸಾರಸಂಗ್ರಹದಲ್ಲಿ ತಿಳಿಸಿದ್ದಾರೆ.

1. ಮಧು ಎಂಬ ಹೆಸರುಳ್ಳ ದೈತ್ಯನನ್ನು ಸಂಹರಿಸಿದ್ದರಿಂದ ಭಗವಂತನಿಗೆ ಮಧುಸೂದನ ಎಂದು ಹೆಸರು.

2. ಸೂದ ಎಂಬ ಶಬ್ದಕ್ಕೆ ಅಡುಗೆಯವನು ಎಂದು ಅರ್ಥ. ಮಧುಸೂದ ಎಂದರೆ ಚೆನ್ನಾಗಿ ಅಡುಗೆ ಮಾಡುವವನು ಎಂದು ಅರ್ಥ. ಅಂದರೆ ಭೀಮ. ಆ ಭೀಮದೇವರನ್ನು ಪ್ರೇರೇಪಿಸುವವನಾದ್ದರಿಂದ ಭಗವಂತನಿಗೆ ಮಧುಸೂದನ ಎಂಬ ಹೆಸರು.

**3**. ಮಧುಶಬ್ದಕ್ಕೆ ಸುಖಸಾಧನಗಳಾದ ಪೃಥಿವ್ಯಾದಿ ವಿಷಯಪದಾರ್ಥಗಳು ಎಂದು ಅರ್ಥ. ಅದನ್ನೆಲ್ಲಾ ಪ್ರಳಯಕಾಲದಲ್ಲಿ ನಾಶಮಾಡುವವನಾದ್ದರಿಂದ ಭಗವಂತನಿಗೆ ಈ ಅಭಿಧಾನ. ಇದೇ ಅರ್ಥವನ್ನು ಮಹಾಭಾರತದ ಉದ್ಯೋಗಪರ್ವದಲ್ಲಿ **ಸರ್ವತತ್ವಲಯಾಚ್ಚೈವ ಮಧುಹಾ ಮಧುಸೂದನಃ**. ಎಂಬ ವಾಕ್ಯದಲ್ಲಿ ತಿಳಿಸಿದ್ದಾರೆ.

4. ಉದ ಶಬ್ದಕ್ಕೆ ಕರ್ಮ ಮತ್ತು ಜ್ಞಾನ ಎಂದು ಅರ್ಥ. ಸೂದ ಎಂದರೆ ಒಳ್ಳೆಯ ಕರ್ಮ–ಜ್ಞಾನವುಳ್ಳವರು ಅಂದರೆ ದೇವತೆಗಳು ಎಂದು ಅರ್ಥ. ಆ ದೇವತೆಗಳಿಗೆ ಆನಂದವನ್ನು ಕೊಡುವವನಾದ್ದರಿಂದ ದೇವನಿಗೆ ಈ ನಾಮಧೇಯ.

5. ತೈತ್ತರೀಯಭಾಷ್ಯದಲ್ಲಿ **ತ ಉದಾ ಜೀವಸಂಘಾಃ ಸ್ಯುಃ** ಎಂಬುದಾಗಿ ಉದ ಶಬ್ದಕ್ಕೆ ಜೀವರ ಸಮುದಾಯ ಎಂಬ ಅರ್ಥವನ್ನು ತಿಳಿಸಿದ್ದಾರೆ. ಸೂದ ಅಂದರೆ ಸಜ್ಜನರ ಸಮುದಾಯ ಎಂದು ಅರ್ಥ. ಸಜ್ಜನರ ಸಮುದಾಯಕ್ಕೆ ಸುಖವನ್ನು ಕೊಡುವವನಾದ್ದರಿಂದ ಭಗವಂತನಿಗೆ ಮಧುಸೂದನನೆಂಬ ಹೆಸರು.

6. **ಮಧ್ವಿತ್ಯಾನಂದ ಉದ್ದಿಷ್ಟಃ** ಎಂಬಲ್ಲಿ ಮಧು ಶಬ್ದಕ್ಕೆ ಆನಂದ ಎಂಬ ಅರ್ಥವನ್ನು ತಿಳಿಸಿದ್ದಾರೆ ಆದ್ದರಿಂದ ಮಧುಸೂದನ ಅಂದರೆ ಜೀವರ ಯೋಗ್ಯತೆಗಿಂತ ಹೆಚ್ಚಾದ ಸುಖವನ್ನು ನಾಶಮಾಡುವವನು ಎಂದು ಅರ್ಥ.

ಶ್ರೀಮಧ್ವಾಚಾರ್ಯರು ದ್ವಾದಶಸ್ತೋತ್ರದಲ್ಲಿ ಮಧುಸೂದನರೂಪಿ ಪರಮಾತ್ಮನನ್ನು

**ಮಧುಸೂದನ ದಾನವಸಾದನ ವಂದೇ ದೈವತಮೋದನ ವೇದಿತಪಾದ॥**

ಎಂಬುದಾಗಿ ಸ್ತುತಿಸಿದ್ದಾರೆ. ಇಲ್ಲಿ ಆಚಾರ್ಯರ ಎರಡು ವಿಶೇಷಣಗಳು ಮಧುಸೂದನ ಪದದ ಅರ್ಥವನ್ನು ಪ್ರತಿಪಾದಿಸುತ್ತವೆ. ದಾನವಸಾದನ ಎಂದರೆ ದೈತ್ಯರನ್ನು ನಾಶಮಾಡುವವ ಎಂದು ಅರ್ಥ. ಅದನ್ನು ವಿಶೇಷಣವಾಗಿ ಕೊಟ್ಟಿದ್ದರಿಂದ ಮಧುನಾಮಕ ದೈತ್ಯನನ್ನು ಕೊಂದದ್ದರಿಂದ ಮಧುಸೂದನ ಎಂಬ ಅರ್ಥವನ್ನು ತಿಳಿಸಿದ ಹಾಗಾಯಿತು. ದೈವತಮೋದನ ಅಂದರೆ ದೇವತೆಗಳನ್ನು ಸಂತೋಷಪಡಿಸುವವನು ಎಂದು ಅರ್ಥ. ಈ ಅರ್ಥವೂ ಕೂಡ ಮಧುಸೂಧನ ಶಬ್ದ ಪ್ರತಿಪಾದ್ಯ ಎಂಬುದಾಗಿ ಹಿಂದೆಯೇ ನೋಡಿದ್ದೇವೆ.

ಕನಕದಾಸರು **ಮದನನಯ್ಯ ನಿನ್ನ ಮಹಿಮೆ ವದನದಿಂದ ನುಡಿಯುವಂತೆ ಹೃದಯದೊಳಗೆ ಹುದುಗಿಸಯ್ಯ ಮಧುಸೂದನ** ಎಂದು ಸ್ತುತಿಸುತ್ತಿದ್ದಾರೆ. ಭಗವಂತನನ ಪ್ರಸಾದದಿಂದಾಗಿಯೇ ಮೋಕ್ಷಎಂದು ಶಾಸ್ತ್ರಗಳೆಲ್ಲಾ ಸಾರುತ್ತಿರುವ ವಿಚಾರ. ಭಗವಂತನ ಪ್ರಸಾದವು ನಮ್ಮ ಮೇಲೆ ಆಗಬೇಕಾದರೆ ನಾವು ಭಗವಂತನನ್ನು ಸರ್ವೋತ್ತಮ ಎಂದು ತಿಳಿದು ಅವನನ್ನು ಧ್ಯಾನಿಸಬೇಕು. ಅವನ ಸರ್ವೋತ್ತಮತ್ವವನ್ನು ತಿಳಿಯಬೇಕಾದರೆ ವೇದಪುರಾಣಾದಿಗಳಲ್ಲಿ ತಿಳಿಸಿರುವ ಭಗವಂತನ ಮಹಿಮೆಗಳನ್ನೆಲ್ಲಾ ತಿಳಿದುಕೊಂಡು ಆ ಮಹಿಮೆಗಳನ್ನು ಸದಾ ಪಾಡುತ್ತಿರಬೇಕು. ಆಗ ನಮಗೆ ಭಗವಂತನ ಯಥಾರ್ಥಜ್ಞಾನಬಂದು ಪರಮಾನಂದರೂಪವಾದ ಮೋಕ್ಷಪ್ರಾಪ್ತಿಯಾಗಲು ಸಾಧ್ಯ. ಆದ್ದರಿಂದಲೇ ಆನಂದದಾಯಕನಾದ ಮಧುಸೂದನನಲ್ಲಿ ಕನಕದಾಸರು "ನಿನ್ನ ಮಹಿಮೆಗಳನ್ನು ಸದಾ ಪಾಡುವಂತೆ ನನ್ನ ಮನಸ್ಸನ್ನು ಪ್ರೇರೇಪಿಸು" ಎಂದು ಪ್ರಾರ್ಥಿಸಿದ್ದಾರೆ. ಈ ರೀತಿಯಾಗಿ ಶಿಷ್ಟರೆಲ್ಲರಿಂದ ಸ್ತುತಿಸಲ್ಪಟ್ಟ ವಿಶಿಷ್ಟನಾದ ಮಧುಸೂದನರೂಪಿ ಪರಮಾತ್ಮನ ಗರಿಷ್ಠತೆಯನ್ನು ತಿಳಿದು ಸಂತುಷ್ಟರಾಗೋಣ.

★

ಜ್ಯೌತಿಷ ಚಿಂತನೆ

ಭಾಗ-01

# ಬುಧಶ್ಚ ಬುಧತಾಂ ದಿಶೇತ್

-ಶ್ರೀಪತಿ ಉಪಾಧ್ಯಾಯ, ಕುಂಭಾಸಿ

ವಾಕ್ ಕಾರಕನೆಂದೇ ಪ್ರಸಿದ್ಧನಾದ ಬುಧನು ಶಶಿ ನಂದನನು. ಬುದ್ಧಿಯ ತೀವ್ರತೆಯನ್ನು ಸೂಚಿಸುವ ಗ್ರಹನೀತ. ಈತನು ಯುವರಾಜನು. ಪೌರಾಣಿಕವಾಗಿ ಸುರಾಸುರಯುದ್ಧದಲ್ಲಿ ಶುಕ್ರನ ಮಾಯೆಯಿಂದ ವಿಚಲಿತರಾದ ದೇವತೆಗಳ ಪ್ರಾರ್ಥನೆಯಂತೆ ದೇವತೆಗಳ ಮಾರ್ಗದರ್ಶನಕ್ಕೋಸ್ಕರ ಬ್ರಹ್ಮದೇವರ ಆಜ್ಞೆಯಂತೆ ಚಂದ್ರನಿಂದ ಬುಧನು ಉತ್ಪತ್ತಿ ಹೊಂದಿದನು. ಎಲ್ಲಾ ವಿಬುಧಗಣಗಳ ರಕ್ಷಣೆಗೋಸ್ಕರ ಜನಿಸಿದ ಈತನು 'ಬುಧ' ನೆನಿಸಿದನು. ತನ್ನ ಗತಿ, ವರ್ಣ, ಚಾರ, ಮಾರ್ಗ ಉದಯಾಸ್ತಗಳಿಂದ ಜಗತ್ತಿಗೆ ಶುಭಾಶುಭಕಾರಕನಾಗಿರುತ್ತಾನೆ.

ವೈಜ್ಞಾನಿಕವಾಗಿ ಈತನು ಸೂರ್ಯನಿಗೆ ಅತಿ ಸಮೀಪದ ಗ್ರಹ. ಇವನಿಗೆ ಅಂತರಗ್ರಹ ಎಂದು ಹೆಸರು. (ಭೂಮಿ ಮತ್ತು ಸೂರ್ಯನ ನಡುವೆ ಇರುವ ಪ್ರಯುಕ್ತ) ಸೂರ್ಯಾಸ್ತವಾಗಿ 2 ಗಂಟೆಯ ಒಳಗೆ ಇವನ ಅಸ್ತವೂ ಆಗುವಷ್ಟು ಸೂರ್ಯನಿಗೆ ಸಮೀಪದಲ್ಲಿರುವವನು. ತನ್ನ ಅಕ್ಷದ ಮೇಲೆ ಅತಿ ನಿಧಾನವಾಗಿಯೂ ಸೂರ್ಯನ ಸುತ್ತ ಅತಿ ವೇಗವಾಗಿಯೂ ಸಂಚರಿಸುತ್ತದೆ. ಸೌರವ್ಯೂಹದಲ್ಲೇ, ಅತಿ ಚಿಕ್ಕ ಗ್ರಹ. ದೀರ್ಘ ಅಂಡಾಕಾರದ ಕಕ್ಷೆಯಿದ್ದು ಸೂರ್ಯನಿಂದ ಕನಿಷ್ಠ 45 ಮಿಲಿಯನ್ ಗರಿಷ್ಠ 70 ಮಿಲಿಯನ್ ಕಿ.ಮೀ ದೂರದಲ್ಲಿರುವವನು. ಸಮತಲದ ಉಷ್ಣತೆಯಲ್ಲಿ ಸೂರ್ಯನ ಅತಿಸಾಮಿಪ್ಯದಿಂದ ಪ್ರಖರತೆಯೂ, ಏರುಪೇರು ಉಂಟಾಗುತ್ತದೆ. ಕುಳಿಗಳಿಂದ, ಬಂಡೆಗಳಿಂದ ಕೂಡಿದೆ. ಸಮತಲವಿದೆ. ತನ್ನ ಅಕ್ಷದಲ್ಲಿ ಈತನ ಭ್ರಮಣೆ ಎಷ್ಟು ನಿದಾನವೆಂದರೆ ಈತನ ಮೇಲ್ಮೈಯಲ್ಲಿ ಒಂದು ಮಧ್ಯಾಹ್ನದಿಂದ ಇನ್ನೊಂದು ಮಧ್ಯಾಹ್ನವಾಗುವುದರೊಳಗೆ ಭೂಮಿಯಲ್ಲಿ ಆರು ತಿಂಗಳು ಕಳೆದಿರುತ್ತದೆ. ಸೂರ್ಯನ ಸುತ್ತ ಎರಡು ಭಾರಿ ಪರಿಭ್ರಮಣವಾಗುವಾಗ ತನ್ನ ಅಕ್ಷದಲ್ಲಿ ಮೂರು ಬಾರಿ ಭ್ರಮಿಸಿರುತ್ತದೆ. ಇಲ್ಲಿನ ಗರಿಷ್ಠ ತಾಪಮಾನ 427 ಡಿಗ್ರಿ. ಕನಿಷ್ಠ ತಾಪಮಾನ 183 ಡಿಗ್ರಿ. ಬುಧ ಸೂರ್ಯನ ನಡುವಿನ ಅಂತರ 58,000,000 ಕಿ.ಮೀ. (0.39 ಖ.ಮಾ) ಈತನಿಗೆ ವೈಜ್ಞಾನಿಕವಾಗಿ ಯಾವುದೇ ಉಪಗ್ರಹವಿಲ್ಲ.

ಪ್ರಾಚೀನರ ಪ್ರಕಾರ ಕಕ್ಷಾಕ್ರಮದಲ್ಲಿ ಭೂಮಿ, ಚಂದ್ರ, ಬುಧ, ರವಿ,ಕುಜ,ಗುರು, ಶನಿ ಎನ್ನುವುದಾಗಿ ಚಂದ್ರನ ನಂತರ ಭೂಮಿಗೆ ಸಮೀಪದ ಗ್ರಹನೀತ. ಈತನ ಮಧ್ಯಮ ಗತಿ 245-32 (245 ಕಲೆ-32 ವಿಕಲೆ) ಸೂರ್ಯನಿಂದ 11ಡಿಗ್ರಿ ದೂರದಲ್ಲಿ ಅಸ್ತಂಗತನಾಗುವನು. ಮಧ್ಯಮ ಬುಧನು ಮಂದಫಲ ಹಾಗೂ ಶೀಘ್ರಫಲ ಸಂಸ್ಕಾರದಿಂದ ಸ್ಪಷ್ಟನಾಗುವನು. ಈತನ ಬಿಂಬ ಪ್ರಮಾಣ 11 ವಿಕಲೆ. (ಕುಜ 6"-ಗುರು 32", ಶುಕ್ರ 10", ಶನಿ 19")

ರವಿಯಿಂದ 19ಡಿಗ್ರಿಯ ಅಂತರದಲ್ಲಿ ಸ್ತಂಭನವನ್ನು ಹೊಂದಿ ಒಟ್ಟು 22 ದಿನಗಳು ವಕ್ರನಾಗುವನು. ಈತನು ಸೂರ್ಯನಿಂದ ಅಸ್ತನಾಗುವಾಗ ಉತ್ಪಾತವನ್ನು (ಜಲ, ಅಗ್ನಿ ವಾಯುಪ್ರಕೋಪ) ಉಂಟುಮಾಡಿದರೆ ಉದಯಿಸುವಾಗ ಕ್ಷೇಮವನ್ನು ಉಂಟುಮಾಡುವನು. ಅಸ್ತದಲ್ಲಿ ಕ್ಷೇಮವಾದರೆ ಉದಯಿಸುವಾಗ ವ್ಯತಿರಿಕ್ತ ಪರಿಣಾಮಗಳಾಗುವುವು. ಈತನಿಗೆ ಸಂಹಿತಾಗ್ರಂಥದಲ್ಲಿ ನಕ್ಷತ್ರಯೋಗದಿಂದ ಪ್ರಾಕೃತ, ಮಿಶ್ರ, ಸಂಕ್ಷಿಪ್ತ, ತೀಕ್ಷ್ಣ, ಯೋಗಾಂತಿಕಾ, ಘೋರಾ, ಪಾಪಾಖ್ಯ ಎಂಬ ಆರು ಗತಿಗಳು ಹೇಳಲ್ಪಟ್ಟಿದೆ. ಹೇಮ, ಶುಕ, ಸ್ನಿಗ್ಧ, ವಿಸ್ತೀರ್ಣ ಎಂಬ ನಾಲ್ಕು ವಿಧದ ಬಿಂಬರೂಪಗಳನ್ನು ಹೊಂದಿರುತ್ತಾನೆ. ರಾಜ ರವಿ ಸಿಂಹವನ್ನು ರಾಣಿ ಶಶಿ ಕರ್ಕವನ್ನು ಸ್ವಕ್ಷೇತ್ರವನ್ನಾಗಿಸಿಕೊಂಡಾಗ ಇಕ್ಕೆಲದ ಮಿಥುನ ಕನ್ಯಾರಾಶಿಯನ್ನು ಬುಧನು ಸ್ವಕ್ಷೇತ್ರವನ್ನಾಗಿಸಿಕೊಂಡನು. ಈತನಿಗೆ ಕನ್ಯಾರಾಶಿಯು ಉಚ್ಚ, ಮೂಲತ್ರಿಕೋಣ, ಸ್ವಕ್ಷೇತ್ರಗಳಾಗಿವೆ. ಕನ್ಯಾರಾಶಿಯ ಮೊದಲ 15 ಭಾಗ ಸ್ವಕ್ಷೇತ್ರವಾಗಿಯೂ ವಿಭಾಗಿಸಲ್ಪಟ್ಟಿದೆ. ಕನ್ಯಾರಾಶಿಯ 15ನೇ ಅಂಶವು ಪರಮೋಚ್ಚ ಅಂಶವಾದರೆ ಮೀನರಾಶಿಯ 15ನೇ ಅಂಶವು ಪರಮನೀಚಾಂಶವಾಗಿದೆ. ಈತನಿಗೆ ಬುಧ, ಬೋಧನ, ತಾರಾತನಯ, ಸೌಮ್ಯ, ಇಂದುಪುತ್ರ ಎಂಬಿತ್ಯಾದಿ ಅನೇಕ ಹೆಸರುಗಳಿವೆ. ಅರ್ಧಪ್ರಹರ ಬುಧನ ಉಪಗ್ರಹವಾಗಿದೆ.

(ಸಶೇಷ)

## ಶ್ರೀಮಠದ ಅಂತರ್ಜಾಲತಾಣಗಳು

ಶ್ರೀಮಠದ ಅಧಿಕೃತ ಅಂತರ್ಜಾಲತಾಣ **www.palimarumatha.org** ಪ್ರಾರಂಭವಾಗಿದ್ದು ಶ್ರೀಮಠದ ಎಲ್ಲಾ ಕಾರ್ಯಕ್ರಮ ವಿವರಗಳು, ಶಾಖಾಮಠದ ವಿವರಗಳು ಗುರುಕುಲದ ವಿವರಗಳು ಇತ್ಯಾದಿ ಹತ್ತು ಹಲವು ವಿಷಯಗಳು ದಿನದ ಎಲ್ಲಾ ಸಮಯದಲ್ಲೂ ಲಭ್ಯವಿರುತ್ತದೆ. ಹಾಗೂ ಸರ್ವಮೂಲದ ಪತ್ರಿಕೆಗಳು ಇದರಲ್ಲಿ ಲಭ್ಯ. ಶ್ರೀಕೃಷ್ಣನಿಗೆ ವಜ್ರಕವಚ ಸಮರ್ಪಣೆಯ ವಿಡಿಯೋ, ಧಾರ್ಮಿಕ-ಅಧ್ಯಾತ್ಮಿಕ ಕಾರ್ಯಕ್ರಮಗಳ ವಿಡಿಯೋಗಳು ಉಚಿತವಾಗಿ ಲಭ್ಯವಿದೆ.

## ಮಧ್ವಮತ ಪ್ರಚಾರಕ್ಕಾಗಿ ಶ್ರೀಮಠದಿಂದ ವಿಶಿಷ್ಟವಾದ ಒಂದು ಯೋಜನೆ

ಶ್ರೀಮಠದ ಇನ್ನೊಂದು ಅತ್ಯುತ್ತಮ ಸೇವೆಗಳಲ್ಲಿ ಒಂದಾದ **ಪ್ರವಚನ ನೇರಪ್ರಸಾರ** ಶ್ರೀಗಳ ಪ್ರವಚನ ಎಲ್ಲೇ ನಡೆಯುತ್ತಿರಲಿ ಅದನ್ನು ನೀವು ನಿಮ್ಮ ಮನೆಯಲ್ಲಿಯೇ ಕೇಳಬಹುದು. **www.livepravachana.com** ಅಂತರ್ಜಾಲತಾಣದಲ್ಲಿ ಉಚಿತವಾಗಿ ಶ್ರೀಗಳ ಎಲ್ಲಾ ಪ್ರವಚನಗಳು ಲಭ್ಯವಿದೆ. ಎಲ್ಲಾ ಮಾಧ್ವಬಂಧುಗಳು ಇದರ ಉಪಯೋಗವನ್ನು ಪಡೆಯಬೇಕೆಂದು ಅಪೇಕ್ಷಿಸುತ್ತೇವೆ.

**Palimarumatha Web Team**

ಪುರಾಣ ಪರಿಚಯ ಭಾಗ–31

# ಶ್ರೀವಿಷ್ಣುಪುರಾಣ

## ಹಿರಣ್ಯಕನ ಕೆಟ್ಟ ಪ್ರಶ್ನೆಗೆ ಪ್ರಹ್ಲಾದನ ದಿಟ್ಟ ಉತ್ತರ

–ಸ್ಫೂರ್ತಿ

ಮೈತ್ರೇಯರಿಂದ ಪ್ರಶ್ನಿಸಲ್ಪಟ್ಟ ಪರಾಶರರು ಪ್ರಹ್ಲಾದಚರಿತ್ರೆಯನ್ನು ವಿಸ್ತಾರವಾಗಿ ತಿಳಿಸಲು ಆರಂಭಿಸಿದರು. ದಿತಿಯ ಪುತ್ರನಾದ ಹಿರಣ್ಯಕಶಿಪುವು ಬ್ರಹ್ಮನ ವರದಿಂದ ಕೊಬ್ಬಿದವನಾಗಿ ಮೂರುಲೋಕಗಳನ್ನು ವಶಮಾಡಿಕೊಂಡನು. ಅವನೇ ಇಂದ್ರನಾದ, ಸೂರ್ಯನಾದ, ಅಗ್ನಿ–ವಾಯು–ವರುಣನಾದ. ಯಜ್ಞಗಳ ಎಲ್ಲ ಆಹುತಿಗಳನ್ನು ತಾನೇ ಸ್ವೀಕರಿಸಿದ. ಇವನ ದೌರ್ಜನ್ಯವನ್ನು ಸಹಿಸಲಾಗದೆ ದೇವತೆಗಳು ಸ್ವರ್ಗವನ್ನು ತ್ಯಜಿಸಿ ಮನುಷ್ಯರೂಪವನ್ನು ತೊಟ್ಟು ಭೂಮಿಯಲ್ಲಿ ಸಂಚರಿಸಿದರು. ಮೂರುಲೋಕಗಳನ್ನು ಗೆದ್ದ ಹಿರಣ್ಯಕಶಿಪುವು ಎಲ್ಲ ಸುಖಭೋಗಗಳನ್ನೂ ಅನುಭವಿಸಿದ. ಪಾನಮತ್ತನಾದ ಆತನನ್ನು ಗಂಧರ್ವರು ಹಾಡಿದರು. ಅಪ್ಸರೆಯರು ನರ್ತಿಸಿದರು. ಎಲ್ಲರೂ ಸೇವಿಸಿದರು.

ಆತನ ಪುತ್ರ ಪ್ರಹ್ಲಾದ ಮಹಾತ್ಮಾ. ಬಾಲಪಾಠಗಳನ್ನು ಗುರುಕುಲದಲ್ಲಿ ಕಲಿಯುತ್ತಿದ್ದ ಆತನು ಒಮ್ಮೆ ಗುರುಗಳೊಡನೆ ತಂದೆಯ ಬಳಿಗೆ ಬಂದನು. ಕುಡಿತದಲ್ಲಿ ನಿರತನಾದ ತಂದೆಗೆ ನಮಸ್ಕರಿಸಿದನು. ತಲೆಬಾಗಿದ ಪ್ರಹ್ಲಾದನನ್ನು ಮೇಲೆತ್ತಿದ ತಂದೆಯು 'ಮಗು, ಇಷ್ಟು ದಿನಗಳ ಕಾಲ ಅಧ್ಯಯನದಲ್ಲಿಯೆ ನಿರತನಾದ ನೀನು ಇಲ್ಲಿಯವರೆಗೆ ಕಲಿತ ಪಾಠಗಳ ಸಾರಭೂತವಾದ ಮಾತನ್ನು ಹೇಳು' ಎಂದು ಹೇಳಿದನು.

**ಪ್ರಹ್ಲಾದ–** ತಂದೆಯೆ, ನಿಮ್ಮ ಆಜ್ಞೆಯಂತೆ ಸಾರಭೂತವಾದ ಮಾತನ್ನು ಹೇಳುತ್ತೇನೆ, ಕೇಳಿರಿ. ಯಾರು ನನ್ನ ಹೃದಯದಲ್ಲಿ ಸದಾ ನೆಲೆಸಿದ್ದು, ಆದಿ–ಮಧ್ಯ–ಅಂತರಹಿತನಾಗಿ, ಪ್ರಾಕೃತಜನ್ಮರಹಿತನಾಗಿ, ವೃದ್ಧಿ, ಕ್ಷಯರಹಿತನಾಗಿ, ಜಗತ್ತಿನ ಸೃಷ್ಟಿ–ಲಯಗಳಿಗೆ ಕಾರಣನಾಗಿದ್ದಾನೋ ಅಂತಹ ಭಗವಂತನಿಗೆ ಏಕಾಗ್ರಚಿತ್ತನಾಗಿ ನಮಸ್ಕರಿಸುತ್ತೇನೆ.

ಈ ಮಾತನ್ನು ಕೇಳಿ ಕೋಪದಿಂದ ಕೆಂಗಣ್ಣಿನಿಂದ ಕೂಡಿದ ಹಿರಣ್ಯಕಶಿಪುವು ಪ್ರಹ್ಲಾದನ ಗುರುವನ್ನು ನೋಡಿ, 'ಎಲೈ ಬ್ರಹ್ಮಬಂಧುವೇ, ನನ್ನ ಶತ್ರುವಿನ ಸಾರರಹಿತವಾದ ಸ್ತುತಿ ಈ ಬಾಲಕನಿಗೆ ಹೇಗೆ ಬಂತು'? ಎಂದು ಪ್ರಶ್ನಿಸಲು ಗುರುವು 'ದೈತ್ಯೇಂದ್ರ ಸಿಟ್ಟುಗೊಳ್ಳಬೇಡ. ನನ್ನ ಉಪದೇಶದ ಒಂದೇ ಒಂದು ಮಾತನ್ನೂ ಈತನು ಹೇಳುತ್ತಿಲ್ಲ' ಎಂದು ಹೇಳಿದರು. ಹಿರಣ್ಯಕಶಿಪು ತಾನೇ ಮಗನನ್ನು ಕುರಿತು 'ಮಗು; ಯಾರಿಂದ ಈ ಮಾತುಗಳನ್ನು

ಕಲಿತೆಯೆಂದು ಹೇಳು, ನಿನ್ನ ಗುರುಗಳು ನಾವು ಹೇಳಿಕೊಟ್ಟದ್ದಲ್ಲ ಎಂದು ಹೇಳುತ್ತಿರುವರಷ್ಟೆ' ಎಂದು ನುಡಿಯಲು

**ಪ್ರಹ್ಲಾದ–** ನನ್ನ ಹೃದಯದಲ್ಲಿ ನೆಲೆಸಿರುವ ಶ್ರೀವಿಷ್ಣುವೇ ಸಮಸ್ತ ಜಗತ್ತಿನ ಉಪದೇಶಕ. ಅವನನ್ನು ಹೊರತುಪಡಿಸಿ ಯಾರು ಯಾರಿಗೆ ತಾನೇ ಉಪದೇಶಿಸಲು ಸಾಧ್ಯ?

**ಹಿರಣ್ಯಕಶಿಪು–** ಎಲೈ ದುರ್ಬುದ್ಧಿಯೇ, ಮೂರುಲೋಕದ ಒಡೆಯನಾದ ನನ್ನೆದುರಿಗೆ ನೀನು ಮತ್ತೆ ಮತ್ತೆ ಹೇಳುತ್ತಿರುವ ಆ ವಿಷ್ಣು ಯಾರು?

**ಪ್ರಹ್ಲಾದ–** ಅವನು ಮಾತಿಗೆ ನಿಲುಕುವವನಲ್ಲ, ಯೋಗಿಗಳ ಧ್ಯಾನದಲ್ಲಿ ಗೋಚರಿಸುವ ಸರ್ವಶ್ರೇಷ್ಠ ಸ್ವರೂಪಿ. ಯಾರಿಂದ ಈ ಜಗತ್ತು ಹುಟ್ಟಿಕೊಂಡಿದೆಯೋ, ಯಾರು ಪರಮೇಶ್ವರನೋ ಆತನೇ ಶ್ರೀವಿಷ್ಣು.

**ಹಿರಣ್ಯಕಶಿಪು–**ಎಲೈ ಮೂರ್ಖ, ನಾನಿರುವಾಗ ಬೇರೊಬ್ಬ ಪರಮೇಶ್ವರ ಯಾರಿದ್ದಾರೆ? ನೀನು ಸಾಯುವ ಬಯಕೆಯಿಂದ ಹಾಗೆ ಮತ್ತೆ ಮತ್ತೆ ಹೇಳುತ್ತಿರುವಿಯಲ್ಲವೆ?

**ಪ್ರಹ್ಲಾದ–** ತಂದೆ, ಆತನು ನನಗೆ, ಈ ಪ್ರಜೆಗಳಿಗೆ ಮಾತ್ರ ಒಡೆಯನಲ್ಲ. ಸರ್ವವ್ಯಾಪಿಯಾದ ಆತ ನಿನ್ನ ಒಡೆಯನೂ ಆಗಿದ್ದಾನೆ. ಆತನೇ ಜಗತ್ತಿನ ಧಾರಕ, ಪೋಷಕ, ಈ ವಿಷಯದಲ್ಲಿ ಕೋಪವೇಕೆ? ಪ್ರಸನ್ನನಾಗು.

**ಹಿರಣ್ಯಕಶಿಪು–** ಈ ದುರ್ಬುದ್ಧಿಯ ಹೃದಯವನ್ನು ಯಾವ ಪಾಪಿ ಪ್ರವೇಶಿಸಿದ್ದಾನೆ? ಯಾರಿಂದ ಆವಿಷ್ಟನಾದ ಈತ ಕೆಟ್ಟ ಮಾತುಗಳನ್ನಾಡುತ್ತಿದ್ದಾನೆ?

**ಪ್ರಹ್ಲಾದ–** ಆ ವಿಷ್ಣುವು ಕೇವಲ ನನ್ನ ಹೃದಯವನ್ನು ಆಕ್ರಮಿಸಿ ಇರುವವನಲ್ಲ. ಸಮಸ್ತ ಲೋಕಗಳನ್ನೂ ಆಕ್ರಮಿಸಿದ್ದಾನೆ. ಅವನು ನನ್ನನ್ನು ನಿನ್ನನ್ನೇ ಮೊದಲಾದ ಎಲ್ಲಾ ಜಗತ್ತನ್ನೂ ಎಲ್ಲೆಡೆ ತುಂಬಿದವನಾಗಿ ಎಲ್ಲ ಚಟುವಟಿಕೆಗಳಲ್ಲಿ ತೊಡಗಿಸುತ್ತಿದ್ದಾನೆ.

ಹಿರಣ್ಯಕಶಿಪುವಿಗೆ ಕೋಪ ತಡೆಯಲು ಸಾಧ್ಯವಾಗಲಿಲ್ಲ. 'ಇವನನ್ನು ಅರಮನೆಯಿಂದ ಹೊರ ಹಾಕಿರಿ. ಗುರುಕುಲದಲ್ಲಿ ಮತ್ತೆ ಕಲಿಸಿರಿ' ಎಂದು ಆದೇಶಿಸಿದ. ಗುರುಗಳು ಮತ್ತೆ ಪ್ರಹ್ಲಾದನನ್ನು ಗುರುಕುಲಕ್ಕೆ ಕರೆದೊಯ್ದರು.

(ಸಶೇಷ)

ಮಧ್ವಚರಿತ್ರೆ

ಭಾಗ –66

# ಮುಕ್ತಿಯಲ್ಲಿ ಸುಖವಿದೆ, ಅಪ್ರಾಕೃತ ದೇಹವಿದೆ

–ಅನಂತಕೃಷ್ಣಾಚಾರ್ಯ

ಆಚಾರ್ಯರು ತಮ್ಮ ಉಪನ್ಯಾಸಭಾರತಿಯನ್ನು ಮುಂದುವರಿಸುತ್ತಾ–ಮುಕ್ತ ಜೀವನಿಗೆ ಅಪ್ರಾಕೃತವಾದ ಸುಖವಿದೆ; ಅಪ್ರಾಕೃತವಾದ ದೇಹವಿದೆ ಎಂದು ಸಮರ್ಥಿಸಿದಾಗ ಕೆಲವರು ಹೀಗೆ ಆಕ್ಷೇಪಿಸುವುದುಂಟು. ಮುಕ್ತಜೀವನಿಗೆ ಅಪ್ರಾಕೃತವಾದ ದೇಹವಿದೆ ಎಂದು ಹೇಳಿದರೆ ಕಣ್ಣು, ಕೈ, ಕಾಲು ಮುಂತಾದ ಅವಯವಗಳಿವೆ ಎಂದಂತಾಯಿತು. ಯಾವುದು ಅವಯವಗಳಿಂದ ಕೂಡಿದೆಯೋ ಅದು ಮುಂದೊಂದು ದಿನ ನಾಶವಾಗಲೇಬೇಕು. ಉದಾಹರಣೆಗೆ ಬಟ್ಟೆಯಂತೆ. ಅನೇಕ ನೂಲುಗಳನ್ನು ಸೇರಿಸಿ ಬಟ್ಟೆ ತಯಾರಾಗುತ್ತದೆ. ಆದ್ದರಿಂದ ಒಂದೊಂದು ನೂಲು ಬಟ್ಟೆಯ ಅವಯವ. ಅದು ನಾಶವಾದರೆ ಬಟ್ಟೆ ನಾಶವಾದಂತೆಯೇ ಅಷ್ಟೆ. ಮುಕ್ತಜೀವನಿಗೂ ಅವಯವಗಳಿಂದ ಕೂಡಿದ ದೇಹವನ್ನು ಒಪ್ಪಿದರೆ ಮುಂದೊಂದು ದಿನ ಆ ದೇಹ ನಾಶವಾಗುವ ಪ್ರಸಂಗ ಬರುತ್ತದೆ. ಹೀಗೆ ನಾಶವಾಗುವ ದೇಹವುಳ್ಳ ಜೀವನು ಮುಕ್ತನಾಗುವುದಾದರೂ ಹೇಗೆ? ಎಂದು.

ಇಂತಹ ಆಕ್ಷೇಪವನ್ನು ಕುರಿತು ನಮ್ಮದೊಂದು ಪ್ರಶ್ನೆ– ನೀನು ಮುಕ್ತಜೀವನಿಗೆ ದೇಹವನ್ನು ಒಪ್ಪಿದರೆ ಅವಯವಗಳನ್ನು ಒಪ್ಪಬೇಕಾಗುತ್ತದೆಂದು ಆಕ್ಷೇಪಿಸುವಿಯಷ್ಟೆ. ಅದೆಂತಹ ಅವಯವ? ಜೀವನಿಗಿಂತ ಭಿನ್ನವಾದ ಅವಯವವೋ? ಜೀವನ ಸ್ವರೂಪವೇ ಆದ ಅವಯವವೋ? ಮುಕ್ತಿಯಲ್ಲಿ ಇಲ್ಲಿರುವಂತೆ ಜೀವನಿಗಿಂತ ಬೇರೆಯಾದ ಜಡವಾದ ಇಂದ್ರಿಯಗಳು ಇಲ್ಲವೆಂಬುದನ್ನು ನಾವೂ ಒಪ್ಪುತ್ತೇವೆ. ಆದರೆ ಜೀವನಿಗೆ ಸ್ವರೂಪಭೂತವಾದ ಇಂದ್ರಿಯಗಳೂ ಇಲ್ಲವೆಂಬುದನ್ನು ಒಪ್ಪುವುದಿಲ್ಲ. ಏಕೆಂದರೆ ಮುಕ್ತಜೀವನ ಸ್ವರೂಪಕ್ಕಿಂತ ಅಭಿನ್ನವಾದ ಇಂದ್ರಿಯಗಳನ್ನು ನೀನು ಒಪ್ಪಲೇ ಬೇಕಾಗುತ್ತದೆ. ಹೇಗೆಂದರೆ ನಿನ್ನ ಪ್ರಕಾರ ಪರಮಾತ್ಮ ಸರ್ವವ್ಯಾಪಿ. ಅಂದರೆ ಅತ್ಯಂತ ಸೂಕ್ಷ್ಮವಾದ ಪರಮಾಣು ಪ್ರದೇಶದಿಂದ ಪ್ರಾರಂಭಿಸಿ ಮಾರು–ಮೊಳ ಮುಂತಾದ ಎಲ್ಲ ಪ್ರದೇಶದಲ್ಲಿಯೂ ಪರಮಾತ್ಮನಿದ್ದಾನೆಂದು ಹೇಳಿದಂತಾಯಿತು. ಆ ಪರಮಾತ್ಮನ ಪ್ರದೇಶಗಳು ಆತನಿಗಿಂತ ಅಭಿನ್ನವೆಂದು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಒಬ್ಬನೇ ಪರಮಾತ್ಮನಿಗೆ ಸರ್ವವ್ಯಾಪ್ತತ್ವವು (ಎಲ್ಲ ಕಡೆ

ಇರುವಿಕೆಯು) ಕೂಡದೇ ಹೋದೀತು. ಹಾಗೆಯೇ ನಾವೂ ಮುಕ್ತನಿಗೆ ಆತನಿಗಿಂತ ಅಭಿನ್ನವಾದ ಜ್ಞಾನಾನಂದಾತ್ಮಕವಾದ ಕಣ್ಣು, ಕಿವಿ, ಕೈ ಮುಂತಾದ ಅವಯವಗಳನ್ನು ಒಪ್ಪುತ್ತೇವೆ.

ಮುಕ್ತನಿಗೆ ಕೈಕಾಲು ಮುಂತಾದ ಅವಯವಗಳು ಮಾತ್ರವಲ್ಲ, ಶಬ್ದ–ಸ್ಪರ್ಶ–ರೂಪ ಮುಂತಾದ ವಿಷಯಪದಾರ್ಥಗಳ ಅನುಭವವವೂ ಇದೆ. ಉದಾಹರಣೆಗೆ ಭಗವಂತನಂತೆ. ಭಗವಂತನಿಗೆ ರೂಪ–ರಸಾದಿಗಳ ಅನುಭವವಿದೆ. ಆತನನ್ನು ನೀವು ಸರ್ವಜ್ಞರೆಂದು ಒಪ್ಪಿಕೊಂಡಿದ್ದೀರಿ. ಪರಮಾತ್ಮ ಸರ್ವವನ್ನೂ ತಿಳಿದವನು ಆಗಬೇಕಾದರೆ ರೂಪ–ರಸ ಮುಂತಾದುವುಗಳನ್ನು ತಿಳಿದಿರಲೇ ಬೇಕಷ್ಟೆ.

'ಪರಮಾತ್ಮನು ಸರ್ವಜ್ಞ ಹೌದು. ಅವನಿಗೆ ರೂಪ–ರಸಾದಿಗಳ ಜ್ಞಾನವೂ ಇರಬಹುದು. ಆದರೆ ಅದರಿಂದಾಗುವ ಸುಖ–ದುಃಖಗಳಿಲ್ಲ. ಏಕೆಂದರೆ ಹಿಂದೆಯೇ ತಿಳಿಸಿದಂತೆ ಸುಖವಿರುವಲ್ಲಿ ದುಃಖವಿರಲೇ ಬೇಕಲ್ಲವೆ? ಎಂದು ಕೆಲವರು ಹೇಳಬಹುದು. ಇದು ಸರಿಯಲ್ಲ. ಏಕೆಂದರೆ ಹೀಗೆ ಹೇಳಿದರೆ ಜ್ಞಾನವಿದ್ದಲ್ಲಿ ಅಜ್ಞಾನವಿರುವುದು ಲೋಕದಲ್ಲಿ ಕಂಡಿರುವುದರಿಂದ ದೇವರಲ್ಲಿ ಜ್ಞಾನವೇ ಇಲ್ಲ, ಇದ್ದರೆ ಅಜ್ಞಾನವೂ ಇರಬೇಕಾದೀತು ಎಂದು ಅಕ್ಷೇಪಿಸಿಬಹುದು. ದೇವರಲ್ಲಿ ಅಜ್ಞಾನವಿಲ್ಲ ಎನ್ನುವುದಾದರೆ ದುಃಖವೂ ಇಲ್ಲ ಎಂದೂ ಹೇಳಬಹುದು. ಅಪ್ರಾಕೃತವಾದ ಸುಖಸ್ವರೂಪಿ ಎನ್ನಬಹುದು. ಆ ಸುಖದ ಅನುಭವಕ್ಕಾಗಿ ಅಪ್ರಾಕೃತವಾದ ಇಂದ್ರಿಯವುಳ್ಳವನೆಂದು ಹೇಳಬಹುದು. ಮುಕ್ತಜೀವನಿಗೂ ಹೀಗೆಯೇ ಸ್ವರೂಪಾನಂದವಿದೆ. ಅದನ್ನು ಅನುಭವಿಸಲು ಬೇಕಾದ ಅಪ್ರಾಕೃತಇಂದ್ರಿಯಗಳಿವೆ ಎಂದು ಹೇಳಬಹುದು. ಇದು ಬರಿಯ ಯುಕ್ತಿಯಿಂದ ಮಾತ್ರ ಸಿದ್ಧವಾದ ವಿಷಯವಲ್ಲ. ವೇದಗಳು ನೇರವಾಗಿಯೇ ಹೇಳುವ ಮಾತು. ಇಂತಹ ಮೋಕ್ಷದ ವಿಷಯದಲ್ಲಿ ಪರವಾದಿಗಳಿಗೆ ಹಗೆತನವೇಕೆ? ಅಥವಾ ಇದಕ್ಕೆ ವಿರುದ್ಧವಾದ ವಿಷಯದಲ್ಲಿ ಮೊಂಡುತನವೇಕೆ? ಹೀಗೆ ಸ್ವತಃ ಪ್ರಮಾಣವಾದ ವೇದಗಳಿಂದ ಭಗವಾನ್ ನಾರಾಯಣನೆ ಮೋಕ್ಷಪ್ರದನಾಗಿದ್ದಾನೆ ಎಂದು ಸಮರ್ಥಿಸಿದಾಗ ಎಲ್ಲವೂ ಮಂಗಲಮಯವಾಯಿತು' ಎಂದು ಆಚಾರ್ಯರು ಇಂಥ ಅಪೂರ್ವವಿಷಯಗಳನ್ನೊಳಗೊಂಡ ಉಪನ್ಯಾಸವನ್ನು ಮಾಡಿದರು. ತ್ರಿವಿಕ್ರಮಪಂಡಿತರು ಎಲ್ಲವನ್ನೂ ಆಲಿಸಿದರು.

**(ಸಶೇಷ)**

# ಗುರುಗಳ ಸಮಾರಾಧನೆಗೆ ಮೆರುಗು ನೀಡಿದ ಶಿಷ್ಯರ 'ಸಪ್ತತಿ'

**'ಹಿಂದೆ ಎಂದೂ ಎಲ್ಲೂ ನಡೆಯದ ರೀತಿಯಲ್ಲಿ ನಡೆದ ಈ ಸಮಾರಂಭ 'ಅದ್ಭುತ' ಹಾಗೂ ಭಾವಚಿತ್ರ ಸಮರ್ಪಣೆಯ ಪ್ರಕ್ರಿಯೆಯನ್ನೂ ಒಳಗೊಂಡಿದ್ದು 'ವಿಚಿತ್ರ' ಎಂದು ಪರಿಗಣಿಸಲರ್ಹವಾದುದು!'**

ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥರು ಪಲಿಮಾರು ಗ್ರಾಮದ ಪಲಿಮಾರು ಮಠದಲ್ಲಿ ಶ್ರೀವಿದ್ಯಾಧೀಶತೀರ್ಥರ ನೇತೃತ್ವದಲ್ಲಿ ಶ್ರೀ ವಿದ್ಯಾಮಾನ್ಯತೀರ್ಥರ ಒಂಭತ್ತನೆಯ ಸಮಾರಾಧನಾ ಅಂಗವಾಗಿ ನಡೆದ ತಮ್ಮ ಪೀಠಾರೋಹಣ ಸಪ್ತತಿ ಸಮಾರಂಭದಲ್ಲಿ ಪಾಲ್ಗೊಂಡು ಸಾರಿದ ಉದ್ಗಾರವಿದು.

## ಎಲ್ಲರಿಗೂ ಸಮ್ಮಾನ

'ನಮ್ಮನ್ನು ಸಮ್ಮಾನಿಸಿರುವುದಲ್ಲದೆ ನಮ್ಮ ಅನೇಕ ಶಿಷ್ಯರನ್ನೂ, ಅಭಿಮಾನಿಗಳನ್ನೂ ಸಮ್ಮಾನಿಸಿದಂತಾಗಿದೆ'- ಎಂಬುದಾಗಿ ಶ್ರೀಪಾದರು ತಮ್ಮ ಎಪ್ಪತ್ತು ಮಂದಿ ಶಿಷ್ಯರ, ಅಭಿಮಾನಿಗಳ ಮೂಲಕ ಫಲ, ಪುಷ್ಪ, ಕಾಣಿಕೆಗಳ ಸಮರ್ಪಿಸುವಿಕೆಯನ್ನೂ, ಅದಕ್ಕಾಗಿ ಅವರಿಗೆ ತಮ್ಮ ಮೂಲಕ ಶಾಲು ಹೊದಿಸಿ ಅನುಗ್ರಹಿಸುವಿಕೆಯನ್ನೂ ಒಳಗೊಂಡಿದ್ದ ಆ ಸಮಾರಂಭದ ವಿಶಿಷ್ಟವಾದ ಅಂಶದ ಬಗ್ಗೆ ತಮ್ಮ ತುಂಬುಹೃದಯದ ಸಂತೋಷವನ್ನು ವ್ಯಕ್ತಪಡಿಸಿದ್ದರು.

## ತಿಳಿಸಿ ಹೇಳುವೆ:

ತಮ್ಮ ವ್ಯಕ್ತಿತ್ವವನ್ನು ರೂಪಿಸುವಿಕೆಯಲ್ಲಿ ಶ್ರೀವಿದ್ಯಾಮಾನ್ಯತೀರ್ಥರ ಪ್ರಮುಖಪಾತ್ರವನ್ನು ಸ್ಪಷ್ಟಪಡಿಸಿದ ಶ್ರೀಪಾದರು ಗುರುಗಳ ಆ ನಿಟ್ಟಿನ ಅನುಗ್ರಹ ದೊರಕದಿದ್ದಲ್ಲಿ ಈ ಬಗೆಯ ವಿಶ್ವೇಶತೀರ್ಥರು ರೂಪುಗೊಳ್ಳಲು ಸಾಧ್ಯವೇ ಇರುತ್ತಿರಲಿಲ್ಲ–ಎಂದು ಭಾವುಕತನದಿಂದ ಉದ್ಗರಿಸಿದರು. ಹೀಗೆ ಶ್ರೀ ವಿದ್ಯಾಮಾನ್ಯತೀರ್ಥರಿಂದ ರೂಪುಗೊಂಡ ವ್ಯಕ್ತಿತ್ವ ಈ ಬಗೆಯ ಗೌರವಾಭಿಮಾನಗಳಿಗೆಲ್ಲ ಪ್ರಯೋಜಕವಾಗಿರುವುದರಿಂದ ಈ ಗೌರವಾದಿಗಳೆಲ್ಲ ಗುರುಗಳಿಗೇ ತಲುಪಬೇಕಾದವು. ಧನಿಕನೊಬ್ಬನು ತನ್ನ ಐಶ್ವರ್ಯಕ್ಕಾಗಿ ನಮಸ್ಕಾರವನ್ನು ಸಲ್ಲಿಸುತ್ತಿದ್ದರೆ 'ತಿಳಿಸಿ ಹೇಳುವೆ'– ಎಂದು ಉತ್ತರಿಸುತ್ತ ಐಶ್ವರ್ಯಕ್ಕಾಗಿ ನೀಡಲಾಗುತ್ತಿದ್ದ ಆ ನಮಸ್ಕಾರವನ್ನು ಅಂತಹ ಐಶ್ವರ್ಯವನ್ನೊಳಗೊಂಡ ಬೊಕ್ಕಸಕ್ಕೆ ತಿಳಿಸಿ ಹೇಳುವೆನೆಂದು ಅಭಿಪ್ರಾಯಪಡುತ್ತಿದ್ದ ಕಥೆಯನ್ನು ಉಲ್ಲೇಖಿಸಿದ ಶ್ರೀಪಾದರು ತಾವೂ ತಮಗೆ ಸಲ್ಲಿಸಲಾದ ಗೌರವಾದಿಗಳನ್ನು

ಗುರುಗಳಿಗೆ ತಿಳಿಸಿ ಹೇಳುವೆನೆಂದು ಹೇಳಬೇಕಾಗಿದೆ ಎಂದು ಉಪಪಾದಿಸಿದರು.

**ಅಂತರ್ಯಾಮಿತ್ವ, ಬಿಂಬ ಪ್ರತಿಬಿಂಬ ಭಾವ:**

ಮಾಧ್ವಸಿದ್ಧಾಂತದ ವೈಶಿಷ್ಟ್ಯವನ್ನು ಪ್ರಸ್ತಾಪಿಸಿದ ಶ್ರೀಪಾದರು ಎಲ್ಲರಲ್ಲೂ ಭಗವಂತನು ಅಂತರ್ಯಾಮಿಯಾಗಿ ಇರುವನೆಂದು ಸಾರುವ ಪ್ರಯುಕ್ತ ಉಳಿದ ಯಾರಿಗಾಗಲೀ ಸಲ್ಲಿಸಲಾಗುವ ಗೌರವ, ಉಪಕಾರ, ಆದರ–ಮುಂತಾದವೆಲ್ಲ ಮೂಲತಃ ಅವರ ಅಂತರ್ಯಾಮಿ ಭಗವಂತನಿಗೇ ಸಮರ್ಪಿಸಿದಂತಾಗುವುದೆಂದೂ, ಭಗವಂತನು ಎಲ್ಲರ ಬಿಂಬರೂಪಿಯಾಗಿದ್ದು ಉಳಿದವರೆಲ್ಲರೂ ಅವನ ಪ್ರತಿಬಿಂಬರಾಗಿರುವುದರಿಂದ ಬಿಂಬನಾಗಿ ಅವನಿಗೆ ಯಾವುದನ್ನಾದರೂ ಸಲ್ಲಿಸದೆ ಪ್ರತಿಬಿಂಬರಾಗಿ ಇರುವ ಉಳಿದ ಯಾರಿಗೂ ಸಲ್ಲಿಸಲಾಗುವುದಿಲ್ಲ ಎಂದು ಯಾರಿಗೇ ಸಲ್ಲಿಸಲಾದ ಗೌರವಾದಿಗಳು ಮೂಲತಃ ಬಿಂಬನಾದ ಭಗವಂತನಿಗೇ ಸಲ್ಲಿಸಿದಂತಾಗುವುದೆಂದೂ ಮಾಧ್ವಸಿದ್ಧಾಂತದ 'ಅಂತರ್ಯಾಮಿತತ್ವ, ಬಿಂಬಪ್ರತಿಬಿಂಬಭಾವತತ್ವ'ಗಳಿಂದಾಗಿ ಗೌರವಾದಿಗಳ ಅರ್ಪಣೆಯಲ್ಲಿ ಭಗವಂತನಿಗೂ, ಉಳಿದ ವ್ಯಕ್ತಿಗಳಿಗೂ ಇರುವ ಗಾಢ ನಂಟಿನ ಎಳೆಯನ್ನು ಬಿಡಿಸಿದರು.

**ಸಮುಚಿತ ಗುರುಕಾಣಿಕೆ:**

ಶ್ರೀ ವಿದ್ಯಾಮಾನ್ಯತೀರ್ಥರಿಗೆ ಉತ್ತರಭಾರತದಲ್ಲಿ ಮಾಧ್ವತತ್ವದ ಪ್ರಚಾರ ಆಗಬೇಕೆಂದು ಉತ್ಕಟೇಚ್ಛೆ ಇದ್ದು, ಅದನ್ನು ಈಡೇರಿಸುವಲ್ಲಿ ಪ್ರಯಾಗಪೀಠದ ಶ್ರೀವಿದ್ಯಾತ್ಮತೀರ್ಥರು, ಹಮ್ಮಿಕೊಂಡ ಬೇರೆ ಬೇರೆ ಯೋಜನೆಗಳಲ್ಲಿ ಹಿಂದಿ ಭಾಷೆಯಲ್ಲಿ ಮಾಧ್ವ ಸಾಹಿತ್ಯವನ್ನು ಪ್ರಕಟಗೊಳಿಸುವುದೂ ಒಂದಾಗಿದ್ದು, ಆ ಪ್ರಕಟಣೆಗೆ ಬೇಕಾದ ಆರ್ಥಿಕ ನೆರವನ್ನೆಲ್ಲ ತಾವು ನೀಡುವುದಾಗಿ ಉದ್ಘೋಷಿಸಿದ ಶ್ರೀ ವಿಶ್ವೇಶತೀರ್ಥರು ಆ ಮೂಲಕ ತಮ್ಮ ಗುರುಗಳಿಗೆ ಅತ್ಯಂತ ಮೆಚ್ಚುಗೆಯ 'ಗುರುಕಾಣಿಕೆ'ಯನ್ನು ಸಲ್ಲಿಸಿದಂತಾಗಿದೆ.

**ಶ್ರೀವಿದ್ಯಾಮಾನ್ಯತೀರ್ಥರ ಪ್ರತೀಕ:** ಗುರುಗಳ ಸಮಾರಾಧನೆಯಂದು ಸಮ್ಮಾನ ಪಡೆಯುತ್ತಿರುವುದು ನಮಗೆ ತುಂಬ ಮುಜುಗರವನ್ನುಂಟು ಮಾಡುತ್ತಿದೆ– ಎಂಬ ಶ್ರೀವಿಶ್ವೇಶತೀರ್ಥರ ಸಂಕೋಚದ ಅನಿಸಿಕೆಯ ಹಿನ್ನೆಲೆಯಲ್ಲಿ ಶ್ರೀವಿದ್ಯಾಧೀಶತೀರ್ಥರು 'ತಮ್ಮಲ್ಲಿ ವಿದ್ಯಾಮಾನ್ಯತೀರ್ಥರನ್ನು ಕಂಡುಕೊಂಡು ಅವರಿಗೇ ತಮ್ಮ ಪ್ರತೀಕದ ಮೂಲಕ ಗೌರವ ಸಲ್ಲಿಸುತ್ತಿರುವುದರಿಂದ ತಾವು ಮುಜುಗರಕ್ಕೆ ಒಳಗಾಗುವುದಕ್ಕೆ ಎಡೆ ಇಲ್ಲ'– ಎಂದು ಉಪಪಾದಿಸಿ ಕನಕಾಭಿಷೇಕದ ಮೂಲಕ ಶ್ರೀವಿಶ್ವೇಶತೀರ್ಥರನ್ನು ಗೌರವಿಸಿದರು. ವೇದಿಕೆಯಲ್ಲಿ ಸಮುಪಸ್ಥಿತರಿದ್ದ ಶ್ರೀವಿಶ್ವಪ್ರಸನ್ನತೀರ್ಥರು, ಬನ್ನಂಜೆ ರಾಘವೇಂದ್ರತೀರ್ಥರು ಹಾಗೂ ಶ್ರೀವಿದ್ಯಾತ್ಮತೀರ್ಥರು ಗುರುಗಳಿಗೆ ಕನಕಾಭಿಷೇಕ ನಡೆಸಿ ಗೌರವಿಸಿದರು.

## ಮೂರು 'ಎಪ್ಪತ್ತು'ಗಳ ನಂಟು:

ಪೀಠಾರೋಹಣ ಸಪ್ತತಿಯಲ್ಲಿ ತೊಡಗಿರುವ ಶ್ರೀವಿಶ್ವೇಶತೀರ್ಥರು ತಮ್ಮ ಸಂನ್ಯಾಸ ಬದುಕಿನ ಸಪ್ತತಿವರ್ಷಗಳ ಅವಧಿಯಲ್ಲಿ ಅದೆಷ್ಟೋ ಭಾವುಕರ, ಸಾಧಕರ ಬದುಕುಗಳಲ್ಲಿ ಧಾರ್ಮಿಕ ಸೌರಭ, ಆಧ್ಯಾತ್ಮಿಕ ಸೌರಭ ಹರಡುವಂತೆ ಅನುಗ್ರಹಿಸಿರುವ ಸಂಕೇತವಾಗಿ ಎಪ್ಪತ್ತು ಪುಷ್ಪಗಳ ಮಾಲೆಗಳನ್ನೂ, ಅದೆಷ್ಟೋ ಜಿಜ್ಞಾಸುಗಳ, ಆಸ್ತಿಕರ ಬದುಕಿನಲ್ಲಿ ಆಧ್ಯಾತ್ಮಿಕತೆಯ, ಆಸ್ತಿಕತೆಯ ಫಲಗಳು ಪಕ್ವವಾಗುವಂತೆ ಅನುಗ್ರಹಿಸಿರುವ ಸಂಕೇತವಾಗಿ ಎಪ್ಪತ್ತು ಬಗೆಯ ಫಲಗಳನ್ನೂ ಒಳಗೊಂಡು ಕಾಣಿಕೆ ಸಹಿತವಾಗಿ ಎಪ್ಪತ್ತು ಮಂದಿ ಅಭಿಮಾನಿಗಳು, ಶಿಷ್ಯರು ಕ್ರಮವಾಗಿ ಬಂದು ಶ್ರೀಪಾದರಿಗೆ ಅರ್ಪಿಸುವ ಮೂಲಕ ಶ್ರೀಪಾದರಿಂದ ಸಂದ ಸಾಮಾಜಿಕ, ಆಧ್ಯಾತ್ಮಿಕ, ಧಾರ್ಮಿಕ ಕೊಡುಗೆಗಳಿಗಾಗಿ ಕೃತಜ್ಞತೆಯನ್ನು ಸಮರ್ಪಿಸಿದಂತಾಗಿತ್ತು. ಹೀಗೆ ಎಪ್ಪತ್ತು ಹೂಗಳ ಮಾಲೆ, ಎಪ್ಪತ್ತು ಬಗೆಯ ಹಣ್ಣುಗಳು– ಇವನ್ನು ಅರ್ಪಿಸಿದ ಎಪ್ಪತ್ತು ಅಭಿಮಾನಿಗಳು–ಈ ಬಗೆಯ ಎಪ್ಪತ್ತರ ಮೂರು ಶ್ರೀಪಾದರ ಸಪ್ತತಿಗೆ ಪ್ರಾತ್ಯಕ್ಷಿಕೆಯನ್ನು ನೀಡಿದ್ದರೆ, ಶ್ರೀಪಾದರ ಬದುಕಿನ ಎಪ್ಪತ್ತು ಪ್ರಮುಖ ಘಟನೆಗಳನ್ನು ಸುತ್ತ ಸಂಯೋಜಿಸಿ ರೂಪಿಸಲಾದ ಶ್ರೀಪಾದರ ಸಮಗ್ರ ಬದುಕನ್ನು ಸಂಕೇತಿಸುವ ಭಾವಚಿತ್ರ– ಶ್ರೀವಿದ್ಯಾಧೀಶತೀರ್ಥರಿಂದ ಶ್ರೀಪಾದರಿಗೆ ಸಮರ್ಪಿತವಾಗಿದ್ದು, ಅವರ ಅಂತರ್ಯಾಮಿ ಶ್ರೀರಾಮವಿಟ್ಠಲಾಭಿನ್ನವೇದವ್ಯಾಸರಿಗೆ ಅವರ ಸಪ್ತತಿಯ ಬದುಕನ್ನು 'ಕೆರೆಯ ನೀರನು ಕೆರೆಗೆ ಚೆಲ್ಲಿ'– ಎಂಬ ನಾಣ್ಣುಡಿಯನ್ನು ಸಮರ್ಪಿಸಿದಂತಾಗಿತ್ತು. ಈ ಭಾವಚಿತ್ರವನ್ನು ರೂಪಿಸಿದ ಹರಿಗುರುಭಕ್ತ ಕೆ.ಎಂ. ಶೇಷಗಿರಿ ಈ ಭಾವಚಿತ್ರದ ಸಂಯೋಜನೆಯಲ್ಲಿಯ ಔಚಿತ್ಯವನ್ನು ಸ್ಪಷ್ಟಪಡಿಸಿದ್ದರು.

ಶಿಬರೂರು ಹಯಗ್ರೀವತಂತ್ರಿಗಳು, ದೇರೇಬೈಲು ಹರಿಕೃಷ್ಣ ತಂತ್ರಿಗಳು, ಎಂ.ಬಿ. ಪುರಾಣಿಕರು, ಎ. ಆರ್ ತಂತ್ರಿಗಳು ಮೈಸೂರು, ಪಡುಬಿದ್ರೆ ವೇಂಕಟೇಶಾಚಾರ್ಯ, ಶ್ರೀವಿದ್ಯಾತ್ಮತೀರ್ಥರು ಶ್ರೀ ವಿಶ್ವೇಶತೀರ್ಥರ ಬೇರೆ ಬೇರೆ ಸಾಧನೆಯನ್ನು ಉಲ್ಲೇಖಿಸಿ ಗುರುವಂದನೆ ಸಲ್ಲಿಸಿದರು.

ಶ್ರೀಮತಿ ಗೀತಾವಾಸುದೇವರಾವ್ ಇವರ ಪ್ರಾರ್ಥನೆಯೊಂದಿಗೆ ಆರಂಭಗೊಂಡಿದ್ದ ಈ ಸಮಾರಂಭದಲ್ಲಿ ಶ್ರೀವೇದವ್ಯಾಸತಂತ್ರಿಗಳು ಸ್ವಾಗತವನ್ನು ಕೋರಿದ್ದರು. ಸಗ್ರಿ ರಾಘವೇಂದ್ರ ಉಪಾಧ್ಯಾಯರು ಕಾರ್ಯಕ್ರಮವನ್ನು ನಿರೂಪಿಸಿದ್ದರು. ಪುತ್ತಿಗೆ ಬಲರಾಮಭಟ್ಟ ಧನ್ಯವಾದವನ್ನು ಸಮರ್ಪಿಸಿದ್ದರು. ★

# ವಿಷ್ಣೂದ್ರೇಕಾಯ ಕಥ್ಯತೇ

## ಶ್ರೀವಿದ್ಯಾಮಾನ್ಯತೀರ್ಥರ ಒಂಭತ್ತನೇ ಸಮಾರಾಧನೆಯ ವೈಭವ

ಪಲಿಮಾರು ಗ್ರಾಮದ ಪಲಿಮಾರು ಮೂಲಮಠದಲ್ಲಿ ವಿರಾಜಿಸುತ್ತಿರುವ ಶ್ರೀವಿದ್ಯಾಮಾನ್ಯತೀರ್ಥರ ಮೂಲವೃಂದಾವನದ ಸನ್ನಿಧಿಯಲ್ಲಿ 25-4-2009 ಮತ್ತು 26-04-2009ರಂದು ಹಾಗೂ 1-5-2009ರಿಂದ 06-05-2009ರವರೆಗೆ ಹೀಗೆ ಎಂಟುದಿನಗಳ ಅವಧಿಯಲ್ಲಿ ವಿದ್ವಗ್ಗೋಷ್ಠೀ, ಸರ್ವಮೂಲಪಾಠ ಪ್ರಶಿಕ್ಷಣ ಶಿಬಿರ ಶ್ರೀನಿವಾಸಕಲ್ಯಾಣಪರ್ವೋತ್ಸವ, ಯುಕ್ತಿ ಮಲ್ಲಿಕಾಚಿಂತನ, ಶ್ರೀವಿದ್ಯಾಮಾನ್ಯತೀರ್ಥರ ಸ್ಮರಣೆ, ಧ್ಯಾನ, ಶ್ರೀವಿಶ್ವೇಶತೀರ್ಥರ ಪೀಠಾರೋಹಣ ಸಪ್ತತಿ ಸಮಾರಂಭ, ಶ್ರೀವಿದ್ಯಾಮಾನ್ಯತೀರ್ಥರ ಗುಣಗಾನ ಹಾಗೂ ಸಮರ್ಪಣಾ ಸಂದೇಶ-ಈ ಎಂಟು ಅಂಗಗಳನ್ನೊಳಗೊಂಡ ಶ್ರೀವಿದ್ಯಾಮಾನ್ಯತೀರ್ಥರ ಒಂಭತ್ತನೇ ಸಮಾರಾಧನಾ ಸಮಾರಂಭವು ಹರಿಗುರುಗಳು ಮೆಚ್ಚುವಂತೆ ನಡೆಯಿತು.

**ವಿದ್ವದ್ಗೋಷ್ಠೀ:** ಆರಾಧನಾ ಅಂಗವಾಗಿ 25-04-2009 ಮತ್ತು 26-04-200ರಂದು ವಿದ್ವದ್ಗೋಷ್ಠಿ ನಡೆಯಿತು. ಪ್ರಥಮ ದಿನ ಶ್ರೀವಿದ್ಯೇಶತೀರ್ಥರೂ, ಮರುದಿನ ಶ್ರೀವಿಶ್ವೇಶತೀರ್ಥರೂ ಅಧ್ಯಕ್ಷತೆ ವಹಿಸಿದ್ದರು. ನ್ಯಾಯಾಮೃತ ಪ್ರಸ್ತುತಪಡಿಸಿರುವ ಪ್ರತ್ಯಕ್ಷ ಪ್ರಮಾಣವು ಸ್ವಾಭಾವಿಕವಾಗಿಯೂ, ಉಪಕ್ರಮಾದಿ ನ್ಯಾಯಾನುಗುಣವಾಗಿಯೂ ಆಗಮಾದಿ ಪ್ರಮಾಣಗಳಿಗಿಂತ ಪ್ರಬಲ ಎಂಬ ಪ್ರಮೇಯ ನ್ಯಾಯಾಮೃತದ ಮೇಲೆ ಹೊರಟಿರುವ ಖಂಡನಾಭಾಸಗ್ರಂಥಗಳ, ಅವುಗಳ ನಿರಾಕರಣಾತ್ಮಕ ಗ್ರಂಥಗಳ ಆಧಾರದಲ್ಲಿ ಸಮರ್ಥಿತವಾಗಿತ್ತು. ಎರಡು ದಿನಗಳ ನಾಲ್ಕು ಅಧಿವೇಶನಗಳಲ್ಲಿ ನಡೆದ ಈ ಚರ್ಚೆಯ ನಿರ್ವಾಹಕಾಧ್ಯಕ್ಷತೆಯನ್ನು ಪಿ.ಎಸ್.ಶೇಷಗಿರಿರಾವ್ ಹಾಗೂ ಡಿ. ಪ್ರಹ್ಲಾದಾಚಾರ್ಯ ಇವರು ವಹಿಸಿದ್ದರು. ಶ್ರೀಹರಿದಾಸಭಟ್ಟರು ನಿರ್ವಹಿಸಿದ ಈ ಗೋಷ್ಠಿಯಲ್ಲಿ ಇಪ್ಪತ್ತಕ್ಕಿಂತಲೂ ಅಧಿಕ ವಿದ್ವಾಂಸರು ಪಾಲ್ಗೊಂಡಿದ್ದರು.

**ಸರ್ವಮೂಲಪಾಠಪ್ರಶಿಕ್ಷಣ ಶಿಬಿರ:**

ಆರಾಧನಾ ಅಂಗವಾಗಿ 1-5-2009ರಿಂದ 04-05-2009ರವರೆಗೆ ಸರ್ವಮೂಲ ಪಾಠಪ್ರಶಿಕ್ಷಣ ಶಿಬಿರವನ್ನು ಆಯೋಜಿಸಲಾಗಿತ್ತು. ಚೆನ್ನೈ ನಗರದಿಂದ ಹಾಗೂ ಬೆಂಗಳೂರು ನಗರದಿಂದ ಸುಮಾರು 125 ಜಿಜ್ಞಾಸುಗಳು ಈ ಶಿಬಿರದಲ್ಲಿ ಪಾಲ್ಗೊಂಡಿದ್ದು ಶ್ರೀಹರಿದಾಸಭಟ್ಟರು ವಿಷ್ಣುತತ್ತ್ವವಿನಿರ್ಣಯದ ಭೇದಘಟ್ಟದಿಂದ ಮುಂದಿನ ಭಾಗದ ಕುರಿತು ವಿಶೇಷ ಪಾಠ ನಡೆಸಿದ್ದರು. ಶ್ರೀಭಟ್ಟರು ಪ್ರತಿನಿತ್ಯ ಆರೇಳು ಗಂಟೆಗಳ ಅವಧಿಯಲ್ಲಿ ಪಾಠ ನಡೆಸುತ್ತಿದ್ದರಲ್ಲದೆ ಈ ದಿನಗಳ ಬೇರೆ ಬೇರೆ ಅವಧಿಯಲ್ಲಿ ಸರ್ವಮೂಲದ ಉಪನಿಷತ್ ಪ್ರಸ್ಥಾನದ ಬಗ್ಗೆ ಹತ್ತಕ್ಕಿಂತಲೂ ಅಧಿಕ ವಿದ್ವಾಂಸರು ಪ್ರವಚನ ನೀಡಿದ್ದರು.

04-05-2009ರಂದು ನಡೆದ ಈ ಪಾಠಪ್ರವಚನದ ಮಂಗಳೋತ್ಸವದಲ್ಲಿ ಶ್ರೀಹರಿದಾಸಭಟ್ಟರು ವಿಷ್ಣುತತ್ತ್ವವಿನಿರ್ಣಯದ ಭೇದ ಘಟ್ಟದ ಅನಂತರದಲ್ಲಿಯೇ ವಿಷ್ಣುತತ್ತ್ವದ ವಿನಿರ್ಣಯ ನಡೆದಿದ್ದು, ಅದಕ್ಕಿಂತ ಮುಂಚೆ ಆ ನಿರ್ಣಯಕ್ಕಾಗಿ ಅವಶ್ಯಕಗಳಾದ ವೇದಾಪೌರುಷೇಯತ್ವಾದಿ ಪ್ರಮೇಯಗಳ ನಿರೂಪಣೆ ಪ್ರಸ್ತಾವನಾರೂಪದಲ್ಲಿ ನಡೆದಿದೆ ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಶ್ರೀವಿದ್ಯಾಧೀಶತೀರ್ಥರು ಭಗವಂತನ ಮೂಲಕ ನಡೆಯುವ ಸಂಹಾರಕ್ರಿಯೆಯ ಹಿನ್ನೆಲೆಯಾಗಿ ಇರುವ ಅವನ ಕಾರುಣ್ಯವನ್ನು 'ಸ್ವಾಪಂ ಪ್ರಾಪಯತಿ ಶ್ರಮಾಪಹೃತಯೇ ಕಲ್ಪಾವಸಾನೇ ಚ ಯಃ'- ಎಂಬ ಟೀಕಾಚಾರ್ಯರ ಮಾತಿನ ಆಧಾರದಲ್ಲಿ ಸಮರ್ಥಿಸಿದರು.

ಮೈಸೂರಿನ ಶ್ರೀವಿಜಯೀಂದ್ರಾಚಾರ್ಯರು ಹಿಂದೆ ಚೆನ್ನೈಯಲ್ಲಿ ನಡೆಸಿದ್ದ ಯಮಕ ಭಾರತ ಪ್ರವಚನ ಮಂಗಳೋತ್ಸವವನ್ನೂ ಈ ಸಂದರ್ಭದಲ್ಲಿ ನಡೆಸಲಾಯಿತು.

**ಶ್ರೀನಿವಾಸ ಕಲ್ಯಾಣೋತ್ಸವ:** ವೈಶಾಖ ಶುದ್ಧ ದಶಮಿಯಂದು ಶ್ರೀನಿವಾಸ ಪದ್ಮಾವತಿಯರ ಕಲ್ಯಾಣೋತ್ಸವ ಜರಗಿದ್ದು, ಅದರ ಸವಿನೆನಪಿಗಾಗಿ 04-05-2009ರಂದು ಶ್ರೀಗುರುಜಗನ್ನಾಥ ಭಜನಮಂಡಳಿ ಕೌತಾಳಂ ಇವರಿಂದ ಶ್ರೀನಿವಾಸಕಲ್ಯಾಣೋತ್ಸವ ವೈಭವದಿಂದ ನಡೆಸಲಾಯಿತು. ಶ್ರೀನಿವಾಸ ಪದ್ಮಾವತಿಯರು ನಿತ್ಯಾವಿಯೋಗಿಗಳಾಗಿದ್ದರೂ ಭಕ್ತರ, ಸಾಧಕರ

ಚಿಂತನೆಗೆ, ಧ್ಯಾನಕ್ಕೆ ಅನುಕೂಲವಾಗುವಂತೆ ಸಾಮಾನ್ಯವ್ಯಕ್ತಿಗಳಂತೆ ವಿವಾಹಕ್ಕೆ ಒಳಗಾಗಿರುವರೆಂದು ಶ್ರೀವಿದ್ಯಾಧೀಶತೀರ್ಥರು ಸಂದೇಶ ನೀಡಿದರು

**ಯುಕ್ತಿಮಲ್ಲಿಕಾ ಚಿಂತನ ಮಂಥನ:**

ಶ್ರೀವಿದ್ಯಾಮಾನ್ಯತೀರ್ಥರ ಮಧ್ಯಾರಾಧನೆಯಂದು ಪೂರ್ವಾಹ್ಣ 9.30ರಿಂದ ಪ್ರಾರಂಭಿಸಿ, ಸಂಜೆ 6–30ರವರೆಗೆ ನಿರಂತರವಾಗಿ ಹದಿನಾರು ವಿದ್ವಾಂಸರು ಶ್ರೀವಾದಿರಾಜ ಗುರುಗಳ ಯುಕ್ತಿಮಲ್ಲಿಕಾದ ಬೇರೆ ಬೇರೆ ಪ್ರಮೇಯದ ಬಗ್ಗೆ ಪ್ರವಚನ ನೀಡಿದರು.

ನಿರ್ವಾಹಕಾಧ್ಯಕ್ಷರಾಗಿ ಪಾಲ್ಗೊಂಡಿದ್ದ ಶ್ರೀಹಯವದನ ಪುರಾಣಿಕರು ಭಗವಂತನ ಪ್ರತಿಯೊಂದು ಚಟುವಟಿಕೆಯೂ ಭಕ್ತರ ಶ್ರೇಯಸ್ಸಿಗಾಗಿಯೇ ಎಂದು ನಿರ್ಧರಿಸಿಕೊಳ್ಳಲು ತಿಳಿಸಿದರು. ಮತ್ತೊಬ್ಬರ ನಿರ್ವಾಹಕಾಧ್ಯಕ್ಷರಾಗಿದ್ದ ಶ್ರೀಹರಿದಾಸಭಟ್ಟರು ಮೂರು ಅಂಶಗಳ ಬಗ್ಗೆ ಉಪನ್ಯಾಸಕರು ಗಮನಹರಿಸಬೇಕೆಂದು ಕಿವಿಮಾತು ಹೇಳಿದರು. ತಮಗೆ ನೀಡಿದ ಕ್ಲಪ್ತ ಸಮಯದಲ್ಲಿ ಪ್ರವಚನವನ್ನು ಮುಗಿಸಬೇಕು. ಹೊರತು ಮತ್ತೊಬ್ಬ ಉಪನ್ಯಾಸಕರ ಅವಧಿಯನ್ನು ಕಬಳಿಸಬಾರದು. ಯುಕ್ತಿಮಲ್ಲಿಕಾದ ವಿಚಾರಗಳ ಬಗ್ಗೆ ಪ್ರವಚನ ನೀಡುವಾಗ ಯುಕ್ತಿಮಲ್ಲಿಕಾದಲ್ಲಿ ಆ ಪ್ರಮೇಯವನ್ನು ಹೇಗೆ ಚಮತ್ಕಾರವಾಗಿ, ವೈಶಿಷ್ಟ್ಯಪೂರ್ಣವಾಗಿ ಪ್ರಸ್ತುತಪಡಿಸಲಾಗಿದೆ ಎಂದು ಉಪಪಾದಿಸಬೇಕೇ ಹೊರತು ಆ ಪ್ರಮೇಯವನ್ನು ಸರ್ವಮೂಲಾಧಾರದಲ್ಲಿ ಸಮರ್ಥಿಸುವುದಲ್ಲ. ಅಂತೆಯೇ ಪ್ರವಚನದ ಶ್ರೋತೃಗಳು ಎದುರಿಗೆ ಇರುವವರಷ್ಟೇ ಅಲ್ಲದೆ, ಅಂತರ್ಜಾಲದ ಪ್ರಕ್ರಿಯೆಯಿಂದಾಗಿ ಜಗತ್ತಿನಾದ್ಯಂತ ಬೇರೆ ಬೇರೆ ಅಭಿರುಚಿಯ, ವಿಚಾರಧಾರೆಯ ಶ್ರೋತೃಗಳೂ ಇರುವರೆಂಬುದನ್ನು ಮರೆಯದೆ ಆದಷ್ಟು ಸಭ್ಯತೆಯ ಭಾಷೆಯಿಂದ ವಿಚಾರಗಳನ್ನು ಪ್ರಸ್ತುತಪಡಿಸಬೇಕು.

ಈ ಪ್ರವಚನ ಮಾಲಿಕೆಯ ಉಪಸಂಹಾರದಲ್ಲಿ ಆಗಮಿಸಿದ ಶ್ರೀವಿಶ್ವೇಶತೀರ್ಥರು ಭಗವಂತನಲ್ಲಿ ಭಕ್ತಿಯನ್ನು ಅಳವಡಿಸಿಕೊಳ್ಳುವಲ್ಲಿ ಯುಕ್ತಿಮಲ್ಲಿಕಾದ ಗುಣಸೌರಭವೇ ಮುಂತಾದ ಐದು ಸೌರಭಗಳ ಪಾತ್ರ ಏನೆಂಬುದನ್ನು ಉಪಪಾದಿಸಿದರು. ಈ ಪ್ರವಚನ ಮಾಲಿಕೆಗೆ ಅಧ್ಯಕ್ಷರಾಗಿದ್ದ ಶ್ರೀ ಶ್ರೀ ವಿದ್ಯಾಧೀಶತೀರ್ಥರು ತಮ್ಮ ಗುರುಗಳ ಅನುಭವವೊಂದರ ಹಿನ್ನೆಲೆಯಲ್ಲಿ 'ಮನಸಿ ಧೃತಕಥಾವಿಸ್ಮೃತೌ ಸ್ಮಾರಕಾಯ'– ಎಂಬ ಶ್ರೀವಾದಿರಾಜತೀರ್ಥರ ಮಾತಿನ ವೈಶಿಷ್ಟ್ಯವನ್ನು ಸಮರ್ಥಿಸಿದರು.

**ಶ್ರೀವಿದ್ಯಾಮಾನ್ಯತೀರ್ಥರ ಸಂಸ್ಮರಣೆ:**

ಅಂದು ಏಕಾದಶೀ ರಾತ್ರಿ 7.00 ಗಂಟೆಗೆ ಸರಿಯಾಗಿ 9 ವರ್ಷಗಳ ಹಿಂದೆ ಮಹಾಪ್ರಸ್ಥಾನ ಕೈಗೊಂಡಿದ್ದ ಶ್ರೀವಿದ್ಯಾಮಾನ್ಯತೀರ್ಥರ ನಿರ್ಯಾಣದ ಸಂಸ್ಮರಣೆಗಾಗಿ ಅವರ ಮೂಲವೃಂದಾವನದ ಸನ್ನಿಧಿಯಲ್ಲಿ ಸಮಾವೇಶಗೊಳ್ಳಲಾಯಿತು. ಶ್ರೀವಿಶ್ವೇಶತೀರ್ಥರೂ, ಶ್ರೀವಿದ್ಯಾಧೀಶತೀರ್ಥರೂ, ಶ್ರೀವಿಶ್ವಪ್ರಸನ್ನತೀರ್ಥರೂ, ಶ್ರೀವಿದ್ಯಾತ್ಮತೀರ್ಥರೂ ಆ ಗುರುಸಂಸ್ಮರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಶ್ರೀವಿಶ್ವೇಶತೀರ್ಥರು ಶ್ರೀವಿದ್ಯಾಮಾನ್ಯತೀರ್ಥರ ಪ್ರೀತ್ಯರ್ಥವಾಗಿ ಯುಕ್ತಿಮಲ್ಲಿಕಾದ ಆಧಾರದಲ್ಲಿ ಭಗವಂತನಲ್ಲಿ ಸ್ವಾಭಾವಿಕ ಹಾಗೂ ಶಾಶ್ವತ ಗುಣ ಪೂರ್ಣತ್ವವನ್ನು ಮಾಧ್ವಸಿದ್ಧಾಂತಾನುಸಾರವಾಗಿಯಷ್ಟೇ ಹೊಂದಿಸಲಾಗುವ ಪ್ರಯುಕ್ತ ಅಂತಹ ಗುಣಪೂರ್ಣತ್ವ ಪೂರ್ವಕವಾದ ಭಕ್ತಿ ಮಧ್ವಸಿದ್ಧಾಂತಪ್ರಕಾರವಷ್ಟೇ ಅರಳಲು ಸಾಧ್ಯ ಎಂದು ಸಾಧಿಸಿದರು.

ಶ್ರೀ ವಿದ್ಯಾಧೀಶತೀರ್ಥರು ಸರ್ವಜ್ಞನಾದ ಭಗವಂತನ ಮನಸ್ಸಿನಲ್ಲಿ ಯಾವಾಗಲೂ ಹಚ್ಚ ಹಸುರಾಗಿ ಮಿಂಚುತ್ತಿರುವುದೆಂದು ವೇದವಾಙ್ಮಯದ ಅಪೌರುಷೇಯತ್ವವನ್ನು ಸಮರ್ಥಿಸುವ ಯುಕ್ತಿಯ ಹಿನ್ನೆಲೆಯಲ್ಲಿ ಮಹಾಭಾರತಾದಿಗಳ ಅಪೌರುಷೇಯತ್ವವನ್ನು ಒಪ್ಪಕೊಳ್ಳದಿರುವುದೇ ಕಷ್ಟಸಾಧ್ಯ ಎಂದು ಯುಕ್ತಿಮಲ್ಲಿಕಾದಲ್ಲಿ ನಿರೂಪಿಸಿರುವುದನ್ನು ಪ್ರಸ್ತಾವಿಸಿ ಅದಕ್ಕೆ ಶ್ರೀವಿದ್ಯಾಮಾನ್ಯತೀರ್ಥರು ನೀಡುತ್ತಿದ್ದ ಸಮಾಧಾನವನ್ನು ವಿವರಿಸಿದರು.

ಶ್ರೀವಿಶ್ವಪ್ರಸನ್ನತೀರ್ಥರು **'ಸ್ಮರಕೃಷ್ಣಂ ಭಜ ಹರಿಂ....'** ಇತ್ಯಾದಿಯಾಗಿ ಶ್ರೀವಾದಿರಾಜಸ್ವಾಮಿಗಳು ತಮ್ಮ ಹಿತೋಪದೇಶದಲ್ಲಿ ನೀಡಿರುವ ಕಿವಿಮಾತನ್ನು ಶ್ರೀವಿದ್ಯಾಮಾನ್ಯತೀರ್ಥರು ಉಪದೇಶಿಸುತ್ತಿದ್ದುದನ್ನು ಗಟ್ಟಿಯಾಗಿ ಪಠಿಸುವ ಮೂಲಕ ನೆನಪಿಸಿಕೊಟ್ಟರು.

ಶ್ರೀವಿದ್ಯಾತ್ಮತೀರ್ಥರು ತಾವು ಸಂಪಾದಿಸಿರುವ 'ವಿಶ್ವಮಾನ್ಯವಿದ್ಯಾಮಾನ್ಯ'-ಎಂಬ ಸ್ಮರಣ ಸಂಚಿಕೆಯಲ್ಲಿ ಪ್ರಯಾಗದ ಸಾಧಕರು ಶ್ರೀವಿದ್ಯಾಮಾನ್ಯತೀರ್ಥರ ಬಗ್ಗೆ ತೋಡಿಕೊಂಡ ಗೌರವಭಾವನೆಯ ತುಣುಕುಗಳನ್ನು ಪ್ರಸ್ತಾವಿಸಿದರು.

ಶ್ರೀವಿದ್ಯಾಮಾನ್ಯತೀರ್ಥರು ಮಹಾಪ್ರಸ್ಥಾನ ಕೈಗೊಂಡಿದ್ದ ಆ ಕ್ಷಣದಲ್ಲಿ ಅವರ ವ್ಯಕ್ತಿತ್ವದ ವಿಕಾಸಕ್ಕೆ ಮುಖ್ಯ ಕಾರಣಗಳಾದ ಶ್ರೀಕೃಷ್ಣ, ಶ್ರೀರಾಮ ಹಾಗೂ ಶ್ರೀ ವ್ಯಾಸ-ಈ ಮೂರು ಭಗವದ್ರೂಪಗಳನ್ನು **'ಶ್ರೀಕೃಷ್ಣಾಯ ನಮಃ ಶ್ರೀ' 'ಶ್ರೀರಾಮಾಯ ನಮಃ ಶ್ರೀ' 'ಶ್ರೀ ವ್ಯಾಸಾಯ**

ನಮಃ ಶ್ರೀ'–ಎಂದು ಸಾಮೂಹಿಕ ಸಂಕೀರ್ತನೆಯೊಂದಿಗೆ ಸ್ಮರಿಸಿಕೊಳ್ಳಲಾಯಿತು.

## ಶೋಭಾಯಾತ್ರೆ ಮತ್ತು ಗುಣಗಾನ:

ಮರುದಿನ ದ್ವಾದಶಿಯಂದು ಶ್ರೀ ವಿದ್ಯಾಮಾನ್ಯತೀರ್ಥರ ಪ್ರತೀಕವಾಗಿರುವ ಶ್ರೀವಿಶ್ವೇಶತೀರ್ಥರಿಗೆ ಅವರ ಪೀಠಾರೋಹರಣ ಸಪ್ತತಿ ಪ್ರಯುಕ್ತ ವೈಭವದ ಸಪ್ತತಿ ಸಮಾರಂಭದಿಂದ ಗೌರವವನ್ನು ಸಮರ್ಪಿಸಿದ ಬಳಿಕ ಸರ್ವಮೂಲ ಗ್ರಂಥಗಳಲ್ಲಿ ಸನ್ನಿಹಿತರಾದ ಶ್ರೀಮಧ್ವರ ಅಂತರ್ಯಾಮಿ ವೇದವ್ಯಾಸನಿಗೆ, ಶ್ರೀವಿದ್ಯಾಮಾನ್ಯತೀರ್ಥರ ಭಾವಚಿತ್ರದಲ್ಲಿ ಸನ್ನಿಹಿತರಾಗಿದ್ದ ಶ್ರೀವಿದ್ಯಾಮಾನ್ಯಾಂತರ್ಗತ ಶ್ರೀರಾಮಚಂದ್ರನಿಗೆ ಮೆರವಣಿಗೆಯನ್ನು ನಡೆಸಲಾಯಿತು.

ಬಳಿಕ ವಾದಿರಾಜ ಉಪಾಧ್ಯಾಯ ಕಡಿಯಾಳಿ, ಕೆ.ಎಂ ಶೇಷಗಿರಿ, ಅನಿಲಾಚಾರ್ಯ ಬೆಂಗಳೂರು, ರಾಮಕೃಷ್ಣ ಕೇಕುಡ, ಡಾ. ಯು.ಕೆ. ಕೃಷ್ಣ ಜಪಾನ್, ವಿ.ಜೆ. ಪ್ಯಾಟಿ ಉಡುಪಿ, ಎ.ಪಿ. ವಿಜಯೀಂದ್ರನ್ ಚೆನ್ನೈ, ಸಮೀರಾಚಾರ್ಯ ಧಾರವಾಡ, ರಾಘವೇಂದ್ರಾಚಾರ್ಯ ಗಂಗೂರ, ಆನಂದತೀರ್ಥಾಚಾರ್ಯ ಮಾಳಗಿ –ಮುಂತಾದವರೆಲ್ಲ ಶ್ರೀವಿದ್ಯಾಮಾನ್ಯತೀರ್ಥರ ಗುಣಗಾನ ನಡೆಸಿದರು.

ಪಲಿಮಾರು ಮಠದ ವೈಚಾರಿಕ ಕಾರ್ಯಕ್ರಮಗಳನ್ನೆಲ್ಲ, ಸರ್ವಮೂಲ ಮಾಸಿಕದ ಲೇಖನಗಳನ್ನೆಲ್ಲ ಅಂತರ್ಜಾಲ ಪ್ರಕ್ರಿಯೆಗೆ ಒಳಪಡಿಸಿ ಜಗತ್ತಿನ ಮೂಲೆ ಮೂಲೆಯ ಸಾಧಕರಿಗೂ ತಲುಪಿಸುವಲ್ಲಿ ಸಮರ್ಥವಾಗಿ ಸೇವೆ ಸಲ್ಲಿಸುತ್ತಿರುವ, ಶ್ರೀಮಠದ ಕಾರ್ಯಕರ್ತ ಹರ್ಷನನ್ನೂ, ಅವನ ಸಹಕಾರಿಗಳನ್ನೂ ಶ್ರೀಪಾದರು ಸಮ್ಮಾನಿಸಿ ಅನುಗ್ರಹಿಸಿದರು.

## ಸಮರ್ಪಣಾ ಸಂದೇಶದೊಂದಿಗೆ ಸಮರ್ಪಿತ

ಸಂಜೆ ಶ್ರೀ ವಿಶ್ವಪ್ರಿಯತೀರ್ಥರು 'ಯದಂತಿ ಯಚ್ಚ ದೂರಕೇ....' ಎಂಬ ಮಂತ್ರದ ಕುರಿತಾಗಿ ನೀಡಿದ ಸಮರ್ಪಣಾ ಸಂದೇಶದೊಂದಿಗೂ, ಶ್ರೀವಿದ್ಯಾಧೀಶತೀರ್ಥರು ಅದಮಾರು ಮಠದ ಶ್ರೀವೇದವ್ಯಾಸರ ಉಪಾಸನೆ ನಡೆಸಿದ್ದ ಕುರಿತಾಗಿ ನಡೆಸಿದ ಶ್ರೀವಿದ್ಯಾಮಾನ್ಯತೀರ್ಥರ ಸಂಸ್ಮರಣೆಯೊಂದಿಗೂ ಸಮಾರಾಧನಾ ಸಮಾರಂಭ ಭಗವದರ್ಪಿತವಾಯಿತು.

★

ವಸಂತೋತ್ಸವ ಸೌರಭ

# ಮರಳಿ ಬಾ ಎಲ್ಲೈ ವಸಂತ ಶಿಬಿರ

–ಕಾವೇಶನಾಭ

ರಜೆ ಬಂದರೆ ಸಾಕು, ಮಜಾ ಮಾಡಲು ಓಡುವ ಮಕ್ಕಳಿಗೆ ಬದುಕಿನ ನಿಜವಾದ ಅರ್ಥವನ್ನು ತಿಳಿಸಲು ಹೊರಟಿತ್ತು ಉಡುಪಿಯ ಪಲಿಮಾರು ಮಠದ ಬೇಸಗೆ ವಸಂತ ಶಿಬಿರ. ಚೈತ್ರ ಕೃಷ್ಣದ್ವಿತೀಯದಂದು (ಎಪ್ರಿಲ್ 11) ಆರಂಭವಾದ ಈ ಶಿಬಿರ, ವೈಶಾಖ ಶುಕ್ಲತೃತೀಯದ ತನಕ (ಎಪ್ರಿಲ್ 27) ಎಡೆಬಿಡದೆ ಸಾಗಿತ್ತು. ಮಧ್ಯಾಹ್ನ 2–45ಕ್ಕೆ ಆರಂಭವಾಗುತ್ತಿದ್ದ ಪಾಠಗಳು ಸಂಜೆ 6–15ಕ್ಕೆ ಅಂತ್ಯವನ್ನು ಕಾಣುತ್ತಿದ್ದವು. ಒಟ್ಟಿಗೆ 11 ತರಗತಿಗಳಿದ್ದವು. ತರಗತಿಗಳ ನಾಲ್ಕು ಅವಧಿಗಳೂ ಪ್ರತಿದಿನವೂ ನಡೆಯುತ್ತಿದ್ದವು. ಬಲರಾಮ ಭಟ್ಟರು, ಲಕ್ಷ್ಮೀಶಾಚಾರ್ಯರು ಈ ಶಿಬಿರದ ಸಾರಥ್ಯವನ್ನು ವಹಿಸಿದ್ದರೆ, ಇತರ ಹತ್ತು, ಹನ್ನೆರಡು ಅಧ್ಯಾಪಕರು ಅದಕ್ಕೆ ಪರಿಪೂರ್ಣ ಸಹಕಾರವನ್ನು ನೀಡಿದ್ದರು. ಆಯೋಜಕತ್ವ ಪಲಿಮಾರು ಮಠದ್ದಾಗಿದ್ದು, ನಡೆದದ್ದು ಸಂಸ್ಕೃತವಿದ್ಯಾಲಯದಲ್ಲಿ. 17 ದಿನಗಳ ಈ ವಸಂತ ಶಿಬಿರದಲ್ಲಿ ಹಲವು ಸಂತರುಗಳೂ ಆಗಮಿಸಿ ಹರಸಿದರು. ಸಂಸ್ಕೃತಪಾಠಶಾಲೆಯ ಪ್ರಾಂಶುಪಾಲರೂ, ಖ್ಯಾತಪ್ರವಚನಕಾರರೂ, ಉತ್ತಮವಾಗ್ಮಿಗಳೂ ಆದ ಡಾ. ಸುರೇಶಾಚಾರ್ಯರು ಮಧ್ವರ ಚರಿತ್ರೆಯನ್ನು ಮಕ್ಕಳಿಗೆ ತಿಳಿಸುತ್ತಾ, ಆಚಾರ್ಯಮಧ್ವರ ಆರಾಧಕರು ನಾವಾಗಬೇಕೆಂದು ತಿಳಿಸಿದರು. ಖ್ಯಾತ ಸಂಗ್ರಹಕಾರರೂ, ಉತ್ತಮ ವಾಕ್ಚತುರರೂ, ಅನುಷ್ಠಾನವಂತರೂ ಆದ ಸಗ್ರಿರಾಘವೇಂದ್ರಾಚಾರ್ಯರು ಕಾಮಾದಿ ಷಡ್ವೈರಿಗಳ ಬಗ್ಗೆ ವಿವರಿಸುತ್ತಾ, ಅವುಗಳಿಗೆ ಬಲಿಯಾದ ಪಾಂಡು, ಗಾಂಧಾರಿ, ಇಂದ್ರ, ದೇವತೆಗಳ ಕಥೆಗಳನ್ನು ಹೇಳುತ್ತಾ, ಅವುಗಳನ್ನು ತ್ಯಜಿಸಬೇಕೆಂದರು, ಒಂದು ದಿನ ಪಲಿಮಾರು ಮಠದ ಶ್ರೀ ಶ್ರೀ ಶ್ರೀ ವಿದ್ಯಾಧೀಶತೀರ್ಥಶ್ರೀಪಾದರು, ತಮ್ಮ ಅನುಗ್ರಹದೃಷ್ಟಿಯನ್ನು ಶಿಬಿರದತ್ತ ಹರಿಸಿ, ಎಲ್ಲರನ್ನೂ ಹರಸಿ, ಹಾರೈಸಿ ತೆರಳಿದರು. ಏಕಾದಶಿಯಿಂದ ಆರಂಭಿಸಿ ಕ್ರಮವಾಗಿ ಮೂರು ದಿನಗಳಲ್ಲಿ ಪೇಜಾವರ ಹಿರಿಯ ಶ್ರೀಪಾದರು, ಅದಮಾರುಮಠದ ಶ್ರೀಪಾದರು, ಪೇಜಾವರ ಕಿರಿಯ ಶ್ರೀಪಾದರು ಆಗಮಿಸಿ, ಕ್ರಮವಾಗಿ ಗಾಯತ್ರೀ, ಬ್ರಾಹ್ಮಣ್ಯ, ಸಂಸ್ಕಾರಗಳ ಬಗ್ಗೆ ವಿವರಿಸಿ, ಎಲ್ಲರನ್ನೂ ಹಾರೈಸಿದರು. ಸುಮಾರು 10 ರೀತಿಯ ವಿವಿಧ ಸ್ಪರ್ಧೆಗಳನ್ನು ಮಕ್ಕಳಿಗೆ ಏರ್ಪಡಿಸಲಾಗಿತ್ತು. ಕೊನೆಯ ದಿನವಾದ 27ರಂದು ಪಲಿಮಾರು ಶ್ರೀಗಳು ಆಗಮಿಸಿದ್ದರು.

ಅವರೊಂದಿಗೆ ಪೂರ್ಣಪ್ರಜ್ಞವಿದ್ಯಾಪೀಠದ ಪ್ರಾಂಶುಪಾಲರಾದ ಹರಿದಾಸಭಟ್ಟರು, ಸಾಧಕರಾದ ರಾಮಕೃಷ್ಣಕೇಕುಡರೂ ಆಗಮಿಸಿದ್ದರು. ಈ ವಿದ್ವಾಂಸರಿಬ್ಬರ ಪ್ರವಚನಗಳು ಕೇಳುಗರ ಮನತಟ್ಟಿಮುಟ್ಟಿತ್ತು. ನಂತರ ಶ್ರೀಪಾದರೂ, ವಿದ್ವಾಂಸರೂ ಸೇರಿ ಬಹುಮಾನ ವಿತರಣಾಕಾರ್ಯಕ್ರಮವೂ ಜರಗಿತ್ತು. ನಂತರ ಶ್ರೀಪಾದರು ಮಾತಾಡುತ್ತಾ, **'ಸಂಸ್ಕಾರರಹಿತ ಜೀವನ ಸತ್ತ್ವವಿಲ್ಲದ ಪದಾರ್ಥದಂತೆ'** ಎಂದು ವಿವರಿಸುತ್ತಾ, ವಿಶೇಷವಾಗಿ ಗಂಡುಮಕ್ಕಳಿಗೆ ಸಂಧ್ಯಾವಂದನೆಯೂ, ಹೆಣ್ಮಕ್ಕಳಿಗೆ ಗೃಹಸಂಸ್ಕಾರವೂ ಅತ್ಯಗತ್ಯ ಎಂದು ವಿವರಿಸಿದರು. ಸಂಸ್ಕಾರರಹಿತ ಜೀವನ ಸತ್ವವಿಲ್ಲದ ಪದಾರ್ಥದಂತೆ. ಬ್ರಾಹ್ಮಣವಟುಗಳಿಗೆ ಮುಖ್ಯವಾದ ಸಂಸ್ಕಾರ ಎಂದರೆ ಸಂಧ್ಯಾವಂದನೆ. ಬ್ರಾಹ್ಮಣನೆನಿಸಿಕೊಳ್ಳಲು ಅನೇಕ ಆಚರಣೆಗಳು ಶಾಸ್ತ್ರದಲ್ಲಿ ವಿಧಿಸಲ್ಪಟ್ಟಿವೆಯಾದರೂ **'ಮೈತ್ರೋ ಬ್ರಾಹ್ಮಣ ಉಚ್ಯತೇ'**- ಎಂದಿರುವಂತೆ ಬ್ರಾಹ್ಮಣ ಎನಿಸಿಕೊಳ್ಳಲು ಕನಿಷ್ಠ ಆಚರಣೆ ಗಾಯತ್ರೀಮಂತ್ರ ಜಪವನ್ನೊಳಗೊಂಡ ಸಂಧ್ಯಾವಂದನೆ. ಆದುದರಿಂದ ಸಂಧ್ಯಾವಂದನೆಯನ್ನು ಪ್ರತಿಯೊಬ್ಬ ಬ್ರಾಹ್ಮಣನೂ ತಪ್ಪದೆ ನಡೆಸಬೇಕು.

ಬ್ರಾಹ್ಮಣ ಹುಡುಗಿಯರು ಮನೆಯಲ್ಲಿ ಧಾರ್ಮಿಕ ವಾತಾವರಣ ಹರಡಲು ಬೇಕಾದ ಲಕ್ಷ್ಮೀಶೋಭಾನ ಹಾಡುವಿಕೆ, ಹೂ ಕಟ್ಟುವುದು, ರಂಗವಲ್ಲಿ ಬಿಡಿಸುವುದು ಮುಂತಾದ ಆಚರಣೆಗಳನ್ನು ನಡೆಸಬೇಕಾಗಿದ್ದು ಅದಕ್ಕೆ ಆವಶ್ಯಕವಾದ ಸಂಸ್ಕಾರವನ್ನು ಇಲ್ಲಿಂದ ಪಡೆದುಕೊಳ್ಳುವಂತಾಗಬೇಕು ಎಂದು ಶ್ರೀಪಾದರು ತಿಳಿಸಿದರು. ಶಿಬಿರದ ನಡುನಡುವೆ ಮಠದ ವ್ಯವಸ್ಥಾಪಕರಾದ ಬಲರಾಮಭಟ್ಟರೂ, ಕಾರ್ಯದರ್ಶಿಗಳಾದ ಲಕ್ಷ್ಮೀಶಾಚಾರ್ಯರೂ ಹಿತವಚನಗಳನ್ನು ನೀಡುತ್ತಲೇ ಬಂದಿದ್ದರು. ನಂತರ ಶಿಬಿರಕ್ಕೆ ಆರ್ಥಿಕ ಸಹಕಾರ ನೀಡಿದವರನ್ನು ಸನ್ಮಾನಿಸಲಾಯಿತು. ವಾಸುದೇವ ಉಪಾಧ್ಯಾಯರ ಧನ್ಯವಾದ ಸಮರ್ಪಣೆಗಳೊಂದಿಗೆ ಅಂದಿನ ಕಾರ್ಯಕ್ರಮ ಮುಕ್ತಾಯಗೊಂಡಿತು.

**ಶಿಬಿರದ ಉದ್ದೇಶ:**

ಬ್ರಾಹ್ಮಣ ಗಂಡು ಹಾಗೂ ಹೆಣ್ಣು ಮಕ್ಕಳಲ್ಲಿ ಬಾಲ್ಯದಿಂದಲೇ ಪ್ರಬಲವಾದ ಸಂಸ್ಕಾರವನ್ನು ಬೇರೂರಿಸಬೇಕೆಂಬ ಘನ ಉದ್ದೇಶದಿಂದ ಸುಮಾರು ಹದಿನೈದು ವರ್ಷಗಳಿಂದ ಶ್ರೀಮಠದ ಆಶ್ರಯದಲ್ಲಿ ಶಿಬಿರವನ್ನು ನಡೆಸಿಕೊಂಡು ಬಂದಂತೆ ಈ ಬಾರಿಯೂ ನಡೆಸಲಾಗಿದ್ದು ಹಿಂದಿನ ವರ್ಷಗಳ ಶಿಬಿರಗಳಂತೆ ಈ ಬಾರಿಯ ಶಿಬಿರವೂ ತನ್ನ ಉದ್ದೇಶವನ್ನು ಈಡೇರಿಸುವಲ್ಲಿ ಯಶಸ್ವಿಯಾಗಿತ್ತು. ಶಿಬಿರದಲ್ಲಿ ಪಾಲ್ಗೊಂಡ ಅಭ್ಯರ್ಥಿಗಳೂ ಸಾರ್ಥಕತೆಯ ಭಾವವನ್ನು ಹೊಂದಿದ್ದರು. ★

ಪ್ರಶ್ನೋತ್ತರ–ಪದಬಂಧ

# ನೆನಪಿನ ಅಂಗಳ

–ವಿ॥ ಶಂಕರನಾರಾಯಣಾಚಾರ್ಯ

1. ಸೂರ್ಯನ ಬೆಳಕು ನೀಡುವ ಜೀವಸತ್ವ ಯಾವುದು?
2. ಮೀನುಗಳು ಯಾವುದರ ಮೂಲಕ ಉಸಿರಾಡುತ್ತವೆ?
3. ಮೃಗಪಕ್ಷಿಗಳ ಹೆಸರನ್ನು ಸ್ತೂಪಗಳ ಮೇಲೆ ಕೆತ್ತಿಸಿದ ದೊರೆ ಯಾರು?
4. ನೀಲಗಿರಿಮರದ ಉಗಮದೇಶ ಯಾವುದು?
5. ಕರ್ನಾಟಕದ ಪ್ರಸಿದ್ಧ ಪಕ್ಷಿಧಾಮ ಯಾವುದು?
6. ನಾಗರಹೊಳೆ ಅಭಯಾರಣ್ಯ ಯಾವ ಜಿಲ್ಲೆಯಲ್ಲಿದೆ?
7. ಪಕ್ಷಿಗಳನ್ನು ಬಿಟ್ಟರೆ ರೆಕ್ಕೆಗಳಿರುವುದು ಯಾವುದಕ್ಕೆ?
8. "ಹೆಬ್ಬಲಸು" ಹಣ್ಣಿನಿಂದ ಸೂಚಿತವಾದ ಶ್ರೀಮಧ್ವಾಚಾರ್ಯರಕಾಲದ ಪ್ರಸಿದ್ದ ವಂಶ?
9. ಮಣ್ಣು ಯಾವಾಗ ಹುಳಿಯಾಗುತ್ತದೆ?
10. ಹಣ್ಣುಗಳ ರಾಜ ಯಾರು?

## ಪದ ಬಂಧದ ಉತ್ತರ

1) 12 2) ನೆಲ್ಸನ್ ಮಂಡೇಲಾ & ಅಬ್ದುಲಗಫರ್ ಖಾನ್ 3) 11 ತಿಂಗಳು

4) ಲಿಥಿಯಮ್ 5) 21–05–1991 6) ಡಿಂಪಲ್ ಕಪಾಡಿಯಾ

7) ವ್ಯಾಟಿಕನ್ 8) ನೊಬೆಲ್ 9) ಈಜಿಪ್ಟ್ 10) ದಿ ಗ್ರೇಟ್ ರಾಬರಿ

| | | | | | | |
|---|---|---|---|---|---|---|
| 1 ಗ | ರಿ | 2 ಜಾ | ■ | 3 ರ | 4 ಮ | ಣ |
| ರಿ | ■ | ಲ | ■ | ■ | 5 ದ | ರ |
| 6 ಕ | ಸ | ದ | ಬೆ | ಲೆ | ■ | 7 ಮ |
| ನ್ಯೆ | ■ | ಮೀ | ■ | 8 ಕ | ರ | ■ |
| ■ | 9 ಮಾ | ನು | ಷ | ■ | 10 ಹ | 11 ಬ |
| ■ | ಧ | ■ | ■ | 12 ಪಿ | ಡೋ | ಧಿ |
| 13 ಅ | ವ | ರ | ಜ | ■ | 14 ಹ | ರ |

## ಎಡದಿಂದ ಬಲಕ್ಕೆ:

1. ಕಪ್ಪು ಮೋಡದಂತಿರುವವ (6)
7) ವಿದ್ಯೋಪದೇಶಕ (2)
8) ಲಕುಮೀ ವಿರೋಧಿ ಈ ವೃಕ್ಷ (2)
10) ಹೊತ್ತುವಿಕೆ (3)
11) ಈ ಸಂಖ್ಯೆ ಪೂರ್ಣಾರ್ಥಸೂಚಕ (2)
13) ಮನ್ಮಥ ಅತ್ತಲಿಂದಿತ್ತ ಬಂದಿದ್ದಾನೆ (2)

| | | | | | |
|---|---|---|---|---|---|
| 1 | 2 | 3 | 4 | 5 | 6 |
| | 7 | | | 8 | |
| | | | | | 9 |
| 10 | | | 11 | | 12 |
| | | | 13 | | |
| | | | | | |

ಉತ್ತರ ಮುಂದಿನ ಸಂಚಿಕೆಯಲ್ಲಿ

## ಮೇಲಿನಿಂದ ಕೆಳಕ್ಕೆ:

1) ಮಹಿಳೆ ತಂದ ಜಲ (ಕನ್ನಡದಲ್ಲಿ) (6)
2) ಕೋಲಿನಿಂದ ಪೆಟ್ಟು ತಿಂದವ (6)
3) ಬಂಗಾರಪರ್ವತಾತ್ಮಜ (6)
4) ದೊಡ್ಡ ದೇಹ (6)
5) ಕಪ್ಪು ಕಪ್ಪಾದ ತನುವುಳ್ಳವ (6)
6) ಪಚ್ಚೆ ಲೋಹದ ಬಣ್ಣ (6)
9) ‘ಆದಾಯ’ ತಿರುಗಿದೆ (2)
12) ‘ನಿನಗೆ’ ಎಂದು ಸಂಸ್ಕೃತದಲ್ಲಿ ಹೇಳಿ (2)